ಗುತ್ತಿಗೆದಾರರು ಸೂಚಿಸಿರುವ ದರಗಳನ್ನು ಕಡಿಮೆಗೊಳಿಸುವ ಸಲುವಾಗಿ ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲು ದಿನಾಂಕ : 29–5–2010 ರಂದು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯ ಸಭೆಯನ್ನು ಕರೆಯಲಾಗಿತ್ತು. ಸಭೆಯಲ್ಲಿ ಗುತ್ತಿಗೆದಾರರ ಮನವಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿದಾಗ ಪರಿಷ್ಕರಿಸಿದ ಟೆಂಡರಿಗಿಡಲಾದ ಮೊತ್ತ ರೂ. 24,46,540/–ಗಳ ಮೇಲೆ ಶೇಕಡ 12.50 ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ. 27,52,358/–ಗಳಿಗೆ ಕಾಮಗಾರಿಯನ್ನು ಶ್ರೀ ಪಿ. ರಾಮಸ್ವಾಮಿ, 1ನೇ ದರ್ಜೆ ಗುತ್ತಿಗೆದಾರರಿಗೆ ವಹಿಸುವಂತೆ ಶಿಫಾರಸ್ಸು ಮಾಡಲು ಸಭೆಯನ್ನು ತೀರ್ಮಾನಿಸಲಾಯಿತು. ಈ ನಿರ್ಧಾರಕ್ಕೆ ಗುತ್ತಿಗೆದಾರರು ತಮ್ಮ ಒಪ್ಪಿಗೆಯನ್ನು ಸೂಚಿಸಿರುವುದಾಗಿ ತಿಳಿಸಿ ಈ ಮೊತ್ತಕ್ಕೆ ಟೆಂಡರ್ ಅಂಗೀಕರಿಸಲು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯು ಮೇಲೆ 2ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸನೀಇ 20 ಅಪಿಬಂ 2010, ಬೆಂಗಳೂರು, ದಿನಾಂಕ : 27ನೇ ಜುಲೈ 2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಹಾವೇರಿ ಜಿಲ್ಲೆ ಹಾಗೂ ತಾಲ್ಲೂಕಿನ ಶಾಖಾರ ಗ್ರಾಮದ ಹತ್ತಿರ ಹರಿಜನ ಕೇರಿಯಿಂದ ತುಂಗಭದ್ರಾ ನದಿಗೆ ಸೇರುವ ಹಳ್ಳಕ್ಕೆ ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿದಾಗ ಪರಿಷ್ಕರಿಸಿದ ಟೆಂಡರಿಗಿಡಲಾದ ಮೊತ್ತ ರೂ. 24,46,540/– ಗಳ ಮೇಲೆ ಶೇಕಡ 12.50 ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ. 27,52,358/–ಗಳಿಗೆ (ಇಪ್ಪತ್ತೇಳು ಲಕ್ಷದ ಐವತ್ತೆರಡು ಸಾವಿರದ ಮುನ್ನೂರ ಐವತ್ತೆಂಟು ರೂ.ಗಳು ಮಾತ್ರ) ಶ್ರೀ ವಿ. ರಾಮಸ್ವಾಮಿ, 1ನೇ ದರ್ಜೆ ಗುತ್ತಿಗೆದಾರರಿಗೆ ಕೆಳಕಂಡ ಷರತ್ತುಗಳೊಂದಿಗೆ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.
3. ಅಸಹಜ ದರಗಳನ್ನು ಸಮನ್ವಯಪಡಿಸಿಕೊಳ್ಳುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ : ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ : 20–1–2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
(ರುದ್ರಮೂರ್ತಿ)
ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ,
ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ. ಆರ್. 2052

ಜಲ ಸಂಪನ್ಮೂಲ ಸಚಿವಾಲಯ

ವಿಷಯ : ಧಾರವಾಡ ಜಿಲ್ಲೆ ಹುಬ್ಬಳ್ಳಿ ತಾಲ್ಲೂಕಿನ ಛಬ್ಬಿ ಗ್ರಾಮದ ಹತ್ತಿರ ಹಳ್ಳಕ್ಕೆ ಅಡ್ಡಲಾಗಿ ಪಿಕಪ್ ನಿರ್ಮಾಣ ಕಾಮಗಾರಿಯ ಟೆಂಡರನ್ನು ಅನುಮೋದಿಸುವ ಬಗ್ಗೆ.

ಓದಲಾಗಿದೆ :
1. ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರ ಪತ್ರದ ಸಂಖ್ಯೆ : ಮುಇಂ/ಸನೀ (ಉ)ವಲಯ/ ಬಿಜೆಪಿ/ಎ.ಇ.–3/2009–10/1371, ದಿನಾಂಕ : 6–3–2010.
2. ಅಧ್ಯಕ್ಷರು, ಟೆಂಡರ್ ಪರಿಶೀಲನಾ ಸಮಿತಿ, ಸಣ್ಣ ನೀರಾವರಿ ಇಲಾಖೆ ಹಾಗೂ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ದಕ್ಷಿಣ) ವಲಯ, ಬೆಂಗಳೂರು ರವರ ದಿನಾಂಕ : 5–6–2010ರ ಪತ್ರ ಸಂಖ್ಯೆ : ಮುಸದ/ಆಪ್ತಶಾಖೆ/ಟೆಂಡರ್/ 9–10/1875.

ಪ್ರಸ್ತಾವನೆ :

ಧಾರವಾಡ ಜಿಲ್ಲೆ ಹುಬ್ಬಳ್ಳಿ ತಾಲ್ಲೂಕಿನ ಛಬ್ಬಿ ಗ್ರಾಮದ ಹತ್ತಿರ ಹಳ್ಳಕ್ಕೆ ಅಡ್ಡಲಾಗಿ ಪಿಕಪ್ ನಿರ್ಮಾಣ ಕಾಮಗಾರಿಯ 25.00 ಲಕ್ಷ ರೂ.ಗಳ ಅಂದಾಜು ಪಟ್ಟಿಗೆ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರು ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಧಾರವಾಡ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಅಲ್ಪಾವಧಿ ಟೆಂಡರ್‌ನ ಪ್ರಕಟಣೆಯನ್ನು ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ಜಿಲ್ಲಾ ಟೆಂಡರ್ ಬುಲೆಟಿನ್	26–12–2009
ವಿಜಯ ಕರ್ನಾಟಕ / ಸಂಯುಕ್ತ ಕರ್ನಾಟಕ ದಿನಪತ್ರಿಕೆ	6–1–2010

ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಇಬ್ಬರು ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಿರುವುದಾಗಿ ವರದಿಯಾಗಿದೆ. ಸದರಿ ಗುತ್ತಿಗೆದಾರರ ಟೆಂಡರ್‌ನ್ನು ದಿನಾಂಕ 21–1–2010ರಂದು ತೆರೆದು ಪರಿಶೀಲಿಸಲಾಗಿದ್ದು ಈ ಪೈಕಿ ಒಬ್ಬರು ಗುತ್ತಿಗೆದಾರರ ಟೆಂಡರ್ ಮಾತ್ರ ಅರ್ಹವಾಗಿದ್ದು ಸದರಿಯವರ ಟೆಂಡರ್‌ನ ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ	ರೂ. 22,01,774/–
ಪ್ರಸ್ತಕ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ	ರೂ. 21,29,412/–

ಕ್ರಮ ಸಂಖ್ಯೆ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ	ಪ್ರಸಕ್ತ ಸಾಲಿಗೆ ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
1	ವಿಜಯರಾಜ ರಘುರಾಮಶೆಟ್ಟಿ, ಒಂದನೇ ದರ್ಜೆ ಗುತ್ತಿಗೆದಾರರು	23,54,073/–	6.917 ಹೆಚ್ಚು	10.55 ಹೆಚ್ಚು

ಮೇಲ್ಕಂಡಂತೆ ಶ್ರೀ ವಿಜಯರಾಜ ರಘುರಾಮಶೆಟ್ಟಿ, 1ನೇ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 10.55 ರಷ್ಟು ಹೆಚ್ಚಾಗಿದ್ದು, ಈ ಮೊತ್ತಕ್ಕೆ ಸದರಿಯವರ ಟೆಂಡರ್‌ನ್ನು ಅಂಗೀಕರಿಸಲು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಮೇಲೆ (1)ರಲ್ಲಿ ಓದಲಾದ ಪತ್ರದಲ್ಲಿ ಸರ್ಕಾರದ ಅನುಮೋದನೆ ಕೋರಿರುತ್ತಾರೆ.

ಗುತ್ತಿಗೆದಾರರು ಸೂಚಿಸಿರುವ ದರಗಳನ್ನು ಕಡಿಮೆಗೊಳಿಸುವ ಸಲುವಾಗಿ ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲು ದಿನಾಂಕ : 29–5–2010 ರಂದು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯ ಸಭೆಯನ್ನು ಕರೆಯಲಾಗಿತ್ತು. ಸಭೆಯಲ್ಲಿ ಗುತ್ತಿಗೆದಾರರ ಮನವಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿದಾಗ ಪರಿಷ್ಕರಿಸಿದ ಟೆಂಡರಿಗಿಡಲಾದ ಮೊತ್ತ ರೂ. 21,29,412/–ಗಳ ಮೇಲೆ ಶೇಕಡ 9.50 ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ. 23,31,706/–ಗಳಿಗೆ ಕಾಮಗಾರಿಯನ್ನು ಶ್ರೀ ವಿಜಯರಾಜ ರಘುರಾಮಶೆಟ್ಟಿ, 1ನೇ ದರ್ಜೆ ಗುತ್ತಿಗೆದಾರರಿಗೆ ವಹಿಸುವಂತೆ ಶಿಫಾರಸ್ಸು ಮಾಡಲು ಸಭೆಯನ್ನು ತೀರ್ಮಾನಿಸಲಾಯಿತು. ಈ ನಿರ್ಧಾರಕ್ಕೆ ಗುತ್ತಿಗೆದಾರರು ತಮ್ಮ ಒಪ್ಪಿಗೆಯನ್ನು ಸೂಚಿಸಿರುವುದಾಗಿ ತಿಳಿಸಿ ಈ ಮೊತ್ತಕ್ಕೆ ಟೆಂಡರ್ ಅಂಗೀಕರಿಸಲು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯು ಮೇಲೆ 2ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸನೀಇ 18 ಅಪಿಬಂ 2010, ಬೆಂಗಳೂರು, ದಿನಾಂಕ : 27ನೇ ಜುಲೈ 2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಧಾರವಾಡ ಜಿಲ್ಲೆ ಹುಬ್ಬಳ್ಳಿ ತಾಲ್ಲೂಕಿನ ಛಬ್ಬಿ ಗ್ರಾಮದ ಹತ್ತಿರ ಹಳ್ಳಕ್ಕೆ ಅಡ್ಡಲಾಗಿ ಪಿಕಪ್ ನಿರ್ಮಾಣ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದ ಟೆಂಡರಿಗಿಡಲಾದ ಮೊತ್ತ ರೂ. 21,29,412/–ಗಳ ಮೇಲೆ ಶೇಕಡ 9.50 ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ. 23,31,706/–ಗಳಿಗೆ (ಇಪ್ಪತ್ತಮೂರು ಲಕ್ಷದ ಮೂವತ್ತೊಂದು ಸಾವಿರದ ಏಳುನೂರ ಆರು ರೂ.ಗಳು ಮಾತ್ರ) ಶ್ರೀ ವಿಜಯರಾಜ ರಘುರಾಮಶೆಟ್ಟಿ, 1ನೇ ದರ್ಜೆ ಗುತ್ತಿಗೆದಾರರಿಗೆ ಕೆಳಕಂಡ ಷರತ್ತುಗಳೊಂದಿಗೆ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.
3. ಅಸಹಜ ದರಗಳನ್ನು ಸಮನ್ವಯಪಡಿಸಿಕೊಳ್ಳುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ : ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ : 20–1–2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

(ರುದ್ರಮೂರ್ತಿ)

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ,

ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ. ಆರ್. 2053

ಜಲ ಸಂಪನ್ಮೂಲ ಸಚಿವಾಲಯ

ವಿಷಯ : ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು ತಾಲ್ಲೂಕಿನ ಜಪ್ಪಿನ ಮೊಗರು ಗ್ರಾಮದ ಕಡೇಕಾರು ಮಲ್ಲಿಕಾರ್ಜುನ ದೇವಸ್ಥಾನದ ಕೆರೆ ಅಭಿವೃದ್ಧಿ ಕಾಮಗಾರಿಯ ಟೆಂಡರನ್ನು ಅನುಮೋದಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ : ಸನೀಇ 14 ಮಸಾವಿ 2009 (2), ದಿನಾಂಕ : 28–2–2009
2. ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ ಬೆಂಗಳೂರುರವರ ಪತ್ರದ ಸಂಖ್ಯೆ : ಮುಸದ/ತಾಂಸ–5/ ಸಿಂ–11/ದಕ/ಮಂಗಳೂರು ತಾ/ಮಲ್ಲಿಕಾರ್ಜುನ ದೇವಸ್ಥಾನ ಕೆರೆ/ಟೆಂಡರ್ ಅನುಮೋದನೆ/2010/1791, ದಿನಾಂಕ:26–5–2010.
3. ಅಧ್ಯಕ್ಷರು, ಟೆಂಡರ್ ಪರಿಶೀಲನಾ ಸಮಿತಿ, ಸಣ್ಣ ನೀರಾವರಿ ಇಲಾಖೆ ಹಾಗೂ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ದಕ್ಷಿಣ) ವಲಯ, ಬೆಂಗಳೂರುರವರ ದಿನಾಂಕ:5–6–2010ರ ಪತ್ರ ಸಂಖ್ಯೆ : ಮುಸದ/ಆಪ್ತಶಾಖೆ/ಟೆಂಡರ್/9–10/1875.

ಪ್ರಸ್ತಾವನೆ :

ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು ತಾಲ್ಲೂಕಿನ ಜಪ್ಪಿನ ಮೊಗರು ಗ್ರಾಮದ ಕಡೇಕಾರು ಮಲ್ಲಿಕಾರ್ಜುನ ದೇವಸ್ಥಾನದ ಕೆರೆ ಅಭಿವೃದ್ಧಿ ಕಾಮಗಾರಿಯ 45.00 ಲಕ್ಷ ರೂ.ಗಳ ಅಂದಾಜು ಪಟ್ಟಿಗೆ ಮೇಲೆ ಓದಲಾದ ದಿನಾಂಕ : 28–2–09 ರ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿದ್ದು, ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ ಬೆಂಗಳೂರುರವರು ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಕರೆಯಲಾದ ಮೊದಲ ಎರಡು ಟೆಂಡರ್ ಕರೆಗಳಿಗೆ ಯಾವುದೇ ಪ್ರತಿಕ್ರಿಯೆ ದೊರೆತಿರುವುದಿಲ್ಲಾ. ನಂತರ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮೂರನೆ ಬಾರಿಗೆ ಅಲ್ಪಾವಧಿ ಟೆಂಡರ್ ಕರೆಯಲಾಗಿದ್ದು ಈ ಪ್ರಕಟಣೆಯನ್ನು ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ಜಿಲ್ಲಾ ಟೆಂಡರ್ ಬುಲೆಟಿನ್	12–4–2010
ಉದಯವಾಣಿ/ ವಾರ್ತಾಭಾರತಿ ದಿನಪತ್ರಿಕೆ	7–4–2010

ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಒಬ್ಬರು ಗುತ್ತಿಗೆದಾರರು ಮಾತ್ರ ಟೆಂಡರ್‌ನಲ್ಲಿ ಭಾಗವಹಿಸಿರುವುದಾಗಿ ವರದಿಯಾಗಿದೆ. ಸದರಿ ಗುತ್ತಿಗೆದಾರರ ಟೆಂಡರ್‌ನ್ನು ದಿನಾಂಕ 22–4–2010ರಂದು ತೆರೆದು ಪರಿಶೀಲಿಸಲಾಗಿದ್ದು ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಹಾಗೂ ಪ್ರಸ್ತಕ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ			ರೂ. 42,46,425/–
ಕ್ರಮ ಸಂಖ್ಯೆ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ಹಾಗೂ ಪ್ರಸಕ್ತ ಸಾಲಿಗೆ ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
1	ಕೆ.ಎಂ. ಮೂಸಾ, ಒಂದನೇ ದರ್ಜೆ ಗುತ್ತಿಗೆದಾರರು	55,20,138/–	29.99 ಹೆಚ್ಚು

ಮೇಲ್ಕಂಡಂತೆ ಶ್ರೀ ಕೆ.ಎಂ. ಮೂಸಾ, 1ನೇ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 22.99 ರಷ್ಟು ಹೆಚ್ಚಾಗಿದ್ದು, ಈ ಮೊತ್ತಕ್ಕೆ ಸದರಿಯವರ ಟೆಂಡರ್‌ನ್ನು ಅಂಗೀಕರಿಸಲು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ, ಬೆಂಗಳೂರು ಇವರು ಮೇಲೆ (2)ರಲ್ಲಿ ಓದಲಾದ ಪತ್ರದಲ್ಲಿ ಸರ್ಕಾರದ ಅನುಮೋದನೆ ಕೋರಿರುತ್ತಾರೆ.

ಗುತ್ತಿಗೆದಾರರು ಸೂಚಿಸಿರುವ ದರಗಳನ್ನು ಕಡಿಮೆಗೊಳಿಸುವ ಸಲುವಾಗಿ ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲು ದಿನಾಂಕ : 29–5–2010 ರಂದು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯ ಸಭೆಯನ್ನು ಕರೆಯಲಾಗಿತ್ತು. ಸಭೆಯಲ್ಲಿ ಗುತ್ತಿಗೆದಾರರ ಮನವಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಮಂಜೂರಾದ ಅಂದಾಜಿನ ಹಾಗೂ ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಟೆಂಡರಿಗಿಡಲಾದ ಮೊತ್ತ ರೂ. 42,46,425/–ಗಳ ಮೇಲೆ ಶೇಕಡ 14.50 ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ. 48,62,157/–ಗಳಿಗೆ ಕಾಮಗಾರಿಯನ್ನು ಶ್ರೀ ಕೆ.ಎಂ. ಮೂಸಾ, 1ನೇ ದರ್ಜೆ ಗುತ್ತಿಗೆದಾರರಿಗೆ ವಹಿಸುವಂತೆ ಶಿಫಾರಸ್ಸು ಮಾಡಲು ಸಭೆಯನ್ನು ತೀರ್ಮಾನಿಸಲಾಯಿತು. ಈ ನಿರ್ಧಾರಕ್ಕೆ ಗುತ್ತಿಗೆದಾರರು ತಮ್ಮ ಒಪ್ಪಿಗೆಯನ್ನು ಸೂಚಿಸಿರುವುದಾಗಿ ತಿಳಿಸಿ ಈ ಮೊತ್ತಕ್ಕೆ ಟೆಂಡರ್ ಅಂಗೀಕರಿಸಲು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯು ಮೇಲೆ 3ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸನೀಇ 28 ಕೆಜಿದು 2010, ಬೆಂಗಳೂರು, ದಿನಾಂಕ : 27ನೇ ಜುಲೈ 2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು ತಾಲ್ಲೂಕಿನ ಜಪ್ಪಿನ ಮೊಗರು ಗ್ರಾಮದ ಕಡೇಕಾರು ಮಲ್ಲಿಕಾರ್ಜುನ ದೇವಸ್ಥಾನ ಕೆರೆ ಅಭಿವೃದ್ಧಿ ಕಾಮಗಾರಿಯನ್ನು ಮಂಜೂರಾದ ಅಂದಾಜಿನ ಹಾಗೂ ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಟೆಂಡರಿಗಿಡಲಾದ ರೂ. 42,46,425/– ಗಳ ಮೇಲೆ ಶೇಕಡ 14.50 ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ. 48,62,157/–ಗಳಿಗೆ (ನಲವತ್ತೆಂಟು ಲಕ್ಷದ ಅರವತ್ತೆರಡು ಸಾವಿರದ ನೂರ ಐವತ್ತೇಳು ರೂ.ಗಳು ಮಾತ್ರ) ಶ್ರೀ ಕೆ.ಎಂ. ಮೂಸಾ, 1ನೇ ದರ್ಜೆ ಗುತ್ತಿಗೆದಾರರಿಗೆ ಕೆಳಕಂಡ ಷರತ್ತುಗಳೊಂದಿಗೆ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.
3. ಅಸಹಜ ದರಗಳನ್ನು ಸಮನ್ವಯಪಡಿಸಿಕೊಳ್ಳುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ : ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ : 20–1–2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

(ರುದ್ರಮೂರ್ತಿ)

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ,

ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ. ಆರ್. 2054

ENERGY SECRETARIAT

Sub: Enhancement of the capacity of Co-generation Power Plant from 10.5 MW to 29.8 MW in favour of M/s Jamkhandi Sugars Limited-reg.

Read: 1. Government Letter No. DE 27 NCE 1998, dated : 31-7-1998.

2. Letters No. KRED/04/JSL/10/2025, dated : 6-7-2010 and KRED/04/JSL/10/2097, dated : 12/13-7-2010 received from the Managing Director, Karnataka Renewable Energy Development Limited, Bangalore.

PREAMBLE:

In the Government letter dated : 31-7-1998 read at (1) above, “No objection of Government of Karnataka” was given to M/s Jamkhandi Sugar Mills Limited for setting up of a 10.5 MW (Gross) and 6.5 MW (exportable) capacity Co-generation Power Plant at Hirepadasalagi Village, Jamkhandi Taluk, subject to certain conditions.

The Managing Director, Karantaka Renewable Energy Development Limited, Bangalore, in his letters read at (2) above has stated that since M/s Jamkhandi Sugars Limited is located in the Krishna belt, which is most ideal basin for growing rich varieties of Sugarcane to achieve highest recovery, company has planned to expand the sugar factory from 2500 TCD to 5000 TCD. He has recommended to enhance the Co-generation Power Plant capacity from 10.5 MW to 29.8 MW in favour of M/s Jamkhandi Sugars Limited at Hirepadasalagi Village, Jamkhandi Taluk, Bagalkot District.

The proposal has been examined in detail and issued following Order :-

GOVERNMENT ORDER NO: EN 280 NCE 2010, BANGALORE DATED; 29.07.2010

Government accords approval for the enhancement of the Co-gereration Power Plant capacity from 10.5 MW to 29.8 MW in favour of M/s Jamkhandi Sugars Limited at Hirepadasalagi Village, Jamkhandi Taluk, Bagalkot District.

The other conditions of the Govenrment letter read at (1) above shall IPSO FACTO applicable.

By Order and in the name of the Governor of Karnataka

(**S.J. Sampath Kumar)**

Under Secretary to Government,

Energy Department

P.R. 2055

COMMERCE & INDUSTRIES SECRETARIAT

Sub: Approval to the Project Proposal of M/s. Luxor Power Pvt. Ltd., to establish a **“2x507 MW Gas Based combined Cycle Power Plant”** at Maranahole Village, Uchagoan Hobli, Belgaum Taluk & District-Change of Location.

Read: 1. Govt. Order No. CI 186 SPI 2010, 2-6-2010.

2. Letter dated : 29-6-2010, from Authorised Signatory, Luxor Power Pvt. Ltd.

PREAMBLE:

The Proposal M/s. Luxor Power Pvt. Ltd., to establish a **“2x507 MW Gas Based combined Cycle Power Plant”** at Maranahole Village, Uchagoan Hobli, Belgaum Taluk & District, with an investment of Rs. 4040.60 crores, generating employment to about 2200 persons, was approved in the 22nd State High Level Clearance Committee (SHLCC) Meting held on 24-5-2010, and Govt. Order read at (1) above was issued.

The company in the letter dated 29-6-2010 read at (2) has requested to change the location of the Proposed Power Project from Maranahole Village, Uchagoan Hobli, Belgaum Taluk & District to Arbavi Village, Gokak Taluk, Belgaum District, which is very close to Ghataprabha River and Gas tapping station at Palamdinni Village, Gokak Taluk.

Hence the following Order.

GOVERNMENT ORDER NO: CI 186 SPI 2010, BANGALORE DATED; 27.07.2010

Government is pleased to accord approval to the change of location from Maranahole Village, Uchagoan Hobli, Belgaum Taluk & District, to Arbavi Village, Gokak Taluk, Belgaum District to establish a 20x507 MW Gas Based Combined Cycle Power Plant" by M/s Luxor Power Pvt. Ltd., approved vide G.O. read at (1) above.

Infrastructure facilities, incentives, concessions and other terms and conditions remain the same as in the G.O. read at (1) above.

By Order and in the name of the Governor of Karnataka

(**Aparna Pavate)**

P.R. 2056

Desk Officer (Technical Cell)

Commerce & Industries Department.

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಮುಖ್ಯಮಂತ್ರಿಗಳ ಸಚಿವಾಲಯದಲ್ಲಿನ ಶಾಖಾಧಿಕಾರಿ ಹುದ್ದೆಯನ್ನು ಅಧೀನ ಕಾರ್ಯದರ್ಶಿ ವೃಂದಕ್ಕೆ ತಾತ್ಕಾಲಿಕವಾಗಿ ಉನ್ನತೀಕರಿಸುವ ಬಗ್ಗೆ.

ಓದಲಾಗಿದೆ : ಟಿಪ್ಪಣಿ ಸಂಖ್ಯೆ : ಮುಮಕಾ/5604/09, ದಿನಾಂಕ 05–07–2010.

ಪ್ರಸ್ತಾವನೆ :

ಮೇಲೆ ಓದಲಾದ ಮುಖ್ಯಮಂತ್ರಿಗಳ ಕಾರ್ಯದರ್ಶಿಯವರ ಟಿಪ್ಪಣಿಯಲ್ಲಿ ಮುಖ್ಯಮಂತ್ರಿಗಳ ಸಚಿವಾಲಯದಲ್ಲಿನ ಒಂದು ಶಾಖಾಧಿಕಾರಿ ಹುದ್ದೆಯನ್ನು ಆಡಳಿತಾತ್ಮಕ ಹಿತ ದೃಷ್ಟಿಯಿಂದ ಸರ್ಕಾರದ ಅಧೀನ ಕಾರ್ಯದರ್ಶಿ ವೃಂದಕ್ಕೆ ಉನ್ನತೀಕರಿಸುವಂತೆ ಕೋರಲಾಗಿದೆ. ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 360 ಸಅಸೇ 2010, ಬೆಂಗಳೂರು, ದಿನಾಂಕ : 29ನೇ ಜುಲೈ 2010

ಮುಖ್ಯಮಂತ್ರಿಗಳ ಸಚಿವಾಲಯದಲ್ಲಿನ ಶಾಖಾಧಿಕಾರಿ ಹುದ್ದೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಒಂದು ವರ್ಷದ ಅವಧಿಯವರೆಗೆ ಅಥವಾ ಈ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುವ ಅಧಿಕಾರಿಯ ಸೇವೆಯು ಅಗತ್ಯವಿರುವವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ತಾತ್ಕಾಲಿಕವಾಗಿ ಉನ್ನತೀಕರಿಸಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಆಇ 1168/ಸೇ–3/2010, ದಿನಾಂಕ : 23–7–2010ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

(ಎಂ. ವಾಸುದೇವಮೂರ್ತಿ)

ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ. ಆರ್. 2057

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು–3)

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವಾಲಯ

ವಿಷಯ : ಶ್ರೀ ಎಸ್.ಹೆಚ್. ವೆಂಕಣ್ಣವರ, ಸಹಾಯಕ ಸಾಂಖ್ಯಿಕ ಅಧಿಕಾರಿ ಇವರಿಗೆ ಶಿಸ್ತು ಪ್ರಾಧಿಕಾರವು ವಿಧಿಸಿರುವ ದಂಡನಾ ಆದೇಶದ ವಿರುದ್ಧ ಸರ್ಕಾರಕ್ಕೆ ಸಲ್ಲಿಸಿರುವ ಮೇಲ್ಮನವಿಯ ಕುರಿತು.

ಓದಲಾಗಿದೆ :
1. ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶಕರ ದಂಡನಾ ಆದೇಶ ಸಂಖ್ಯೆ : ಆಸಾಂನಿ/174/ಆಡಳಿತ–2/ 2007–08, ದಿನಾಂಕ : 14–12–2009.
2. ಶ್ರೀ ಎಸ್.ಹೆಚ್. ವೆಂಕಣ್ಣವರ, ಸಹಾಯಕ ಸಾಂಖ್ಯಿಕ ಅಧಿಕಾರಿ, ಇವರು ಸರ್ಕಾರಕ್ಕೆ ಸಲ್ಲಿಸಿರುವ ದಿನಾಂಕ : 1–2–2010 ರ ಮೇಲ್ಮನವಿ.

ಪ್ರಸ್ತಾವನೆ :

ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಸಮೂಹ 'ಸಿ' ವೃಂದದ ನೌಕರರಾದ ಶ್ರೀ ಎಸ್.ಹೆಚ್. ವೆಂಕಣ್ಣವರ, ಸಹಾಯಕ ಸಾಂಖ್ಯಿಕ ಅಧಿಕಾರಿ, ಇವರಿಗೆ, ಶಿಸ್ತು ಪ್ರಾಧಿಕಾರವಾದ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶಕರು ಸದರಿ ನೌಕರರ ವಿರುದ್ಧದ ಜಂಟಿ ಇಲಾಖಾ ವಿಚಾರಣೆಯಲ್ಲಿ ವಿಚಾರಣಾಧಿಕಾರಿಗಳು ಮಾಡಿರುವ ಶಿಫಾರಸ್ಸುಗಳನ್ನು ಪರಿಶೀಲಿಸಿ, ಈ ನೌಕರರ ಮೇಲೆ ಹೊರಿಸಲಾದ ಆರೋಪಗಳು ಸದರಿ ಜಂಟಿ ಇಲಾಖಾ ವಿಚಾರಣೆಯಲ್ಲಿ ಸಾಬೀತಾಗಿದ್ದುದರಿಂದ, ಅವರ ವಿರುದ್ಧದ ಆರೋಪಗಳು ಗಂಭೀರ ಸ್ವರೂಪದ ಆರೋಪಗಳಾಗಿದ್ದು, ಈ ನೌಕರರಿಗೆ ಕಠಿಣ ದಂಡನೆಯನ್ನು ವಿಧಿಸಬಹುದಾಗಿದ್ದರೂ, ಆಪಾದಿತ ನೌಕರರ ನಡವಳಿಕೆಯಲ್ಲಿ ಸುಧಾರಿಸುವಂತೆ ಎಚ್ಚರಿಕೆ ನೀಡಿ ಹಾಗೂ ಸುಧಾರಿಸಿಕೊಳ್ಳಲು ಅವಕಾಶ ಒದಗಿಸಿ ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಆದೇಶದಲ್ಲಿ ಇವರ ಮುಂದಿನ ಒಂದು ವಾರ್ಷಿಕ ವೇತನ ಬಡ್ತಿಯನ್ನು ಸಂಚಿತ ಪರಿಣಾಮ ಸಹಿತವಾಗಿ ತಡೆಹಿಡಿಯುವ ದಂಡನೆಯನ್ನು ವಿಧಿಸಿರುತ್ತಾರೆ. ಸದರಿ ದಂಡನಾ ಆದೇಶದ ವಿರುದ್ಧ ಈ ನೌಕರರು ಕರ್ನಾಟಕ ನಾಗರೀಕ ಸೇವಾ (ಸಿ.ಸಿ.ಎ) ನಿಯಮಗಳು 1957ರ ನಿಯಮ 18 ರ ಮೇರೆಗೆ ಸರ್ಕಾರಕ್ಕೆ ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಈ ನೌಕರರು

ಸರ್ಕಾರಕ್ಕೆ ಸಲ್ಲಿಸಿರುವ ಮೇಲ್ಮನವಿಯನ್ನು ಸದರಿ ನಿಯಮಗಳ ನಿಯಮ 25 (2) ರನ್ವಯ ಸಂಬಂಧಿತ ಇತರೆ ಎಲ್ಲಾ ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ.

ಈ ಪ್ರಕರಣದ ಸಾರಾಂಶವು ಈ ರೀತಿ ಇರುತ್ತದೆ. ಶ್ರೀ ಎಸ್.ಹೆಚ್. ವೆಂಕಣ್ಣವರ, ಸಹಾಯಕ ಸಾಂಖ್ಯಿಕ ಅಧಿಕಾರಿ ಇವರು ಹಾವೇರಿ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಅದೇ ಕಛೇರಿಯ ಸಾಂಖ್ಯಿಕ ನಿರೀಕ್ಷಕರಾದ ಶ್ರೀ ಆರ್.ಎಂ. ಕುಲಕರ್ಣಿ ಮತ್ತು ಇನ್ನೊಬ್ಬ ಸಾಂಖ್ಯಿಕ ನಿರೀಕ್ಷಕರಾದ ಹಾವೇರಿಯ ಲೋಕೋಪಯೋಗಿ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಶ್ರೀ ಪ್ರಕಾಶ್ ವಿ. ಮತ್ತಿಹಳ್ಳಿ ಇವರನ್ನು ಜೊತೆಗೂಡಿಸಿಕೊಂಡು ಅಂದಿನ ಹಾವೇರಿ ಜಿಲ್ಲಾ ಸಂಖ್ಯಾ ಸಂಗ್ರಹನಾಣಾಧಿಕಾರಿಯಾಗಿದ್ದ ಶ್ರೀ ಎನ್.ಎಸ್. ನಾಗಶೆಟ್ಟಿ ಅವರ ಮೇಲೆ ದ್ವೇಷವನ್ನು ಸಾಧಿಸುವ ಉದ್ದೇಶದಿಂದ ಅವರ ವಿರುದ್ಧ ಒಟ್ಟು 19 ಆಪಾದನೆಗಳನ್ನೊಳಗೊಂಡ ದೂರು ಅರ್ಜಿಯನ್ನು ನೇರವಾಗಿ ಅಂದಿನ ಮಾನ್ಯ ಯೋಜನಾ ಸಚಿವರಿಗೆ ಸಲ್ಲಿಸಿದ್ದರಿಂದ, ಸದರಿ ದೂರು ಅರ್ಜಿಯ ಬಗ್ಗೆ ಸರ್ಕಾರದ ನಿರ್ದೇಶನದಂತೆ ಹಾವೇರಿ ಜಿಲ್ಲಾಧಿಕಾರಿಗಳಿಂದ ತನಿಖೆಯನ್ನು ನಡೆಸಿ, ಸದರಿ ತನಿಖೆಯಲ್ಲಿ ಎಲ್ಲಾ 19 ಆಪಾದನೆಗಳು ಸತ್ಯಕ್ಕೆ ದೂರವಾದವುಗಳೆಂದು ರುಜುವಾತಾದ ಕಾರಣ, ಈ ನೌಕರರು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ರ ನಿಯಮ 3 ಮತ್ತು ನಿಯಮ 27 ನ್ನು ಉಲ್ಲಂಘಿಸಿದಂತಾಗಿದ್ದು, ಈ 3 ನೌಕರರು ಸಮೂಹ 'ಸಿ' ವೃಂದದ ನೌಕರರಾಗಿದ್ದುದರಿಂದ ಇವರ ವಿರುದ್ಧ ಜಂಟಿ ಇಲಾಖಾ ವಿಚಾರಣೆಯನ್ನು ಪ್ರಾರಂಭಿಸಲು ಸರ್ಕಾರವು ತೀರ್ಮಾನಿಸಿ, ಅದರಂತೆಯೆ ಮುಂದಿನ ಕ್ರಮ ಕೈಗೊಳ್ಳುವಂತೆ ಶಿಸ್ತು ಪ್ರಾಧಿಕಾರವಾದ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶಕರಿಗೆ ಸೂಚಿಸಲಾಗಿತ್ತು. ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶಕರು ಮೇಲ್ಕಾಣಿಸಿದ ಸಿ.ಸಿ.ಎ. ನಿಯಮಗಳ ನಿಯಮ 13 ರ ಮೇರೆಗೆ ಈ ನೌಕರರ ವಿರುದ್ಧ ಜಂಟಿ ಇಲಾಖಾ ವಿಚಾರಣೆಯನ್ನು ಪ್ರಾರಂಭಿಸಲು ಒಬ್ಬ ನಿವೃತ್ತ ನ್ಯಾಯಾಧೀಶರನ್ನು ನೇಮಿಸಿ, ಸದರಿ ಇಲಾಖಾ ವಿಚಾರಣೆಯಲ್ಲಿ ಶ್ರೀ ಎಸ್.ಹೆಚ್. ವೆಂಕಣ್ಣವರ, ಸಹಾಯಕ ಸಾಂಖ್ಯಿಕ ಅಧಿಕಾರಿ ಇವರ ದುರ್ನಡತೆಯು ಸಾಬೀತಾಗಿದ್ದುದರಿಂದ, ಶಿಸ್ತು ಪ್ರಾಧಿಕಾರವಾದ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶಕರು ಶ್ರೀ ಎಸ್.ಹೆಚ್. ವೆಂಕಣ್ಣವರ, ಸಹಾಯಕ ಸಾಂಖ್ಯಿಕ ಅಧಿಕಾರಿ ಇವರಿಗೆ ಮುಂದಿನ ಒಂದು ವಾರ್ಷಿಕ ವೇತನ ಬಡ್ತಿಯನ್ನು ಸಂಚಿತ ಪರಿಣಾಮ ಸಹಿತವಾಗಿ ತಡೆಹಿಡಿಯುವ ದಂಡನೆಯನ್ನು ಮೇಲೆ ಓದಲಾದ ಆದೇಶದ ಮುಂಖಾಂತರ ವಿಧಿಸಿರುತ್ತಾರೆ.

ಈ ನೌಕರರು, ತಮಗೆ ಉಂಟಾಗುತ್ತಿದ್ದ ಅವಮಾನ, ಅಸಮಾಧಾನ ಮತ್ತು ಮಾನಸಿಕ ಹಿಂಸೆ, ದೌರ್ಜನ್ಯ ಹಾಗು ಜಾತಿ ಕೀಳರಿಮೆ ಮತ್ತು ನಿರಂತರ ಕಿರುಕುಳದ ಪ್ರತಿಫಲವಾಗಿ ಮನನೊಂದು ಅನ್ಯ ಮಾರ್ಗವಿಲ್ಲದೆ ಅಂದಿನ ಕಛೇರಿ ಮುಖ್ಯಸ್ಥರಾಗಿದ್ದ ಹಾವೇರಿ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ವಿರುದ್ಧ ನೇರವಾಗಿ ಅಂದಿನ ಮಾನ್ಯ ಯೋಜನಾ ಸಚಿವರಿಗೆ ದೂರು ಅರ್ಜಿಯನ್ನು ಸಲ್ಲಿಸಲಾಗಿತ್ತೆಂದು ನೀಡಿರುವ ಹೇಳಿಕೆಯನ್ನು ಗಮನಿಸಲಾಗಿದೆ. ಸಾಮಾನ್ಯವಾಗಿ ಹಾಗೂ ಸ್ವಾಭಾವಿಕವಾಗಿ ಯಾವುದೇ ವ್ಯಕ್ತಿಯೂ ಮತ್ತೊಬ್ಬ ವ್ಯಕ್ತಿಯ ವಿರುದ್ಧ ಕಾರಣವಿಲ್ಲದೇ ದೂರು ಅರ್ಜಿ ಸಲ್ಲಿಸಲು ಸಾಧ್ಯವಿಲ್ಲವೆಂದು ಹಾಗೂ ಬಲವಾದ ಕಾರಣಗಳಿದ್ದಾಗಲೇ ಇಂತಹ ಕೃತ್ಯಕ್ಕೆ ಕೈ ಹಾಕುವ ಸಾಧ್ಯತೆ ಇರುತ್ತದೆಂಬುದಾಗಿ ಅಭಿಪ್ರಾಯಪಡಲಾಗಿದೆ. ಈ ಅಂಶವನ್ನು ಈ ಸಂದರ್ಭದಲ್ಲಿ ತುಲನಾತ್ಮಕವಾಗಿ, ನ್ಯಾಯೋಚಿತವಾಗಿ ಮತ್ತು ನಿಷ್ಪಕ್ಷಪಾತವಾಗಿ ಗಮನಿಸುವ ಅವಶ್ಯಕತೆ ಇರುತ್ತದೆ. ಆದಾಗ್ಯೂ ಈ ನೌಕರರು ತಮ್ಮ ಕಾರ್ಯ ನಿರ್ವಹಣೆಯ ಹಾಗು ಸಂಬಂಧಪಟ್ಟ ಸೇವಾ ನಿಯಮಗಳ ಚೌಕಟ್ಟಿನ ಎಲ್ಲೆಯನ್ನು ಮೀರಿ ಕಛೇರಿ ಮುಖ್ಯಸ್ಥರ ಬಗ್ಗೆ ನೇರವಾಗಿ ಮಾನ್ಯ ಇಲಾಖಾ ಸಚಿವರಿಗೆ ದೂರು ಅರ್ಜಿಯನ್ನು ಸಲ್ಲಿಸಿರುವುದು ನಿಯಮಬಾಹಿರ ಕೃತ್ಯವಾಗಿರುತ್ತದೆ. ಇವರು ತಮ್ಮ ಅಹವಾಲನ್ನು ಇಲಾಖಾ ಮುಖ್ಯಸ್ಥರಿಗೆ ಸಲ್ಲಿಸಬಹುದಾಗಿತ್ತು.

ಆದಾಗ್ಯೂ, ಮೇಲಿನ ಕಂಡಿಕೆಗಳಲ್ಲಿ ವಿವರಿಸಿರುವಂತೆ ಈ ನೌಕರರ ದುರ್ನಡತೆಯು ಅತ್ಯಂತ ಗಂಭೀರ ಸ್ವರೂಪದ ದುರ್ನಡತೆಯಾಗಿರುವುದಿಲ್ಲವಾದ್ದರಿಂದ, ಅಂದರೆ, ಇವರಿಂದ ಸರ್ಕಾರದ ಹಣದ ದುರುಪಯೋಗವಾಗಲಿ ಅಥವಾ ಯಾವುದೇ ಕ್ರಿಮಿನಲ್ ಅಪರಾಧವಾಗಲಿ ಎಸಗಿರುವುದು ಕಂಡುಬರುತ್ತಿಲ್ಲವಾದ್ದರಿಂದ, ಇವರಿಗೆ ಶಿಸ್ತು ಪ್ರಾಧಿಕಾರವಾದ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶಕರು ಮೇಲೆ ಓದಲಾದ ಆದೇಶದಲ್ಲಿ ವಿಧಿಸಿರುವ ದಂಡನೆಯನ್ನು ರದ್ದುಪಡಿಸಿ, ಇನ್ನು ಮುಂದೆ ಇಂತಹ ದುರ್ವರ್ತನೆ ಮರುಕಳಿಸದಂತೆ ಎಚ್ಚರಿಕೆಯಿಂದ ವರ್ತಿಸತಕ್ಕದೆಂದು ಸೂಚಿಸಿ, ಇವರಿಗೆ ಕರ್ನಾಟಕ ನಾಗರೀಕ ಸೇವಾ (ಸಿ.ಸಿ.ಎ.) ನಿಯಮಗಳು 1957 ರ ನಿಯಮ 8 (ii) ರ ಮೇರೆಗೆ ವಾಗ್ದಂಡನೆ ವಿಧಿಸಲು ತೀರ್ಮಾನಿಸಿ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ : ಪಿಡಿ 27 ಎಸ್‌ಎಂಸಿ 2010, ಬೆಂಗಳೂರು, ದಿನಾಂಕ : 30–7–2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಮೇರೆಗೆ ಮೇಲ್ಮನವಿ ಪ್ರಾಧಿಕಾರವಾದ ಸರ್ಕಾರವು ಶ್ರೀ ಎಸ್.ಹೆಚ್. ವೆಂಕಣ್ಣವರ, ಸಹಾಯಕ ಸಾಂಖ್ಯಿಕ ಅಧಿಕಾರಿ, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ, ಹಾವೇರಿ ಜಿಲ್ಲೆ ಇವರಿಗೆ ಶಿಸ್ತು ಪ್ರಾಧಿಕಾರವಾದ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶಕರು ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಆದೇಶದಲ್ಲಿ ವಿಧಿಸಿರುವ ದಂಡನೆಯನ್ನು ರದ್ದುಪಡಿಸಿ, ಇನ್ನಮುಂದೆ ಇಂತಹ ದುರ್ವರ್ತನೆ ಮರುಕಳಿಸದಂತೆ ಎಚ್ಚರಿಕೆಯಿಂದ ವರ್ತಿಸತಕ್ಕದ್ದೆಂದು ಸೂಚಿಸಿ, ಸದರಿ ನೌಕರರಿಗೆ ಕರ್ನಾಟಕ ನಾಗರೀಕ ಸೇವಾ (ಸಿ.ಸಿ.ಎ.) ನಿಯಮಗಳು 1957 ರ ನಿಯಮ 8 (ಐ) ರ ಮೇರೆಗೆ ವಾಗ್ದಂಡನೆ ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
(ವಿ. ಸಾಯಿಬಾಬಾ)
ಸರ್ಕಾರದ ಅಧೀನ ಕಾರ್ಯದರ್ಶಿ,
ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ (ಎಸ್–5)

ಪಿ. ಆರ್. 2058

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ : ಆಂಗ್ಲೋ ಇಂಡಿಯನ್ ಕಮ್ಯುನಿಟಿ ವಿದ್ಯಾರ್ಥಿಗಳಿಗೆ ನರ್ಸಿಂಗ್ ಕೋರ್ಸುಗಳಲ್ಲಿ ಸೀಟುಗಳನ್ನು ಕಾಯ್ದಿರಿಸುವ ಬಗ್ಗೆ.

ಓದಲಾಗಿದೆ :
1. ಪತ್ರ ಸಂಖ್ಯೆ : ಎಂಸಿಎಸ್/4/2010–11, ದಿನಾಂಕ : 28–04–2010.
2. ಪತ್ರ ಸಂಖ್ಯೆ : ಎಂಸಿಎಸ್/4/2010–11, ದಿನಾಂಕ : 15–06–2010.

ಪ್ರಸ್ತಾವನೆ:

ವೈದ್ಯಕೀಯ ಶಿಕ್ಷಣ ನಿರ್ದೇಶಕರು ಮೇಲೆ (1) ಮತ್ತು (2)ರಲ್ಲಿ ಓದಲಾದ ತಮ್ಮ ಪತ್ರಗಳಲ್ಲಿ ಆಂಗ್ಲೋ ಇಂಡಿಯನ್ ಕಮ್ಯುನಿಟಿ ವಿದ್ಯಾರ್ಥಿಗಳಿಗೆ 2010–11ನೇ ಸಾಲಿನಿಂದ ಬಿ.ಎಸ್ಸಿ., ನರ್ಸಿಂಗ್ ಕೋರ್ಸುಗಳಲ್ಲಿ 10 ಸೀಟುಗಳನ್ನು ಜನರಲ್ ನರ್ಸಿಂಗ್ ಕೋರ್ಸುಗಳಲ್ಲಿ 02 ಸೀಟುಗಳನ್ನು ಮತ್ತು ಎಂ.ಎಸ್ಸಿ., ನರ್ಸಿಂಗ್ ಕೋರ್ಸುಗಳಲ್ಲಿ 05 ಸೀಟುಗಳನ್ನು ಪ್ರತಿ ವರ್ಷ ಕಾಯ್ದಿರಿಸಲು ಸರ್ಕಾರಿ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ವಿಷಯವನ್ನು ಸಂಬಂಧಿಸಿದ ದಾಖಲೆಗಳೊಂದಿಗೆ ಕೂಲಂಕಷವಾಗಿ ಪರಿಶೀಲಿಸಿದ ನಂತರ, ಆಂಗ್ಲೋ ಇಂಡಿಯನ್ ಕಮ್ಯುನಿಟಿ ವಿದ್ಯಾರ್ಥಿಗಳಿಗೆ ಬಿ.ಎಸ್ಸಿ., ನರ್ಸಿಂಗ್ ಕೋರ್ಸುಗಳಲ್ಲಿ 10 ಸೀಟುಗಳನ್ನು, ಜನರಲ್ ನರ್ಸಿಂಗ್ ಕೋರ್ಸುಗಳಲ್ಲಿ 02 ಸೀಟುಗಳನ್ನು ಮತ್ತು ಎಂ.ಎಸ್ಸಿ., ನರ್ಸಿಂಗ್ ಕೋರ್ಸುಗಳಲ್ಲಿ 05 ಸೀಟುಗಳನ್ನು ಪ್ರತಿ ವರ್ಷ ಕಾಯ್ದಿರಿಸಲು ಸರ್ಕಾರ ತೀರ್ಮಾನಿಸಿ, ಈ ಆದೇಶವನ್ನು ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಆಕುಕ 267 ಎಂಪಿಎಸ್ 2010, ಬೆಂಗಳೂರು, ದಿನಾಂಕ: 30.07.2010

ಆಂಗ್ಲೋ ಇಂಡಿಯನ್ ಕಮ್ಯುನಿಟಿ ವಿದ್ಯಾರ್ಥಿಗಳಿಗೆ ಬಿ.ಎಸ್ಸಿ., ನರ್ಸಿಂಗ್ ಕೋರ್ಸುಗಳಲ್ಲಿ 10 (ಹತ್ತು) ಸೀಟುಗಳನ್ನು, ಜನರಲ್ ನರ್ಸಿಂಗ್ ಕೋರ್ಸುಗಳಲ್ಲಿ 02 (ಎರಡು) ಸೀಟುಗಳನ್ನು ಮತ್ತು ಎಂ.ಎಸ್ಸಿ., ನರ್ಸಿಂಗ್ ಕೋರ್ಸುಗಳಲ್ಲಿ 05 (ಐದು) ಸೀಟುಗಳನ್ನು ಈ ಕೂಡಲೆ ಜಾರಿಗೆ ಬರುವಂತೆ ಪ್ರತಿ ವರ್ಷ ಕಾಯ್ದಿರಿಸಲು ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ವಿ.ಶ್ರೀರಾಮರೆಡ್ಡಿ
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ವೈದ್ಯಕೀಯ ಶಿಕ್ಷಣ)

ಪಿ.ಆರ್. ನಂ. 2072

INFRASTRUCTURE DEVELOPMENT SECRETARIAT

Sub: Constitution of Sub-committee to examine the Swiss Challenge Proposals.

Preamble:

The SLSWA in its 6th meeting held on 19-09-2009 accorded approval for the draft Swiss Challenge guidelines. Subsequently the SLSWA in its 7th SLSWA held on 19-04-2010 approved, the modified Swiss Challenge guidelines finally limiting the applicability of the same only to the selected sub sectors in the Agriculture, Logistics and Urban Infrastructure Projects fixing the threshold limits in respect of each projects in these sub sectors for their eligibility to be considered under the Swiss Challenge route.

In the 8th SLSWA meeting held on 23-06-2010 under the chairmanship of Chief Secretary to Govt. of Karnataka, proposals seeking approval to be taken up under the Swiss Challenge route were discussed and after detailed discussion, it was resolved to constitute a Sub-committee to examine the Swiss Challenge proposals in general henceforth. Hence the order.

Government Order No.: ID 59 ITS 2009, Bangalore Dated: 26-07-2010

In the view of the circumstances explained in the Preamble, Government of Karnataka is pleased to constitute a Sub-committee comprising of the following members to examine the Swiss Challenge proposals.

i. The Principal Secretary to Govt., Infrastructure Development Department - Chairman
ii. The Principal Secretary to Govt., Finance Department - Member
iii. The Principal Secretary to Govt., Public Works Department - Member
iv. The Secretary/Principal Secretary of Administrative Departments (concerned) Member

2. The terms of reference of the Sub-committee shall be as hereunder :-

a) The Sub-committee shall examine as to whether there is a public need or otherwise for the proposed project.
b) Whether the Administrative department has certified the public need or otherwise.
c) Whether the proposal is a suo-moto proposal or innovative proposal.
d) Whether the line department (Field Department, has any on going program or any proposal on record to undertake projects of similar nature and kind)
e) Whether the proposal fits into the revised Swiss Challenge guidelines.
f) Whether any innovation involved in the proposal if so, whether the innovation is patented.
g) Whether the proposal pertains to in-principle approval or orders are sought to put the proposal for competitive bidding.

h) If the proposal is put to competitive bidding, whether any changes are required to be made in the DPR bidding documents and transaction advisory documents.

i) Whether the information in the prescribed format is made available or otherwise.

3. The committee shall examine each of the individual proposals received under Swiss Challenge & recommend to SLSWA about the next case of action to be taken in the matter.

4. The Sub-committee should not take more than 15 days to finalize its recommendation once the proposal is placed before the committee.

By Order and in the name of the Governor of Karnataka

R. SHIVALINGAIAH

P.R. No. 2073

Under Secretary to Govt.

Infrastructure Development Department

ಶಿಕ್ಷಣ ಸಚಿವಾಲಯ

ವಿಷಯ : ತುಳು ತೃತೀಯ ಭಾಷೆ ಪಠ್ಯವಸ್ತು ಮತ್ತು ಪಠ್ಯಪುಸ್ತಕ ರಚನೆ ಸಮಿತಿಯ ಬಗ್ಗೆ.

ಓದಲಾಗಿದೆ : 1. ಸರ್ಕಾರಿ ಆದೇಶ ಸಂಖ್ಯೆ : ಇಡಿ 127 ಯೋಯೋಕ 2010, ದಿನಾಂಕ : 16–07–2010.

2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು ಇವರ ಪತ್ರ.

ಪ್ರಸ್ತಾವನೆ:

1. ಮೇಲೆ (1) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ತುಳು ತೃತೀಯ ಭಾಷೆ ಪಠ್ಯ ಪುಸ್ತಕ ರಚನೆ ಸಂಬಂಧ ಪಠ್ಯಕ್ರಮ ರಚನಾ ಸಮಿತಿಯನ್ನು ರಚಿಸಿ ಆದೇಶಿಸಲಾಗಿದೆ.
2. ಮೇಲೆ (2)ರಲ್ಲಿ ಓದಲಾದ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು ಇವರು ತುಳು ಪಠ್ಯಪುಸ್ತಕ ಅದೇ ಸಮಿತಿಯವರು ರಚಿಸಿದ್ದು, ಅದರಂತೆ ಪಠ್ಯಪುಸ್ತಕ ರಚನಾ ಸಮಿತಿಯ ಪಟ್ಟಿಯನ್ನು ಅನುಮೋದಿಸಲು ಕೋರಿರುತ್ತಾರೆ.
3. ಸದರಿ ಪ್ರಸ್ತಾವನೆ ಬಗ್ಗೆ ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಇಡಿ : 127 : ಯೋಯೋಕ 2010, ಬೆಂಗಳೂರು, ದಿನಾಂಕ: 28.07.2010

(ಇಡಿ : 91 : ಸ್ವೀಮರ(ಯುನಿಕ್) 2010, ದಿನಾಂಕ : 28–07–2010)

4. ತುಳು ತೃತೀಯ ಭಾಷೆ ಪಠ್ಯಪುಸ್ತಕ ರಚನಾ ಸಮಿತಿಯನ್ನು ಈ ಕೆಳಕಂಡಂತೆ ರಚಿಸಿ ಆದೇಶಿಸಲಾಗಿದೆ.

1.	ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್ ಶಿಕ್ಷಣ ತಜ್ಞರು ಹಾಗೂ ಅಧ್ಯಕ್ಷರು, ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ರಾಜ್ಯ ಪ್ರಶಸ್ತಿ ವಿಜೇತ ಶಿಕ್ಷಕರು, ಮಹಾನಗರ ಪಾಲಿಕಾ ಕಟ್ಟಡ, ಲಾಲ್‌ಬಾಗ್, ಮಂಗಳೂರು – 575003, ಮನೆ – 08251–233508, 9480732356.	ಅಧ್ಯಕ್ಷರು
2.	ಶ್ರೀಮತಿ ಮಲ್ಲಿಕಾ ಶೆಟ್ಟಿ ಉಪನ್ಯಾಸಕರು, ವಿದ್ಯಾರಶ್ಮಿ ಡಿ ಎಡ್ ಕಾಲೇಜು, ಸಾವನೂರು 574202.	ಸದಸ್ಯರು
3.	ಶ್ರೀ ಬಿ. ಐತಪ್ಪ ನೈಕ್ ರಾಷ್ಟ್ರಪ್ರಶಸ್ತಿ ವಿಜೇತ ಶಿಕ್ಷಕರು, ಮುಖ್ಯಗುರುಗಳು, ದ.ಕ.ಜಿ.ಪ ಮಾದರಿ ಹಿರಿಯ ಪ್ರಾಥಮಿಕ ಶಾಲೆ, ಉಪ್ಪಿನಂಗಡಿ, ಪುತ್ತೂರು ದ.ಕ. ಜಿಲ್ಲೆ. ದೂರವಾಣಿ – 9449030872	ಸದಸ್ಯರು
4.	ಶ್ರೀ ರಮೇಶ್ ಕಲ್ಮಾಡಿ ರಾಜ್ಯ ಸಂಪನ್ಮೂಲ ಶಿಕ್ಷಕರು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಮುಟ್ಲುಪಾಡಿ, ತಾ. ಕಾರ್ಕಳ ಜಿ. ಉಡುಪಿ ದೂರವಾಣಿ – 9448437849	ಸದಸ್ಯರು

5.	ಶ್ರೀ ಉದಯ ಧರ್ಮಸ್ಥಳ ಸದಸ್ಯರು, ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, 81, ಶ್ರೀ ಮಂಜುನಾಥ ನಿಲಯ, ರಾಜು ಕಾಲೋನಿ, ಯಮಲೂರು, ಮಾರತ್ತಹಳ್ಳ ಅಂಚೆ, ಬೆಂಗಳೂರು – 560037. ದೂರವಾಣಿ – 9342888207, 2523415	ಸದಸ್ಯರು
6.	ಶ್ರೀ ರಮೇಶ ಬಿ. ಕೆ. ಶಿಕ್ಷಕರು, ವಿಠ್ಠಲ ಪದವಿ ಪೂರ್ವ ಕಾಲೇಜು, ವಿಟ್ಲ	ಸದಸ್ಯರು
7.	ಡಾ. ಸುಂದರ ಕೆನಾಜೆ, ಬಿ.ಆರ್.ಸಿ. ಸುಳ್ಯ – 574239	ಸದಸ್ಯರು
8.	ಶ್ರೀ ತಾರಾನಾಥ ಕೈರಂಗಳ ಚಿತ್ರಕಲಾ ಶಿಕ್ಷಕರು, ಸರ್ಕಾರಿ ಪ್ರಾಥಮಿಕ ಶಾಲೆ, ಮಂಚಿ, ಬಂಟ್ವಾಳ ತಾಲ್ಲೂಕು	ಸದಸ್ಯರು
9.	ನಿರ್ದೇಶಕರು ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಬೆಂಗಳೂರು	ಸದಸ್ಯ ಕಾರ್ಯದರ್ಶಿ
10.	ಶ್ರೀ ಬಿ. ಚಂದ್ರಹಾಸರೈ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಲಾಲ್‌ಬಾಗ್, ಮಂಗಳೂರು 575003, ದೂರವಾಣಿ 9481507624	ಕಾರ್ಯನಿರ್ವಾಹಕರು ಮತ್ತು ರಿಜಿಸ್ಟ್ರಾರ್

ಸಲಹಾ ಮಂಡಳಿ ಸದಸ್ಯರು :–

ಶ್ರೀ ಜಿ.ಎಸ್. ಮುಡಂಬಡಿತ್ತಾಯ
ಶಿಕ್ಷಣ ತಜ್ಞರು, ಡಿ.ಎಸ್.ಇ.ಆರ್.ಟಿ
ಬೆಂಗಳೂರು.
ದೂರವಾಣಿ – 9448482611

ಡಾ. ಯು.ಪಿ. ಉಪಾಧ್ಯಾಯ, ಭಾಷಾತಜ್ಞರು
ನಿವೃತ್ತ ಪ್ರಾಧ್ಯಾಪಕರು ಸಂ. ತುಳು ನಿಘಂಟು
ಉಳಿಯಾರಗೋಳಿ, ಕಾಪು ಜಿ. ಉಡುಪಿ
9449166615

ಪ್ರೊ. ಅಮೃತ ಸೋಮೇಶ್ವರ
ತುಳು – ಕನ್ನಡ ವಿದ್ವಾಂಸರು ಹಾಗೂ ಸಾಹಿತಿ
ಒಲುಮೆ ಅಂಚೆ ಕೋಟೆಕಾರು
ಮಂಗಳೂರು ದ.ಕ.
0824–2467755

ಡಾ. ಬಿ.ಎಂ. ಹೆಗ್ಡೆ
ನಿವೃತ್ತ ಕುಲಪತಿ, ಮಾಹೆ ವಿಶ್ವವಿದ್ಯಾಲಯ
ಲೇಡಿ ಹಿಲ್, ಮಂಗಳೂರು ದ.ಕ.
9449442000, 0824–2450450

ಡಾ. ಎನ್. ಸುಕುಮಾರ್ ಗೌಡ
ಶಿಕ್ಷಣ ತಜ್ಞರು, ಶಿಕ್ಷಣ ಅಧ್ಯಯನ ಕೇಂದ್ರ
ವೇರಮಲೆ, ಪುತ್ತೂರು ದ.ಕ. 574202
8970185166, 08251 232470

5. ಸದರಿ ಸಮಿತಿಯ ಕಾರ್ಯವ್ಯಾಪ್ತಿ ನಿಗದಿಪಡಿಸಲು ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಬೆಂಗಳೂರು ಅನುಮತಿ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. ನಂ. 2074

ಐ.ಎಫ್.ಮಾಗಿ
ವಿಶೇಷಾಧಿಕಾರಿ ಮತ್ತು ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ **(ಯೋಜನೆ)**

COMMERCE AND INDUSTRIES SECRETARIAT

Sub: Approval to the Project Proposal of M/s. EMCO Power Ltd., to establish a "300 MW Gas based Power Plant" at a suitable location.

Read: Proceedings of the 23rd State High Level Clearance Committee (SHLCC) Meeting held on 19-06-2010.

Preamble:

M/s. EMCO Power Ltd., proposes to establish a "300 MW Gas based Power Plant" at a suitable location with an investment of Rs. 987 crores, generating employment to about 185 persons.

In the 23rd State High Level Clearance Committee (SHLCC) Meeting held on 19-06-2010, the proposal of the Company was discussed and approved.

Government has examined the recommendations made by the State High Level Clearance Committee in the 23rd Meeting held on 19-06-2010, in all aspects.

Hence the following Order.

Government Order No.: CI 308 SPI 2010, Bangalore Dated: 13-07-2010

Government is pleased to accord in principle approval to the project proposal of M/s. EMCO Power Ltd., to establish a "300 MW Gas based Power Plant" at a suitable location with an investment of Rs. 987 crores, generating employment to about 185 persons and extend the following infrastructure facilities, incentives and concessions.

INFRASTRUCTURE FACILITIES:

1. **Land:** 75 acres - KIADB to acquire and allot as SUC at a suitable location that the Company will identify .
2. **Water:** Required water to be supplied by the local authority.
3. **Power:** Required power during the construction phase to be serviced by the respective ESCOM
4. **Incentives and Concessions:** As per prevailing Industrial/Energy Policy of the State.

GENERAL TERMS AND CONDITIONS:

1. **Power Purchase :** The project proponents should make arrangements with KPTCL to supply at least 30% of generated power to the State Grid through PPA with respective ESCOM and approach KERC for price fixation with "right of first refusal by ESCOM".
2. **Environment:** The promoters to obtain CFE and CFO from KSPCB and environmental clearance from MOEF. GOI.
3. **Employment:** The Company shall prepare a plan for development of Human Resources required for the project, train local people and provide employment to these trained local youth and comply with the provisions of Industrial Policy of Govt. of Karnataka. A copy of Human Resources Development plan shall be sent to the Commissioner for I.D. & Director of Industries and Commerce for monitoring.
4. **Vendor Development:** Where ever there is scope for vendor development for the project, the company shall prepare a vendor development plan, develop local vendors and procure the required inputs, components and sub assemblies from these local vendor units. A copy of the vendor development plan shall be sent to the Commissioner for I.D. & Director of Industries and Commerce for monitoring.
5. **Social Infrastructure Development:** The Company is advised to take up social infrastructure development projects in the vicinity of the proposed location of the unit. A copy of such projects shall be sent to the Commissioner for I.D. & Director of Industries and Commerce for monitoring.
6. **Others:**
   a) The project proponents shall provide employment to at least one member of the family of each land looser as the land is being acquired through KIADB.
   b) The project proponents shall adopt rainwater harvesting, waste water recycling and water conservation techniques. Zero discharge facility should be adopted wherever applicable.
   c) The promoters shall take all statutory and other necessary clearances from the competent authorities including GOI and shall submit milistones/progress in implementation of the project regularly, which will be monitored by the Department.

This approval is valid for a period of two years from the date of issue.

By Order and in the name of the Governor of Karnataka

APARNA PAVATE

Desk Officer (Technical Cell)

Commerce & Industries Department

P.R. No. 2075

INFRASTRUCTURE DEVELOPMENT SECRETARIAT

Sub: Release of funds to KSIIDC for implementation Dabhol Bangalore gas pipeline.

Read: 1. GO. NO. IDD 14UIP 08 25-11-2008.

2. Letter No. DGM (IPD)/GAIL/387/2010-11 dated 11-5-2010 of DGM, KSIIDC.

Preamble:

In the Government Order read at (1) above, KSIIDC was designated as nodal agency for the activities relating to the implementation of Dhabol-Bangalore gas pipeline project. On behalf of Government of Karnataka, sanction was also accorded, for creation of "GAIL Project Cell" in KSIIDC with an estimated expenditure of Rs. 135 lakhs for 3 years from 2009-10 to 2011-12 respectively. An amount of Rs. 19.50 lakhs was released during 2009-10 towards estimated cost.

2. Deputy General Manager KSIIDC in his letter dated 11-5-2010 read at (2) above has requested for release of Rs. 55 lakhs towards the expenditure of GAIL cell for the year 2010-11 and has given the utilization certificate for the amount released earlier.

3. Government of Karnataka after examining the proposal has decided to release Rs. 55 lakhs towards expenditure of GAIL cell for the year 2010-11.

Government Order No.: IDD 14 UIP 2008(P-III) Bangalore, Dated: 29-07-2010

Government of Karnataka is pleased to release an amount of Rs. 55 lakhs (Rs. Fifty five lakhs only) towards the expenditure of GAIL cell for the period 2010-11.

2. The expenditure shall be met from the Head of Account 3451-00-090-1-06-059 Infrastructure preliminary studies other expenditure out of the Budget provision Rs. 797.00 lakhs in 2010-11.

3. Managing Director KSIIDC is authorized to draw the amount on a payees receipt duly counter signed by Under Secretary to Government Infrastructure Development Department.

4. This order is issued in accordance with the financial powers delegated to Principal Secretaries, vide, Government Order No. FD/ITFP 2008 dated 16-05-2008.

By Order and in the name of the Governor of Karnataka

K.S. VENUGOPAL

Under Secretary to Government (I/c)

Infrastructure Development Department

P.R. No. 2076

INFRASTRUCTURE DEVELOPMENT SECRETARIAT

Sub: Constitution of Sub-committee to examine the formation of PPP Society.

Read: 1. GO. NO. IDD 5UIP 2006 (P) dated 18-06-2007.

2. Proceedings of the 8th SLSWA Meeting held on 23-06-2010 under the chairmanship of Chief Secretary to Govt. of Karnataka.

Preamble:

In the G.O. read at Sl. No. (1) above, Government of Karnataka has set up a Public Private Partnership (PPP) Cell under Infrastructure Development Department headed by Director take forward the PPP Projects of the State under various sectors. The PPP Cell plays a vital role in conceptualizing, developing, monitoring various on-going infrastructure projects and provides a cross collaboration platform for multiple stake holders to formulate project plan as well as to receive the proposals in respect of the PPP projects and place them before the SLSWA for consideration & approval.

Implementation of the Infrastructure policy requires that PPP cell to be enabled to attract talents from the open market, undertake project development, facilitate PPP mainstreaming in infrastructure sectors, develop shelf of projects and create awareness about the advantage of Public Private Partnership among the public entities, developers and stake holders. This require PPP cell to have a structured organizational set up, provide for requisite funding and establish process and procedures and mechanism to deliver the desired expectation. The PPP cell would require the infrastructure, funding mechanism and Expertise in financial, legal, technical, commercial and Land related matters to effectively discharge its role.

In view of the above, the subject of formation of a PPP Society was placed before the 8th SLSWA meeting held on 23-06-2010. The SLSWA noted the proposal of formation of a Society under Societies Registration Act. After detailed discussion, the SLSWA resolved to constitute a Sub-committee to examine the proposal of formation of PPP society. Hence the order.

Government Order No.: ID 113 ITS 2009 Bangalore, Dated: 26-07-2010

Under the circumstances explained in the preamble, Government of Karnataka is pleased to constitute the Sub-committee comprising of the following officers to examine the proposal of formation of a PPP Society.

i. The Principal Secretary to Govt. Finance Department - Chairman

ii. The Principal Secretary to Govt. Infrastructure Development Department - Member

iii. The Secretary, Law Department - Member

iv. The Managing Director, Karnataka State Industrial Investment & Development Corporation Limited - Member

2. The terms of reference of the Sub-committee shall be as hereunder :-

a) The Sub-committee shall examine in detail the tasks expected of the PPP cell to discharge the various functions to effectively implement the infrastructure policy 2007.

b) The Sub-committee shall explore the various options to strengthen the PPP cell to build in house capabilities to conceive projects in different sectors as per the infrastructure policy 2007.

c) To identify an effective structure to handle the PPP projects in various sectors.

d) To attract expertise and talents in the financial, technical, legal, commerce and land related matters effectively to mainstream PPP projects in the State.

e) To list out the various options the strength the PPP cell by way of formation of a separate society, formation of a separate department or bringing the PPP cell under the administrative control of one of the agencies involved in facilitation of infrastructure facilities and infrastructure projects to effectively discharge the duties assigned to the PPP cell.

f) To evaluate the various option available and suggest the best option for implementation to the SLSWA.

3. The Sub-committee shall hold the meeting at the earliest and submit its recommendation within one month's time.

By Order and in the name of the Governor of Karnataka

R. SHIVALINGAIAH

Under Secretary to Government

Infrastructure Development Department

P.R. No. 2077

ಮೂಲಸೌಲಭ್ಯ ಅಭಿವೃದ್ಧಿ ಸಚಿವಾಲಯ

ವಿಷಯ : ಮೂಲಸೌಲಭ್ಯ ಅಭಿವೃದ್ಧಿ ಯೋಜನೆಗಳಿಗಾಗಿ ಐಡೆಕ್ ಸಂಸ್ಥೆಗೆ ಒದಗಿಸಿರುವ ಪ್ರಾಜೆಕ್ಟ್ ಅಭಿವೃದ್ಧಿ ನಿಧಿಗೆ (PDF) ಹಣ ಒದಗಿಸುವ ಬಗ್ಗೆ.

ಓದಲಾಗಿದೆ : ಮುಖ್ಯ ಆರ್ಥಿಕ ಅಧಿಕಾರಿ ಹಾಗೂ ಕಂಪನಿ ಕಾರ್ಯದರ್ಶಿ, ಐಡೆಕ್, ಇವರ ಪತ್ರ ಸಂ. iDeCK/2010-11/540, ದಿನಾಂಕ 29-06-2010.

ಪ್ರಸ್ತಾವನೆ:

ಖಾಸಗಿ ಬಂಡವಾಳ ಹೂಡಿಕೆಯನ್ನು ಉತ್ತೇಜಿಸಲು ಹಾಗೂ ಪಿಪಿಪಿ ಆಧಾರದ ಮೇಲೆ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ಐಡೆಕ್‌ನ್ನು ರಾಜ್ಯ ಸರ್ಕಾರದ ನೋಡಲ್ ಏಜೆನ್ಸಿಯಾಗಿ ನೇಮಿಸಿದೆ. ಇದರಂತೆ ಯೋಜನಾ ಅಭಿವೃದ್ಧಿಗೆ ಬಂಡವಾಳ ಹಾಗೂ ಯೋಜನಾ ಬಂಡವಾಳ ಹೂಡಿಕೆಗೆ ರಾಜ್ಯ ಸರ್ಕಾರವು ಐಡೆಕ್‌ಗೆ ಹಣ ಒದಗಿಸಲು ಬದ್ಧವಾಗಿದೆ. ಐಡೆಕ್‌ನ ಒಟ್ಟಾರೆ ಬಂಡವಾಳ ಹೂಡಿಕೆಯಲ್ಲಿ ರಾಜ್ಯ ಸರ್ಕಾರದ ಪಾಲು ಶೇಕಡಾ 49ರಷ್ಟಿದೆ. ಕರ್ನಾಟಕ ರಾಜ್ಯದ ಮೂಲ ಸೌಲಭ್ಯ ಯೋಜನೆಗಳನ್ನು ಅಭಿವೃದ್ಧಿಪಡಿಸಲು ಯೋಜನಾ ಅಭಿವೃದ್ಧಿ ನಿಧಿ (ಪಿ.ಡಿ.ಎಫ್)ಗಾಗಿ ಲೆ.ಶೀ. 5465-01-190-1-01-211 ರಡಿಯಲ್ಲಿ ಪ್ರಸಕ್ತ ಸಾಲಿನಲ್ಲಿ ರೂ. 200.00 ಲಕ್ಷಗಳನ್ನು ಒದಗಿಸಲಾಗಿದೆ.

ಮೇಲೆ ಓದಲಾದ ದಿನಾಂಕ 29-06-2010ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು ಮತ್ತು ಮುಖ್ಯ ಕಾರ್ಯನಿರ್ವಹಣ ಅಧಿಕಾರಿ ಐಡೆಕ್ ಇವರು ಐಡೆಕ್‌ನ ಪಿಡಿಎಫ್‌ಯಡಿಯಲ್ಲಿ ಒದಗಿಸಿರುವ ರೂ. 200.00 ಲಕ್ಷಗಳನ್ನು ಎಂಪಿಕ್ ಅನುಷ್ಠಾನದ ಕ್ಯಾಲೆಂಡರ್ 2010-11ರಡಿಯಲ್ಲಿ ಪ್ರಸ್ತಾಪಿಸಿರುವ 7 ಯೋಜನೆಗಳಾದ Development of VADA, Bellary, Development of ICDs/CFS, Development of Educational Infrastructure (2 Locations), Gulbarga Super Speciality Hospital, Development of Health Infrastructure, Multi level car parking (2 cities), Development of Gas based Power Plants ಗಳನ್ನು ಅನುಷ್ಠಾನಗೊಳಿಸಲು ನಿಗದಿಪಡಿಸಿರುವ ಕಾರ್ಯಕ್ರಮಗಳಿಗೆ ಬಿಡುಗಡೆ ಮಾಡಲು ಕೋರಿದ್ದಾರೆ. ಐಡೆಕ್‌ನ ಈಗಿನ ಅಗತ್ಯವನ್ನು ಗಮನದಲ್ಲಿರಿಸಿಕೊಂಡು ಈ ಸಾಲಿನಲ್ಲಿ ಒದಗಣೆ ಮಾಡಿರುವ ರೂ. 200.00ಲಕ್ಷಗಳನ್ನು ಬಿಡುಗಡೆ ಮಾಡಲು ಪ್ರಸ್ತಾಪಿಸಲಾಗಿದೆ.

ಮೇಲಿನ ಅಂಶಗಳನ್ನು ಪರಿಶೀಲಿಸಿದ ನಂತರ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಮೂಅಇ 73 ಮೂಇವಿ 2010, ಬೆಂಗಳೂರು, ದಿನಾಂಕ: 27.07.2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಎಂಪಿಕ್ ಕ್ಯಾಲೆಂಡರ್ 2010-11ರಲ್ಲಿ ಗುರುತಿಸಲಾದ 7 ಯೋಜನೆಗಳಾದ Development of VADA, Bellary, Development of ICDs/CFS, Development of Educational Infrastructure (2 Locations), Gulbarga Super Speciality Hospital, Development of Health Infrastructure, Multi level car parking (2 cities), Development of Gas based Power Plants ಕುರಿತಂತೆ ನಿಗದಿಪಡಿಸಲಾದ ಕಾರ್ಯಕ್ರಮಗಳ ಅಭಿವೃದ್ಧಿ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ರೂ. 200.00 ಲಕ್ಷಗಳನ್ನು (ರೂ. ಎರಡು ನೂರು ಲಕ್ಷಗಳು ಮಾತ್ರ) ಐಡೆಕ್‌ನ PDF ಹಾಗೂ PIFಗೆ ಬಿಡುಗಡೆ ಮಾಡಲು ಮಂಜೂರಾತಿ ನೀಡಲಾಗಿದೆ.

2. ಈ ವೆಚ್ಚವನ್ನು ಲೆಕ್ಕ ಶೀರ್ಷಿಕೆ "5465-01-190-1-01-211" ಐಡೆಕ್ ಬಂಡವಾಳ ಇದರಡಿ 2010-11ನೇ ಸಾಲಿನ ಆಯವ್ಯಯದಲ್ಲಿ ಒದಗಣೆ ಮಾಡಿರುವ ರೂ. 200.00 ಲಕ್ಷಗಳಿಂದ ಭರಿಸತಕ್ಕದ್ದು.

3. ಸದರಿ ಮೊತ್ತವನ್ನು ಚೀಫ್ ಫೈನಾನ್ಸಿಯಲ್ ಆಫೀಸರ್ ಮತ್ತು ಕಂಪನಿ ಕಾರ್ಯದಶಿ, ಐಡೆಕ್ ಇವರು ಪೇಯಿಸ್ ರಸೀದಿಯ ಮೂಲಕ ಸರ್ಕಾರದ ಅಧೀನ ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ ಇವರ ಮೇಲು ರುಜುವಿನೊಂದಿಗೆ ರಾಜ್ಯ ಹುಜೂರು ಖಜಾನೆ, ಬೆಂಗಳೂರು ಇಲ್ಲಿ ತೆಗೆಯಲು ಅನುಮತಿಸಿದೆ.

4. ಈ ಆದೇಶವನ್ನು ದಿನಾಂಕ 16–05–2008ರ ಆದೇಶ ಸಂ. FD 01 TFP 2008 ರಡಿಯಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕ ಅಧಿಕಾರ ಪ್ರತ್ಯಾಯೋಜನೆಯಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಆರ್. ಶಿವಲಿಂಗಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ
ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ

ಪಿ.ಆರ್. ನಂ. 2078

COMMERCE AND INDUSTRIES SECRETARIAT

CORRIGENDUM

NO. CI/213/SPI/2010 BANGALORE DATED : 16-07-2010

Sub: Approval to the Project Proposal of M/s. P.M. Infrastructure Pvt. Ltd. to establish "Integrated Logistics & Warehouse Park, Industrial Infrastructure" at Chikkahullur Village, Kasaba Hobli, Hoskote Taluk, Bangalore Rural District.

Read: 1. Government Order No. CI 213 SPI 2010, Dated : 02-06-2010.
2. Proceedings of the 23rd State High Level Clearance Committee (SHLCC) meeting held on 19-06-2010.

In the order portion of the Govt. Order No. CI 213 SPI 2010, dated : 02-06-2010 in the place of Sy. No. 125 Chikkahullur Village, Kasaba Hobli, Hoskote Taluk, Bangalore Rural District, please be read as Sy. No. 25 of Chikkahullur Village, Kasaba Hobli, Hoskote Taluk, Bangalore Rural District.

By Order and in the name of the Governor of Karnataka

APARNA PAVATE
Desk Officer (Technical Cell)
Commerce & Industries Department

P.R. No. 2079

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಮುಖ್ಯ ಚುನಾವಣಾಧಿಕಾರಿ, ಸಿಆಸುಇ (ಚುನಾವಣೆ) ಇಲ್ಲಿನ ಸಹಾಯಕ ಮುಖ್ಯ ಚುನಾವಣಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ ಹುದ್ದೆಯನ್ನು ಉಪಮುಖ್ಯ ಚುನಾವಣಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿ ಎಂದು ತಾತ್ಕಾಲಿಕವಾಗಿ ಉನ್ನತೀಕರಿಸುವ ಬಗ್ಗೆ.

ಓದಲಾಗಿದೆ : ಅನಧಿಕೃತ ಟಿಪ್ಪಣಿ ಸಂಖ್ಯೆ: ಸಿಆಸುಇ 27 ಚುಸಿಆ 2010, ದಿನಾಂಕ 15–04–2010

ಪ್ರಸ್ತಾವನೆ :

ಮೇಲೆ ಓದಲಾದ ಅನಧಿಕೃತ ಟಿಪ್ಪಣಿಯಲ್ಲಿ ಮುಖ್ಯಚುನಾವಣಾಧಿಕಾರಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಚುನಾವಣೆ) ಇಲ್ಲಿನ ಸಹಾಯಕ ಮುಖ್ಯ ಚುನಾವಣಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ ಹುದ್ದೆಯನ್ನು ಆಡಳಿತಾತ್ಮಕ ಹಿತದೃಷ್ಟಿಯಿಂದ ಉಪಮುಖ್ಯ ಚುನಾವಣಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿ ಎಂದು ಉನ್ನತೀಕರಿಸುವಂತೆ ಕೋರಲಾಗಿದೆ. ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 208 ಸಅಸೇ 2010, ಬೆಂಗಳೂರು, ದಿನಾಂಕ 29ನೇ ಜೂನ್ 2010

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಚುನಾವಣೆಗಳು) ಇಲ್ಲಿನ ಸಹಾಯಕ ಮುಖ್ಯ ಚುನಾವಣಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ ಹುದ್ದೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಉಪ ಮುಖ್ಯ ಚುನಾವಣಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿಯೆಂದು ತಾತ್ಕಾಲಿಕವಾಗಿ ಉನ್ನತೀಕರಿಸಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 1083/ಸೇ–3/2010, ದಿನಾಂಕ: 28–6–2010ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ. ವಾಸುದೇವಮೂರ್ತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ
(ಸೇವೆಗಳು–3).

ಪಿ.ಆರ್. 2116

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ರಾಜಶೇಖರ್ ಕೆ ನಾಯಕ್, ದ್ವಿ.ದ.ಸ., ಜಿಲ್ಲಾ ಪೊಲೀಸ್ ಕಛೇರಿ, ಮಂಗಳೂರು ಹಾಲಿ ಓಓಡಿ ಎಎನ್‌ಎಫ್, ಉಡುಪಿ ರವರ ಪರಿಷ್ಕರಣ ಮೇಲ್ಮನವಿ ಅರ್ಜಿಯ ಬಗ್ಗೆ.

ಓದಲಾಗಿದೆ :
1) ಶಿಸ್ತು ಪ್ರಾಧಿಕಾರಿಯವರು ಹೊರಡಿಸಿರುವ ಅಂತಿಮ ಆದೇಶ ಸಂಖ್ಯೆ. ಸಿಬ್ಬಂದಿ–3/10/2007 ಎ.ಎನ್.ಎಫ್. ದಿನಾಂಕ: 02–07–2007.
2) ಶಿಸ್ತು ಪ್ರಾಧಿಕಾರಿಯವರ ಆದೇಶದ ವಿರುದ್ಧ ಶ್ರೀ ರಾಜಶೇಖರ ನಾಯ್ಕ, ದ್ವಿ.ದ.ಸ. ರವರ ಮೇಲ್ಮನವಿ ಅರ್ಜಿ ದಿನಾಂಕ 17–10–2007.
3) ಮೇಲ್ಮನವಿ ಪ್ರಾಧಿಕಾರ ರವರ ಆದೇಶ ಸಂಖ್ಯೆ (4)43/2007 ದಿನಾಂಕ 11–09–2009.
4) ಪರಿಷ್ಕರಣ ಮೇಲ್ಮನವಿ ದಿನಾಂಕ 14–01–2010.

ಪ್ರಸ್ತಾವನೆ :

ಶ್ರೀ ರಾಜಶೇಖರ ನಾಯ್ಕ, ದ್ವಿ.ದ.ಸ. ಜಿಲ್ಲಾ ಪೊಲೀಸ್ ಕಛೇರಿ, ದಕ್ಷಿಣ ಕನ್ನಡ ಜಿಲ್ಲೆ, ಓಓಡಿ ಕಮಾಂಡರ್, ಎಎನ್‌ಎಫ್, ಉಡುಪಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಕರ್ತವ್ಯದಲ್ಲಿ ಅವಿಧೇಯತೆ, ನಿರ್ಲಕ್ಷತೆ ಮತ್ತು ಬೇಜವಾಬ್ದಾರಿತನ ತೋರಿಸಿರುತ್ತಾರೆಂದು ಎಸ್.ಪಿ. ಎ.ಎನ್.ಎಫ್. ಕಾರ್ಕಳ ರವರು ಸಲ್ಲಿಸಿದ ವರದಿಯ ಮೇರೆಗೆ ಸದರಿಯವರ ವಿರುದ್ಧ ಕೆ.ಸಿ.ಎಸ್. (ಸಿಸಿಎ) ನಿಯಮ 1957 ರ ನಿಯಮ 12ರ ಅಡಿಯಲ್ಲಿ ದಿನಾಂಕ: 06–02–2007 ರಂದು ಈ ಕೆಳಕಂಡಂತೆ ದೋಷಾರೋಪಣಾ ಪತ್ರವನ್ನು ಹೊರಡಿಸಿರುತ್ತಾರೆ.

1) ಆರೋಪಿ ಸರ್ಕಾರಿ ನೌಕರ ಶ್ರೀ ರಾಜಶೇಖರ ನಾಯ್ಕ, ದ್ವಿ.ದ.ಸ. ಜಿಲ್ಲಾ ಪೊಲೀಸ್ ಕಛೇರಿ, ಮಂಗಳೂರು ರವರು ಎಎನ್‌ಎಫ್ ಕಛೇರಿ ಉಡುಪಿಯಲ್ಲಿ ಓಓಡಿ ನೆಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, ಎ.ಎನ್.ಎಫ್ ಕಾರ್ಕಳ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುವಂತೆ ಮೇಲಾಧಿಕಾರಿಗಳು ಸೂಚಿಸಿದ್ದರೂ ದಿನಾಂಕ: 21–12–2006 ರಿಂದ 26–12–2006 ರವರೆಗೆ ಕಾರ್ಕಳ ಕಛೇರಿಗೆ ಹಾಜರಾಗದೇ ಮೇಲಧಿಕಾರಿಗಳ ಆದೇಶವನ್ನು ಉಲ್ಲಂಘಿಸಿದ್ದಲ್ಲದೇ ಈ ಬಗ್ಗೆ ದಿ: 25–12–06 ರಂದು ಎಎನ್‌ಎಫ್, ಉಡುಪಿ ಕಛೇರಿಯಲ್ಲಿದ್ದ
ಶ್ರೀ ಜಿ. ರಮೇಶ್, ಎಸ್‌ಪಿ., ಎಎನ್‌ಎಫ್ ಕಾರ್ಕಳ ರವರು ದೂರವಾಣಿಯಲ್ಲಿ ಸಂಪರ್ಕಿಸಿ ಮಾತನಾಡಿದಾಗ ಅವರೊಂದಿಗೆ ಅಶಿಸ್ತಿನಿಂದ ಮತ್ತು ಉದ್ಧಟತನದಿಂದ ಮಾತನಾಡಿರುತ್ತಾರೆ. ಅಲ್ಲದೇ ದಿ: 27–12–06 ರಂದು ಸದರಿ ಮೇಲಾಧಿಕಾರಿಯವರು ಎಎನ್‌ಎಫ್., ಕಾರ್ಕಳ ಕಛೇರಿಯಲ್ಲಿ ಕಛೇರಿ ವಿಷಯಗಳ ಬಗ್ಗೆ ಮಾತನಾಡುವಾಗ ಮೇಲಧಿಕಾರಿಗಳೊಂದಿಗೆ ಅವಿಧೇಯರಾಗಿ ಸಿಬ್ಬಂದಿಗಳೆದುರೇ ಅಸಭ್ಯವಾಗಿ ಉದ್ಧಟತನದಿಂದ ಮಾತನಾಡಿ ಕರ್ತವ್ಯದಲ್ಲಿ ತೀವ್ರ ಅಶಿಸ್ತು ಹಾಗೂ ದುರ್ನಡತೆ ಎಸಗಿರುತ್ತಾರೆ.

2) ದಿ: 27–12–06 ರಂದು ಎ.ಎನ್.ಎಫ್ ಕಾರ್ಕಳ ಕಛೇರಿಯನ್ನು ಬಿಟ್ಟು ಹೋಗುವಾಗ ಎ.ಎನ್.ಎಫ್., ಎಸ್‌ಪಿ ರವರಿಂದ ಅನುಮತಿ ಪಡೆಯದೇ ಯಾವುದೇ ವಿಧದ ರಜೆಯನ್ನು ಪಡೆಯದೇ ದಿ: 28–12–06 ರಿಂದ ಎ.ಎನ್.ಎಫ್ ಕಾರ್ಕಳ ಕಛೇರಿಗೆ ಗೈರು ಹಾಜರಾಗುವ ಮೂಲಕ ಅಲ್ಲಿ ಕರ್ತವ್ಯ ನಿರ್ವಹಿಸುವಂತೆ ಮೇಲಧಿಕಾರಿಗಳು ನೀಡಿದ ಆದೇಶವನ್ನು ಉಲ್ಲಂಘಿಸಿ ತೀವ್ರ ಕರ್ತವ್ಯ ನಿರ್ಲಕ್ಷ್ಯತನ, ಅಶಿಸ್ತು ಹಾಗೂ ದುರ್ನಡತೆಯನ್ನು ಪ್ರದರ್ಶಿಸಿರುತ್ತಾರೆ.

3) ಸದರಿ ನೌಕರರು ದಿ: 30–12–06 ರಂದು ಉಡುಪಿ ಎಎನ್‌ಎಫ್ ಕಛೇರಿಯಲ್ಲಿರುವುದನ್ನು ತಿಳಿದು ಕಛೇರಿಯ ಎಲ್ಲಾ ಬಾಕಿ ಇರುವ ಕಡತಗಳನ್ನು/ಬಿಲ್ಲುಗಳನ್ನು ತೆಗೆದುಕೊಂಡು ಕೂಡಲೇ ಎಎಫ್ ಕಾರ್ಕಳ ಕಛೇರಿಗೆ ಬಂದು ವರದಿ ಮಾಡಿಕೊಳ್ಳುವಂತೆ ದಿ: 03–01–07 ಮತ್ತು 04–01–07 ರಂದು ನಿಸ್ತಂತು ಸಂದೇಶಗಳ ಮುಖೇನ ಎಸ್‌ಪಿ., ಎಎನ್‌ಎಫ್ ರವರು ನಿರ್ದೇಶನ ನೀಡಿದ್ದರೂ ಅಲ್ಲಿಗೆ ಹೋಗದೆ ಮೇಲಧಿಕಾರಿಗಳ ಆದೇಶವನ್ನು ಉಲ್ಲಂಘಿಸಿ ಎಎನ್‌ಎಫ್ ಕಛೇರಿಯ ಸುಗಮ ಕೆಲಸ ಕಾರ್ಯಗಳಿಗೆ ತೀವ್ರ ಅಡಚಣೆಯುಂಟುಮಾಡಿ ವಿಳಂಬವಾಗಲು ಕಾರಣರಾಗಿ ಕರ್ತವ್ಯದಲ್ಲಿ ತೀವ್ರ ನಿರ್ಲಕ್ಷತನ, ಬೇಜವಾಬ್ದಾರಿತನ ಹಾಗೂ ಅಶಿಸ್ತನ್ನು ಪ್ರದರ್ಶಿಸಿರುತ್ತಾರೆ.

4) ದಿ: 07–01–07 ಮತ್ತು 08–01–07 ರಂದು ಎಎನ್‌ಎಫ್., ಉಡುಪಿ ಕಛೇರಿಯಲ್ಲಿದ್ದ ಬಾಕಿ ಇರುವ ಬಿಲ್ಲುಗಳಿಗೆ ಸೇರಿದ ಕಡತಗಳನ್ನು ತೆಗೆದುಕೊಂಡು ಬಂದು ಕಾಣುವಂತೆ ಶ್ರೀ ಸುಭಾಷ್ ಸಿ ಗುಡಿಮನಿ, ಎಸ್‌ಪಿ., ಎಎನ್‌ಎಫ್ ರವರು ನಿಸ್ತಂತು ಮೂಲಕ ನಿರ್ದೇಶನ ನೀಡಿದ್ದರೂ ಮೇಲಧಿಕಾರಿಗಳ ಆದೇಶಕ್ಕೆ ಮಾನ್ಯತೆ ನೀಡದೇ ಬಾಕಿ ಇರುವ ಕಡತ/ಬಿಲ್ಲುಗಳೊಂದಿಗೆ ಮೇಲಧಿಕಾರಿಯವರೆದುರು ಹಾಜರಾಗದೇ, ಮೇಲಧಿಕಾರಿಯವರನ್ನು ಸಂಪರ್ಕಿಸದೇ ಅವಿಧೇಯತೆಯನ್ನು ತೋರ್ಪಡಿಸಿ, ಕರ್ತವ್ಯದಲ್ಲಿ ತೀವ್ರ ಅಶಿಸ್ತು ಹಾಗೂ ದುರ್ನಡನತೆಯನ್ನು ಪ್ರದರ್ಶಿಸಿರುತ್ತಾರೆ.

5) ದಿ: 12–01–07 ರಂದು ಉಡುಪಿ ಎಎನ್‌ಎಫ್ ಕಛೇರಿಯಲ್ಲಿ ಶ್ರೀ ರಮೇಶ್, ಎಸ್‌ಪಿ., ಎಎನ್‌ಎಫ್, ಉಡುಪಿ ರವರು ಬಾಕಿ ಇರುವ ಕಛೇರಿಯ ಬಿಲ್ಲುಗಳು/ಕಡತಗಳನ್ನು ಕಾರ್ಕಳ ಕಛೇರಿಗೆ ತೆಗೆದುಕೊಂಡು ಬರುವಂತೆ ನಿಸ್ತಂತು ಮೂಲಕ ನಿರ್ದೇಶನ ನೀಡಿದ್ದರೂ ಮೇಲಧಿಕಾರಿಗಳ ಆದೇಶವನ್ನು ಉಲ್ಲಂಘಿಸಿ ಎಎನ್‌ಎಫ್., ಕಾರ್ಕಳ ಕಛೇರಿಗೆ ಹೋಗದೇ ದಿ: 12–01–07 ರಂದು ಉಡುಪಿ ಕಛೇರಿಯನ್ನು ಬಿಟ್ಟು ಎಲ್ಲಿಗೋ ತೆರಳಿ ಮೇಲಧಿಕಾರಿಗಳ ಅನುಮತಿಯನ್ನು ಪಡೆಯದೇ ದಿ: 12–01–07 ರಿಂದ 18–01–07 ರವರೆಗೆ ಕಛೇರಿ ಕರ್ತವ್ಯಕ್ಕೆ ಅನಧಿಕೃತವಾಗಿ ಗೈರುಹಾಜರಾಗಿ ಕರ್ತವ್ಯದಲ್ಲಿ ತೀವ್ರ ನಿರ್ಲಕ್ಷತನ, ಅಶಿಸ್ತು ಹಾಗೂ ಸರಕಾರಿ ನೌಕರರೊಬ್ಬರಿಗೆ ತರವಲ್ಲದ ರೀತಿಯಲ್ಲಿ ವರ್ತಿಸಿರುತ್ತಾರೆ.

6) ಎಎನ್‌ಎಫ್ ವಿಭಾಗಕ್ಕೆ ಸ್ಕಾಲರ್‌ಶಿಪ್ ಮತ್ತು ಇನ್‌ಸೆಂಟಿವ್ಸ್ ಲೆಕ್ಕ ಶೀರ್ಷಿಕೆಯಡಿಯಲ್ಲಿ ಪ್ರಧಾನ ಕಛೇರಿಯ ದಿ: 15–12–06 ರ ಆದೇಶದಲ್ಲಿ ಅನುದಾನ ಬಿಡುಗಡೆಯಾಗಿದ್ದರೂ ಈ ಬಗ್ಗೆ ತೀರಾ ವಿಳಂಬವಾಗಿ ದಿ: 22–12–06 ರಂದು ಬಿಲ್ಲು ತಯಾರಿಸಿ, ಈ ಬಗ್ಗೆ ದಿ: 02–01–07 ರಂದೇ ಖಜಾನೆಯಿಂದ ಚೆಕ್ಕು ವಿತರಿಸಿದ್ದರೂ ಕೂಡಾ ಅದನ್ನು ನಗದೀಕರಣಕ್ಕಾಗಿ ದಿ: 08–01–07 ರಂದು ಮೇಲಧಿಕಾರಿಗಳ ಮೇಲುರುಜುವಿಗೆ ಹಾಜರುಪಡಿಸಿರುತ್ತಾರೆ. ಮಾತ್ರವಲ್ಲದೆ ಎಎನ್‌ಎಫ್ ಕಛೇರಿಯ ಇತರೆ 13 ಬಿಲ್ಲುಗಳು ಕ್ರಮವಾಗಿ ನಂ. ಎಎನ್‌ಎಫ್/ಎಸಿಟಿ/1448/06–07 ರಿಂದ ಎಎನ್‌ಎಫ್/ಎಸಿಟಿ/1460/06–07

ಗಳಲ್ಲಿ ಎಂಟಿಒ ರವರು ದಿ: 05–12–06 ರಂದು ಆರೋಪಿ ಸರ್ಕಾರಿ ನೌಕರರಿಗೆ ಬಿಲ್ಲುಗಳನ್ನು ನೀಡಿದ್ದರೂ ಅವುಗಳನ್ನು ವಿಳಂಬವಾಗಿ ದಿ: 22–12–06 ರಂದು ಬಿಲ್ಲು ತಯಾರಿಸಿ, ಖಜಾನೆಗೆ ಹಾಜರಿಪಡಿಸಿದ್ದಲ್ಲದೆ ಅವುಗಳಲ್ಲಿ ದಿ: 03–01–07 ರಂದೇ ಖಜಾನೆಯಿಂದ ಚೆಕ್ಕು ವಿತರಿಸಿದ್ದರೂ ಕೂಡಾ ಅವುಗಳನ್ನು ನಗದೀಕರಣಕ್ಕಾಗಿ ತೀರಾ ವಿಳಂಬದ ಬಳಿಕ ದಿ: 08–01–07 ರಂದು ಮೇಲಧಿಕಾರಿಗಳ ಮೇಲುರುಜುವಿಗೆ ಹಾಜರುಪಡಿಸಿ, ಕರ್ತವ್ಯದಲ್ಲಿ ಅತೀವ ನಿರ್ಲಕ್ಷತನ ಹಾಗೂ ಬೇಜವಾಬ್ದಾರಿತನ ತೋರ್ಪಡಿಸಿರುತ್ತಾರೆ.

ಮೇಲೆ ವಿವರಿಸಿರುವ ಎಲ್ಲಾ ಆಪಾದನೆಗಳ ಬಗೆಗಿನ ದೋಷಾರೋಪಣಾ ಪತ್ರವನ್ನು ಸದರಿಯವರು ಸ್ವೀಕರಿಸಿ ತಮ್ಮ ವಿವರಣೆಯನ್ನು ಸಲ್ಲಿಸಿರುತ್ತಾರೆ. ಸದರಿಯವರು ಸಲ್ಲಿಸಿದ ಸಮಜಾಯಿಷಿಯು ಸಮಂಜಸವಾಗಿಲ್ಲವಾದ ಕಾರಣ ಐ.ಜಿ.ಪಿ. ಪಶ್ಚಿಮ ವಲಯ, ಮಂಗಳೂರು ಮತ್ತು ಹೆಚ್ಚುವರಿ ಪ್ರಭಾರ ಕಮಾಂಡರ್, ಎ.ಎನ್.ಎಫ್. ಉಡುಪಿ ರವರು ಆಪಾದಿತ ನೌಕರನ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ತದನಂತರ ಗಳಿಸುವ ವಾರ್ಷಿಕ ವೇತನ ಬಡ್ತಿಗಳಿಗೆ ಧಕ್ಕೆಬಾರದ ಹಾಗೆ ಎರಡು ವರ್ಷಗಳ ಕಾಲ ಮುಂದೂಡಿ ಮೇಲೆ ಓದಲಾದ (2)ರ ಆದೇಶವನ್ನು ಹೊರಡಿಸಿರುತ್ತಾರೆ.

ಸದರಿ ದಂಡನಾ ಆದೇಶದ ವಿರುದ್ಧ ಆಪಾದಿತರು ದಿನಾಂಕ 17–10–2007 ರಂದು ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಪ್ರಕರಣಕ್ಕೆ ಸಂಬಂಧಪಟ್ಟ ಸಾಕ್ಷಿ ಪುರಾವೆಗಳನ್ನು ಪರಿಶೀಲಿಸಿ ಮೇಲ್ಮನವಿದಾರರ ವಿರುದ್ಧ ಹೊರಿಸಲಾದ ಆರೋಪಗಳು ಭಾಗಶಃ ದೃಢಪಡುವುದರಿಂದ, ಮೇಲ್ಮನವಿದಾರರು ಇಲಾಖೆಯಲ್ಲಿ ಸಲ್ಲಿಸಿರುವ ಸೇವೆಯನ್ನು ಪರಿಗಣಿಸಿ, ಇನ್ನು ಮುಂದೆ ಕರ್ತವ್ಯದಲ್ಲಿ ಪ್ರಾಮಾಣಿಕತೆ ಮತ್ತು ನಿಷ್ಠೆಯಿಂದ ಕರ್ತವ್ಯ ನಿರ್ವಹಿಸುವಂತೆ ತಿಳಿಸುತ್ತಾ ಶಿಸ್ತು ಪ್ರಾಧಿಕಾರಿಗಳು ವಿಧಿಸಿರುವ ಶಿಕ್ಷೆಯನ್ನು ಮಾರ್ಪಡಿಸಿ ಮೇಲ್ಮನವಿ ಪ್ರಾಧಿಕಾರಿಯು, ಮೇಲ್ಮನವಿದಾರರು ಮುಂದೆ ಸಂಪಾದಿಸಬಹುದಾದ ಒಂದು ವಾರ್ಷಿಕ ವೇತನ ಬಡ್ತಿಯನ್ನು ಮುಂದಿನ ವಾರ್ಷಿಕ ವೇತನ ಬಡ್ತಿಗಳಿಗೆ ಧಕ್ಕೆಯಾಗದಂತೆ 06 (ಆರು) ತಿಂಗಳ ಕಾಲ ಮುಂದೂಡಿ ಮೇಲೆ ಓದಲಾದ (3)ರಲ್ಲಿ ಆದೇಶ ಹೊರಡಿಸಿರುತ್ತಾರೆ.

ಸದರಿ ಆದೇಶದ ವಿರುದ್ಧ ಮೇಲೆ ಓದಲಾದ (4)ರ ಪತ್ರದಲ್ಲಿ ಆಪಾದಿತ ನೌಕರರು ಪರಿಷ್ಕರಣ ಮೇಲ್ಮನವಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಪರಿಷ್ಕರಣ ಮೇಲ್ಮನವಿಯಲ್ಲಿ ಮೇಲ್ಮನವಿದಾರರು ಸಲ್ಲಿಸಿರುವ ಅಂಶಗಳನ್ನು ದಾಖಲೆಗಳೊಂದಿಗೆ ಪರಿಶೀಲಿಸಲಾಗಿ ಪರಿಷ್ಕರಣ ಮೇಲ್ಮನವಿಯಲ್ಲಿ ಯಾವುದೇ ಹೊಸ ಸಮರ್ಥನೀಯ ಅಂಶಗಳು ಇರುವುದಿಲ್ಲ. ಸದರಿಯವರು ಕರ್ತವ್ಯದಲ್ಲಿ ಅತೀವ ನಿರ್ಲಕ್ಷತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ ಆದ್ದರಿಂದ ಮೇಲ್ಮನವಿ ಪ್ರಾಧಿಕಾರವು ವಿಧಿಸಿರುವ ದಂಡನಾದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡು ಬರುತ್ತಿಲ್ಲವೆಂದು ಪರಿಗಣಿಸುತ್ತಾ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 49 ಪೊಸಿಲಿ 2010, ಬೆಂಗಳೂರು, ದಿ: 03–08–2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಶ್ರೀ ರಾಜಶೇಖರ ನಾಯ್ಕ, ದ್ವಿ.ದ.ಸ. ಜಿಲ್ಲಾ ಪೊಲೀಸ್ ಕಛೇರಿ, ಮಂಗಳೂರು ಹಾಲಿ ಓಓಡಿ ಕಮಾಂಡರ್, ಎಎನ್ಎಫ್, ಉಡುಪಿರವರು ಸರ್ಕಾರಕ್ಕೆ ಸಲ್ಲಿಸಿದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 26(ಎ) ಪ್ರಕಾರ ತಿರಸ್ಕರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 2117

ಟಿ.ಎನ್. ರವಿಪ್ರಕಾಶ್
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಶಿಕ್ಷಣ ಸಚಿವಾಲಯ

ವಿಷಯ : ರಾಜ್ಯದಲ್ಲಿ 6ನೇ ತರಗತಿಯಿಂದ 10ನೇ ತರಗತಿಯವರೆಗೆ ಉರ್ದು ಭಾಷೆಯನ್ನು ತೃತೀಯ ಭಾಷೆಯನ್ನಾಗಿ ಪರಿಗಣಿಸಲು ಅನುಮತಿ ನೀಡುವ ಬಗ್ಗೆ.

ಓದಲಾಗಿದೆ : 1. ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ,ರವರ ದಿನಾಂಕ 13–10–2009 ರ ಹಾಗೂ ದಿನಾಂಕ 03–03–2010ರ ಪತ್ರ ಸಂಖ್ಯೆ: ಡಿಎಸ್ಇಆರ್‌ಟಿ/ಇವಿಜಿ/ಉ.ತೃಭಾ 12/1/2009–10.

ಪ್ರಸ್ತಾವನೆ :

ಮೇಲೆ ಓದಲಾದ ದಿನಾಂಕ 13–10–2009 ಹಾಗೂ ದಿನಾಂಕ 03–03–2010ರ ಪತ್ರದಲ್ಲಿ ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಇವರು 10ನೇ ತರಗತಿ ಉರ್ದು ತೃತೀಯ ಭಾಷೆಯ ಪಠ್ಯಪುಸ್ತಕ ತಯಾರಿಸಿ, ಮುದ್ರಿಸಿ ಸರಬರಾಜು ಮಾಡುವ ಕುರಿತು ಉರ್ದು ವಿಷಯ ತಜ್ಞರ ಅಭಿಪ್ರಾಯಿಸಿದ ಹಿನ್ನಲೆಯಲ್ಲಿ, 10ನೇ ತರಗತಿಗಳ ಉರ್ದು ತೃತೀಯ ಭಾಷೆ ಪಠ್ಯಪುಸ್ತಕದ ಕರಡನ್ನು ಅನುಮೋದನೆಗೆ ಸಲ್ಲಿಸಿರುವುದರ ಜೊತೆಗೆ, ಸಿಕ್ಯಾಬ್ ಅಸೋಸಿಯೇಷನ್, ಬಿಜಾಪುರ, ಇವರು ಮಾನ್ಯ ಉಚ್ಚ ನ್ಯಾಯಾಲಯ ಸರ್ಕೂಟ್ ಬೆಂಚ್, ಗುಲ್ಬರ್ಗಾ ಇಲ್ಲಿ ಪ್ರೌಢಶಾಲೆಗಳಲ್ಲಿ 10ನೇ ತರಗತಿಯಲ್ಲಿ ಉರ್ದು ಭಾಷೆಯನ್ನು ತೃತೀಯ ಭಾಷೆಯನ್ನಾಗಿ ತೆಗೆದುಕೊಂಡು ವ್ಯಾಸಂಗ ಮಾಡಿರುವ ಅಭ್ಯರ್ಥಿಗಳಿಗೆ ಎಸ್.ಎಸ್.ಎಲ್.ಸಿ ಮಾರ್ಚಿ 2010 ಪರೀಕ್ಷೆಗೆ ಉರ್ದು ಪ್ರಥಮ ಭಾಷೆಯಲ್ಲಿನ ಕೆಲವು ಆಯ್ದ ಭಾಗಗಳನ್ನು ಸಂಸ್ಥೆಯವರು ಆಯ್ಕೆ ಮಾಡಿ ಬೋಧಿಸಿರುವಂತೆ ಉರ್ದು ತೃತೀಯ ಭಾಷೆಯಲ್ಲಿ ಪ್ರಶ್ನೆ ಪತ್ರಿಕೆಗಳನ್ನು ತಯಾರಿಸುವಂತೆ ಕೋರಿ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ಮಾನ್ಯ ನ್ಯಾಯಾಲಯ ಪುರಸ್ಕರಿಸಿರುವ ಹಿನ್ನಲೆಯಲ್ಲಿ ನ್ಯಾಯಾಲಯದ ಆದೇಶವನ್ನು ಜಾರಿಗೊಳಿಸುವ ಬಗ್ಗೆ ಅಭಿಪ್ರಾಯ ನೀಡಿ 10ನೇ ತರಗತಿಗೆ ಉರ್ದು ತೃತೀಯ ಭಾಷೆಗೆ ಪ್ರಶ್ನೆ ಪತ್ರಿಕೆ ತಯಾರಿಸಲು ಅನುಮತಿ ಕೋರಿರುತ್ತಾರೆ. ಹಾಗೂ ಮುಂದಿನ ವರ್ಷದಿಂದ ಉರ್ದುವನ್ನು 6ನೇ ತರಗತಿಯಿಂದ 10ನೇ ತರಗತಿಯವರೆಗೆ ತೃತೀಯ ಭಾಷೆಯನ್ನಾಗಿ ಪರಿಗಣಿಸಲು ಆದೇಶ ಹೊರಡಿಸುವಂತೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಇಡಿ 73 ಎಸ್‌ಟಿಬಿ 2009, ಬೆಂಗಳೂರು, ದಿನಾಂಕ: 03–08–2010

ಪ್ರಸಾವನೆಯಲ್ಲಿ ವಿವರಿಸಿದ ಕಾರಣಗಳ ಹಿನ್ನೆಲೆಯಲ್ಲಿ, 2010–11ನೇ ಶೈಕ್ಷಣಿಕ ಸಾಲಿನಿಂದ ರಾಜ್ಯದಲ್ಲಿ 6ನೇ ತರಗತಿಯಿಂದ 10ನೇ ತರಗತಿಯವರೆಗೆ ಉರ್ದು ಭಾಷೆಯನ್ನು ತೃತೀಯ ಭಾಷೆಯಾಗಿ ಪರಿಗಣಿಸಿ ಪಠ್ಯಕ್ರಮದಲ್ಲಿ ಅಳವಡಿಸಲು ಅನುಮೋದಿಸಿ ಆದೇಶಿಸಿದೆ.

ನಿರ್ದೇಶಕರ ದಿನಾಂಕ 03–03–2010ರ ಪತ್ರದಲ್ಲಿ ಪ್ರಸ್ತಾಪಿಸಿರುವಂತೆ, 10ನೇ ತರಗತಿಗೆ ಸಂಬಂಧಿಸಿದಂತೆ, ಉರ್ದು ತೃತೀಯ ಭಾಷೆಗೆ ನಿಯಮಾನುಸಾರ ಪ್ರಶ್ನೆ ಪತ್ರಿಕೆ ತಯಾರಿಸಲು ಅನುಮತಿ ನೀಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 2118

ಎಂ.ಎಸ್. ಸೋಮಶೇಖರ್

ಸರ್ಕಾರದ ಅಧೀನ ಕಾರ್ಯದರ್ಶಿಗಳು,

ಶಿಕ್ಷಣ ಇಲಾಖೆ.

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವಾಲಯ

ವಿಷಯ : ಕಬ್ಬಿಣದ ಅದಿರನ್ನು ರಫ್ತು ಮಾಡಲು ಅರಣ್ಯ ಇಲಾಖೆಯಿಂದ ನೀಡುವ ನಮೂನೆ–27ರ ರಹದಾರಿಗಳನ್ನು ನಿಷೇಧಿಸುವ ಬಗ್ಗೆ.

ಓದಲಾಗಿದೆ : (1) ಸರ್ಕಾರದ ಆದೇಶ ಸಂಖ್ಯೆ: ಸಿಐ 162 ಎಂಎಂಎಂ 2010, ದಿನಾಂಕ: 28–07–2010.

ಪ್ರಸ್ತಾವನೆ :

ಕರ್ನಾಟಕ ರಾಜ್ಯದಲ್ಲಿ ಉತ್ಪಾದಿಸಿದ ಕಬ್ಬಿಣದ ಅದಿರು ಉಪಯೋಗಿಸಿದ ಕಬ್ಬಿಣದ ಅದಿರು ಮತ್ತು ರಫ್ತಾಗಿರುವ ಕಬ್ಬಿಣದ ಅದಿರನ್ನು ತಾಳೆ ಮಾಡಿದಲ್ಲಿ ರಫ್ತು ಮಾಡಲು ನಮೂದಿಸಿದ ಪ್ರಮಾಣಕ್ಕಿಂತ ಹೆಚ್ಚಾಗಿ ರಫ್ತಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ದಿನಾಂಕ: 01–01–2000 ದಿಂದ 22–07–2006 ರ ಅವಧಿಯಲ್ಲಿ ನಡೆದಿರಬಹುದಾದ ಅಕ್ರಮ ಗಣಿಗಾರಿಕೆ ಬಗ್ಗೆ ಮತ್ತು ಕಬ್ಬಿಣದ ಅದಿರನ್ನು ಸಾಗಿಸಲು ನಿಗದಿತ ಪ್ರಮಾಣಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ರಫ್ತಾಗಿರುವ ಬಗ್ಗೆ ತನಿಖೆ ಜರುಗಿಸಲು ಕರ್ನಾಟಕ ಲೋಕಾಯುಕ್ತರಿಗೆ ವಹಿಸಿರುವುದರಿಂದ ಕಬ್ಬಿಣದ ಅದಿರು ಸಾಗಾಣಿಕೆ ಪರವಾನಗಿ (ಏಟಿಜಡಿಚಿಟ ಆಿಠಿಚಿಣಛಿ ಕಜಡಿಟಟಣ) ನೀಡುವುದನ್ನು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯು ಮೇಲೆ ಓದಲಾದ ದಿನಾಂಕ: 28–07–2010 ರ ಸರ್ಕಾರಿ ಆದೇಶದಲ್ಲಿ ನಿಷೇಧಿಸಿದೆ.

ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿನಾಂಕ: 29–07–2010ರಂದು ಜರುಗಿದ ಸಭೆಯಲ್ಲಿ ಕಬ್ಬಿಣದ ಅದಿರನ್ನು ರಫ್ತು ಮಾಡಲು ಅರಣ್ಯ ಇಲಾಖೆಯಿಂದ ನೀಡುತ್ತಿರುವ ನಮೂನೆ–27 ರ ರಹದಾರಿಗಳನ್ನು ನಿಷೇಧಿಸಲು ತೀರ್ಮಾನಿಸಲಾಗಿದೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರವು ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಅಪಜೀ 167 ಎಫ್‌ಡಿಪಿ 2010, ಬೆಂಗಳೂರು, ದಿನಾಂಕ: 30–07–2010

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳಿಂದ ಕರ್ನಾಟಕ ರಾಜ್ಯದಲ್ಲಿ ಉತ್ಪಾದನೆಯಾಗುತ್ತಿರುವ ಕಬ್ಬಿಣದ ಅದಿರನ್ನು ರಫ್ತು ಮಾಡಲು ಅರಣ್ಯ ಇಲಾಖೆಯಿಂದ ನೀಡುತ್ತಿರುವ ನಮೂನೆ–27 ರ ರಹದಾರಿಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆಗೆ ನಿಷೇಧಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 2119

ಗೋಪಾಲ್

ಸರ್ಕಾರದ ಅಧೀನ ಕಾರ್ಯದರ್ಶಿ,

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ.

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವಾಲಯ

ವಿಷಯ : ರಾಜ್ಯದಲ್ಲಿ ಅಕ್ರಮ ಗಣಿಗಾರಿಕೆಯನ್ನು ತಡೆಯಲು ಸಂಕೀರ್ಣ ತನಿಖಾ ಠಾಣೆಗಳನ್ನು (Composite Check Post) ಪ್ರಾರಂಭಿಸುವ ಬಗ್ಗೆ.

ಓದಲಾಗಿದೆ :
1. ದಿನಾಂಕ: 18–12–2008 ರ Compt/LOK/BCD/89/2007/ARE-2 ನೇ ಸಂಖ್ಯೆಯ ಗೌರವಾನ್ವಿತ ಕರ್ನಾಟಕ ಲೋಕಾಯುಕ್ತರವರ ವರದಿ.
2. ದಿನಾಂಕ: 24–10–2009 ರಂದು ಜರುಗಿದ ಟಾಸ್ಕ್‌ಫೋರ್ಸ್ ಸಮಿತಿಯ ನಡವಳಿ.
3. ದಿನಾಂಕ: 24–05–2010 ರಂದು ಜರುಗಿದ ಸಭಾ ನಡವಳಿ.
4. ಅಕ್ರಮ ಗಣಿಗಾರಿಕೆ ತಡೆಗಟ್ಟುವ ನಿಟ್ಟಿನಲ್ಲಿ ದಿನಾಂಕ: 07–07–2010 ರಂದು ಜರುಗಿದ ಸಭೆ.
5. ಕರ್ನಾಟಕ ಅರಣ್ಯ ನಿಯಮ 1969 ರ ನಿಯಮ 158 ರಲ್ಲಿ ಸೂಚಿಸಿರುವಂತೆ.
6. ದಿನಾಂಕ: 13–07–2010 ರ ಎ(5)ಇತರೆ.ಸಿಆರ್.5:10–11 ನೇ ಸಂಖ್ಯೆಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು), ಬೆಂಗಳೂರು ರವರ ಪತ್ರ.

ಪ್ರಸ್ತಾವನೆ :

ರಾಜ್ಯದಲ್ಲಿ ಅಕ್ರಮ ಗಣಿಗಾರಿಕೆಯನ್ನು ತಡೆಯಲು ಗೌರವಾನ್ವಿತ ಕರ್ನಾಟಕ ಲೋಕಾಯುಕ್ತರವರು ದಿನಾಂಕ: 18–12–2008 ರಂದು ಸರ್ಕಾರಕ್ಕೆ ಸಲ್ಲಿಸಿರುವ ವರದಿಯಾಧರಿಸಿ ದಿನಾಂಕ: 24–10–2009 ರಂದು ಜರುಗಿದ ಟಾಸ್ಕ್ ಫೋರ್ಸ್ ಸಮಿತಿಯ ಸಭೆಯಲ್ಲಿ ಚರ್ಚಿಸಿ, ತನಿಖಾ ಠಾಣೆಗಳನ್ನು ನಿರ್ಮಿಸಲು ತೀರ್ಮಾನಿಸಲಾಗಿತ್ತು. ಇದೇ ವಿಷಯದಲ್ಲಿ ಪ್ರಧಾನ ಕಾರ್ಯದರ್ಶಿಗಳು, ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 24–05–2010ರಂದು ಜರುಗಿದ ಸಭೆಯಲ್ಲಿ ಚರ್ಚಿಸಿ ರಾಜ್ಯದ 13 ಸ್ಥಳಗಳಲ್ಲಿ ಸಂಬಂಧಿಸಿದ ಇಲಾಖೆಗಳನ್ನೊಳಗೊಂಡಂತೆ (Composite Check Posts) ಗಳನ್ನು ಪ್ರಾರಂಭಿಸಲು ನಿರ್ಧರಿಸಲಾಗಿದೆ.

ದಿನಾಂಕ: 07–07–2010 ರಂದು ಜರುಗಿದ ಸಭೆಯಲ್ಲಿ ಈ ಸಂಕೀರ್ಣ ತನಿಖಾ ಠಾಣೆಗಳನ್ನು ಪ್ರಾರಂಭಿಸಲು ಸರ್ಕಾರದ ಆದೇಶದ ಅವಶ್ಯಕತೆಯ ಕುರಿತು ಚರ್ಚಿಸಲಾಗಿರುತ್ತದೆ. ಕರ್ನಾಟಕ ಅರಣ್ಯ ನಿಯಮ 1969 ರ ನಿಯಮ 158 ರಲ್ಲಿ ಸೂಚಿಸಿರುವಂತೆ ಈ ತನಿಖಾ ಠಾಣೆಗಳನ್ನು

ಅಳವಡಿಸಲು ಅಧಿಕೃತ ಪ್ರಾಧಿಕಾರದ ಅನುಮೋದನೆಯು ಅಗತ್ಯವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು), ಬೆಂಗಳೂರು ರವರು ಉಲ್ಲೇಖ (6) ರ ಪತ್ರದ ಮೂಲಕ ಸರ್ಕಾರದ ಆದೇಶ ಹೊರಡಿಸಲು ಕೋರಿರುವರು.

ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಅಪಜೀ 90 ಎಫ್‌ಎಫ್‌ಎಂ 2010, ಬೆಂಗಳೂರು, ದಿನಾಂಕ: 28–07–2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಅಕ್ರಮ ಗಣಿಗಾರಿಕೆ ಹಾಗೂ ಅಕ್ರಮ ಅದಿರು ಸಾಗಾಣಿಕೆಯನ್ನು ತಡೆಯಲು ಉದ್ದೇಶಿಸಿ, ಕರ್ನಾಟಕ ಅರಣ್ಯ ನಿಯಮ 1969ರ 158 ನೇ ನಿಯಮದಡಿ ಈ ಕೆಳಕಂಡ ಸ್ಥಳಗಳಲ್ಲಿ ಸಂಕೀರ್ಣ ತನಿಖಾ ಠಾಣೆಗಳನ್ನು (Composite Check Posts)ಗಳನ್ನು ದಿನಾಂಕ: 01–06–2010 ರಿಂದ ಪೂರ್ವಾನ್ವಯವಾಗುವಂತೆ ಪ್ರಾರಂಭಿಸಲು ಈ ಕೆಳಗಿನ ಅಂಶಗಳನ್ನೊಳಗೊಂಡಂತೆ ಮಂಜೂರಾತಿ ನೀಡಿದೆ.

ಕ್ರಮ ಸಂಖ್ಯೆ	ಸಂಕೀರ್ಣ ತನಿಖಾ ಠಾಣೆಯ ಸ್ಥಳ	ನೋಡಲ್ ಇಲಾಖೆ
1	ಸಕಲೇಶಪುರ (ಹಾಸನ ಜಿಲ್ಲೆ)	ಲೋಕೋಪಯೋಗಿ ಇಲಾಖೆ
2	ಮಂಗಳೂರು ಬಂದರು (ದಕ್ಷಿಣ ಕನ್ನಡ ಜಿಲ್ಲೆ)	ಕರ್ನಾಟಕ ಅರಣ್ಯ ಇಲಾಖೆ
3	ಬೇಲಿಕೆರೆ ಬಂದರು (ಉತ್ತರ ಕನ್ನಡ ಜಿಲ್ಲೆ)	ಕರ್ನಾಟಕ ಅರಣ್ಯ ಇಲಾಖೆ
4	ಕಾರವಾರ ಬಂದರು (ಉತ್ತರ ಕನ್ನಡ ಜಿಲ್ಲೆ)	ಕರ್ನಾಟಕ ಅರಣ್ಯ ಇಲಾಖೆ
5	ಡಿ.ಬಿ.ಕೆರೆ ಚಿತ್ರದುರ್ಗ ಜಿಲ್ಲೆ	ಗಣಿ ಮತ್ತು ಭೂ ವಿಜ್ಞಾನ ಇಲಾಖೆ
6	ಕಲ್ಲಹಳ್ಳಿ (ಬಳ್ಳಾರಿ ಜಿಲ್ಲೆ) (ಹೊಸಪೇಟೆ ಹತ್ತಿರ)	ಗಣಿ ಮತ್ತು ಭೂ ವಿಜ್ಞಾನ ಇಲಾಖೆ
7	ಬನ್ನಹಟ್ಟಿ (ಬಳ್ಳಾರಿ ಜಿಲ್ಲೆ) (ಹೊಸಪೇಟೆ ಹತ್ತಿರ)	ಗಣಿ ಮತ್ತು ಭೂ ವಿಜ್ಞಾನ ಇಲಾಖೆ
8	ಮಾಜಾಳಿ (ಉತ್ತರ ಕನ್ನಡ ಜಿಲ್ಲೆ)	ಗಣಿ ಮತ್ತು ಭೂ ವಿಜ್ಞಾನ ಇಲಾಖೆ
9	ಅನಮೋಡ್ (ಉತ್ತರ ಕನ್ನಡ ಜಿಲ್ಲೆ)	ವಾಣಿಜ್ಯ ತೆರಿಗೆ ಇಲಾಖೆ
10	ಹಗರಿ (ಬಳ್ಳಾರಿ ಜಿಲ್ಲೆ)	ಸಾರಿಗೆ ಇಲಾಖೆ
11	ಕಿರುವತ್ತಿ (ಉತ್ತರ ಕನ್ನಡ ಜಿಲ್ಲೆ)	ಕರ್ನಾಟಕ ಅರಣ್ಯ ಇಲಾಖೆ
12	ಅಡವಿ–ಸೋಮಪುರ ಕ್ರಾಸ್ (ಗದಗ ಜಿಲ್ಲೆ)	ಕರ್ನಾಟಕ ಅರಣ್ಯ ಇಲಾಖೆ
13	ಝಳಕಿ (ಬಿಜಾಪುರ ಜಿಲ್ಲೆ)	ಸಾರಿಗೆ ಇಲಾಖೆ

ಈ ಮೇಲ್ಕಂಡ ಸಂಕೀರ್ಣ ಅರಣ್ಯ ತನಿಖಾ ಠಾಣೆಗಳಲ್ಲಿ ನೋಡೆಲ್ ಇಲಾಖೆಯ ಅಧಿಕಾರಿಗಳು ಸಂಪೂರ್ಣ ನೇತೃತ್ವವನ್ನು ವಹಿಸಿಕೊಂಡು ತನಿಖಾ ಕೆಲಸವನ್ನು ಇತರ ಇಲಾಖೆಗಳ ಅಧಿಕಾರಿಗಳ/ಸಿಬ್ಬಂದಿಗಳ ಸಂಪೂರ್ಣ ಸಹಕಾರದೊಂದಿಗೆ ಹಾಗೂ ಸಂಯೋಜನೆಯೊಂದಿಗೆ ನಿರ್ವಹಿಸಬೇಕು.

ಸಂಕೀರ್ಣ ತನಿಖಾ ಠಾಣೆಗಳನ್ನು ಪ್ರಾರಂಭಿಸಲು ಬೇಕಾಗಿರುವ ಕನಿಷ್ಠ ಮೂಲ ಭೂತ ಸೌಕರ್ಯಗಳನ್ನು ಸಂಬಂಧಿಸಿದ ನೋಡೆಲ್ ಇಲಾಖೆಯವರು ನಿರ್ಮಿಸಿಕೊಡಲು ಕ್ರಮ ಕೈಗೊಳ್ಳಬೇಕು.

ಪ್ರತಿಯೊಂದು ಸಂಕೀರ್ಣ ತನಿಖಾ ಠಾಣೆಗಳಲ್ಲಿ ಕರ್ನಾಟಕ ಪೋಲೀಸ್ ಇಲಾಖೆ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಕರ್ನಾಟಕ ಅರಣ್ಯ ಇಲಾಖೆ, ಸಾರಿಗೆ ಇಲಾಖೆ ಹಾಗೂ ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿಗಳು/ಸಿಬ್ಬಂದಿಯವರನ್ನು ನೇಮಕ ಮಾಡಿ ಪ್ರತಿ ದಿವಸ ಮೂರು ಶಿಫ್ಟ್‌ಗಳ ಆಧಾರದ ಮೇಲೆ ಕೆಲಸ ನಿರ್ವಹಿಸಲು ಸಂಬಂಧಿಸಿದ ಇಲಾಖೆಗಳ ಮುಖ್ಯಸ್ಥರು ಅಧಿಕಾರಿ/ಸಿಬ್ಬಂದಿಗಳನ್ನು ತುರ್ತಾಗಿ ನಿಯೋಜಿಸಬೇಕು.

ಸಂಕೀರ್ಣ ತನಿಖಾ ಠಾಣೆಗಳಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸಲು, ಹಾಗೂ ಯಾವುದೇ ಅಕ್ರಮಗಳಿಗೆ ಅವಕಾಶ ನೀಡದಂತೆ ತನಿಖಾ ಕೆಲಸಗಳನ್ನು ನಿರ್ವಹಿಸುವಂತಹ ಕ್ರಮಗಳನ್ನು ಸಂಬಂಧಿಸಿದ ಇಲಾಖೆಗಳು ಕೈಗೊಳ್ಳಬೇಕು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 2120

ಹೆಚ್.ಎಂ. ಮಲ್ಲಿಕಾರ್ಜುನ ಸ್ವಾಮಿ

ಸರ್ಕಾರದ ಅಧೀನ ಕಾರ್ಯದರ್ಶಿ,

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ.

ಮೂಲಸೌಲಭ್ಯ ಅಭಿವೃದ್ಧಿ ಸಚಿವಾಲಯ

ವಿಷಯ : ಕರ್ನಾಟಕ ರಾಜ್ಯದ ವಿವಿಧ ಪ್ರಮುಖ ಪ್ರವಾಸಿ ಕೇಂದ್ರಗಳಲ್ಲಿ ಸಿಮೆಂಟ್ ಕಾಂಕ್ರೀಟ್ ಹೆಲಿಪ್ಯಾಡ್‌ಗಳನ್ನು ನಿರ್ಮಿಸುವ ಬಗ್ಗೆ.

ಓದಲಾಗಿದೆ :
1. ಆದೇಶ ಸಂಖ್ಯೆ. ಮೂಅಇ 110 ರಾಅವಿ 2006 ದಿನಾಂಕ: 22–02–2007.
2. ಅಪರ ಜಿಲ್ಲಾಧಿಕಾರಿಗಳು, ರಾಯಚೂರು ಜಿಲ್ಲೆ, ಇವರ ಪತ್ರ ಸಂಖ್ಯೆ: ಕಂದಾಯ/ ಎಂಎಸ್‌ಸಿ/124/2006–07/823. ದಿನಾಂಕ: 13–05–2010.

ಪ್ರಸ್ತಾವನೆ :

ಮೇಲೆ ಕ್ರ.ಸಂ. 1 ರಲ್ಲಿ ಓದಲಾದ ಸರ್ಕಾರಿ ಆದೇಶ ದಿನಾಂಕ: 22–02–2007ರಲ್ಲಿ ರಾಜ್ಯದ ಪ್ರಮುಖ 20 ಸ್ಥಳಗಳಲ್ಲಿ ಶಾಶ್ವತ (ಸಿಮೆಂಟ್ ಕಾಂಕ್ರೀಟ್) ಹೆಲಿಪ್ಯಾಡ್‌ಗಳನ್ನು ನಿರ್ಮಿಸಲು ಅನುಮೋದನೆ ನೀಡಿ ಪ್ರತಿ ಹೆಲಿಪ್ಯಾಡ್‌ಗೆ ಗರಿಷ್ಠ ರೂ. 10.00 ಲಕ್ಷಗಳ ಬಿಡುಗಡೆಗೆ ಮಂಜೂರಾತಿ ನೀಡಿರುತ್ತದೆ. ಈ ಆದೇಶದಂತೆ ಸಂಬಂಧಿಸಿದ ಜಿಲ್ಲಾಧಿಕಾರಿಗಳು ತಮ್ಮ ವ್ಯಾಪ್ತಿಗೆ ಬರುವ ಸ್ಥಳಗಳಲ್ಲಿ ಹೆಲಿಪ್ಯಾಡ್ ನಿರ್ಮಿಸಲು ಪ್ರತಿ ಹೆಲಿಪ್ಯಾಡ್‌ಗೆ ರೂ. 10.00 ಲಕ್ಷದಂತೆ ಹಣವನ್ನು ಪೇಯಿಸ್ ರಸೀತಿಯ ಮೂಲಕ ಪಡೆದುಕೊಂಡಿರುತ್ತಾರೆ ಆದರೆ ಜಿಲ್ಲಾಧಿಕಾರಿಗಳು, ರಾಯಚೂರು ಇವರು ಹೆಲಿಪ್ಯಾಡ್ ನಿರ್ಮಾಣಕ್ಕೆ ಮಂಜೂರಾಗಿರುವ ರೂ. 10.00 ಲಕ್ಷಗಳನ್ನು ಇದುವರೆಗೂ ಪಡೆಯದೆ ಇರುವುದರಿಂದ ಈ ವಿಷಯವನ್ನು ಪುನರ್ ಪರಿಶೀಲಿಸಿದೆ

ವಿಮಾನ ಇಳಿದಾಣ ನಿರ್ಮಿಸಲು ಕ್ರಮ ಕೈಗೊಳ್ಳುತ್ತಿರುವುದರಿಂದ ಇಲ್ಲಿ ಹೆಲಿಪ್ಯಾಡ್ ನಿರ್ಮಿಸುವ ಪ್ರಸ್ತಾವನೆಯನ್ನು ಕೈಬಿಡಲು ಸರ್ಕಾರ ನಿರ್ಧರಿಸಿರುವುದರಿಂದ ಈ ಕೆಳಕಂಡಂತೆ ಆದೇಶವನ್ನು ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ. ಮೂಅಇ 110 ರಾಅವಿ 2006, ಬೆಂಗಳೂರು, ದಿನಾಂಕ: 06–08–2010

ರಾಯಚೂರು ಜಿಲ್ಲೆಯಲ್ಲಿ ವಿಮಾನ ಇಳಿದಾಣ ನಿರ್ಮಿಸಲು ಸರ್ಕಾರ ನಿರ್ಧರಿಸಿರುವುದರಿಂದ ರಾಯಚೂರಿನಲ್ಲಿ ಹೆಲಿಪ್ಯಾಡ್ ನಿರ್ಮಿಸಲು ಈ ಹಿಂದೆ ನೀಡಿದ್ದ ಮಂಜೂರಾತಿಯನ್ನು ಹಿಂಪಡೆಯಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 2121

ಕೆ.ಎಸ್. ವೇಣುಗೋಪಾಲ್

ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ),

ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ.

ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ

ವಿಷಯ : 2010–11ನೇ ಸಾಲಿನಲ್ಲಿ ಸಂಸ್ಥೆಗಳಿಗಾಗಿ ಕೈಗಾರಿಕಾ ಮೂಲಭೂತ ಸೌಕರ್ಯಗಳು ಯೋಜನೆಯಡಿಯಲ್ಲಿ (ಲೆಕ್ಕಶೀರ್ಷಿಕೆ 4852–02–800–0–01) ಕೆಐಎಡಿಬಿಗೆ ರೂ. 154.25 ಲಕ್ಷಗಳನ್ನು ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ :

1. ಸರ್ಕಾರದ ಆದೇಶ ಸಂಖ್ಯೆ ವಾಕೈ/52/ಅಂಆಸ(1)2010, ಬೆಂಗಳೂರು ದಿನಾಂಕ: 01.04.2010.
2. ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಹಾಗೂ ಕಾರ್ಯ ನಿರ್ವಾಹಕ ಸದಸ್ಯರು ಕೆ.ಐ.ಎ.ಡಿ.ಬಿರವರ ಪತ್ರ ಸಂಖ್ಯೆ ಕಕೈಪ್ರ ಆಯವ್ಯಯ ಸಿಒಎಫ್ 022329/2010–11, ದಿನಾಂಕ: 26–04–2010.
3. ಆಯುಕ್ತರು (ಕೈ.ಅ) ಇವರ ಪತ್ರ ಸಂಖ್ಯೆ:ಯೋಜನೆ/ಪಿ4/ಕೆಐಎಡಿಬಿ/02/2010–11, ದಿ: 29.04.2010.
4. ಸರ್ಕಾರಿ ಆದೇಶ ಸಂಖ್ಯೆ: ಸಿಐ 175 ಎಸ್‌ಪಿಐ 2010, ದಿ: 29.05.2010.
5. ಆಯುಕ್ತರು (ಕೈ.ಅ) ಇವರ ಪತ್ರ ಸಂಖ್ಯೆ: ಯೋಜನೆ/ಪಿ4/ಕೆಐಎಡಿಬಿ/02/2010–11, ದಿ: 14.07.2010.

ಪ್ರಸ್ತಾವನೆ :

ಮೂಲಭೂತ ಸೌಲಭ್ಯಗಳನ್ನು ಉನ್ನತೀಕರಿಸುವುದಕ್ಕಾಗಿ ಉಲ್ಲೇಖ (1) ರ ಪ್ರಕಾರ 2010–11ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ 4852–02–800–0–01 (ಯೋಜನೆ) ಅಡಿಯಲ್ಲಿ ಒಟ್ಟು ರೂ. 454.25 ಲಕ್ಷಗಳನ್ನು ಒದಗಿಸಲಾಗಿದ್ದು ಈ ಮೊತ್ತದಲ್ಲಿ ಕೆ.ಐ.ಎ.ಡಿ.ಬಿ ಸಂಸ್ಥೆಗೆ ರೂ. 254.25 ಲಕ್ಷಗಳನ್ನು ಹಂಚಿಕೆ ಮಾಡಲಾಗಿದೆ. ಈಗಾಗಲೇ ಉಲ್ಲೇಖ (4)ರ ಆದೇಶದಂತೆ 100.00 ಲಕ್ಷಗಳನ್ನು ಗುಲ್ಬರ್ಗಾ ವಿಭಾಗದ ಜಿಲ್ಲೆಗಳ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿಗೆ ಬಿಡುಗಡೆ ಮಾಡಲಾಗಿದ್ದು, ಬಾಕಿ ರೂ. 154.25 ಲಕ್ಷಗಳನ್ನು ಬಿಡುಗಡೆಗೊಳಿಸುವಂತೆ ಆಯುಕ್ತರ ಪತ್ರ ಉಲ್ಲೇಖ (5)ರನ್ವಯ ಕೋರಿರುವ ಹಿನ್ನೆಲೆಯಲ್ಲಿ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ. ಸಿಐ 175 ಎಸ್‌ಪಿಐ 2010, ಬೆಂಗಳೂರು, ದಿನಾಂಕ: 06–08–2010

ನರಸಾಪುರ, ಗದಗ ಜಿಲ್ಲೆ, ಬೇಲೂರು, ಧಾರವಾಡ ಜಿಲ್ಲೆ ಹಾಗೂ ಅಲಿಯಾಬಾದ್, ಬಿಜಾಪೂರ ಜಿಲ್ಲೆಗಳ ಕೈಗಾರಿಕಾ ಪ್ರದೇಶಗಳಲ್ಲಿ ಮೂಲಭೂತ ಸೌಲಭ್ಯಗಳ ಉನ್ನತೀಕರಣಕ್ಕಾಗಿ ಬಾಕಿ ಉಳಿದ ರೂ. 154.25 ಲಕ್ಷಗಳನ್ನು 2010–11ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ 4852–02–800–0–01 (ಯೋಜನೆ) ಅಡಿಯಲ್ಲಿ ಕೆ.ಐ.ಎ.ಡಿ.ಬಿ.ಗೆ ಹಣ ಬಿಡುಗಡೆ ಮಾಡಿ ಈ ಮೂಲಕ ಆದೇಶಿಸಿದೆ.

ಸದರಿ ಅನುದಾನವನ್ನು ಸಿಇಓ, ಕೆ.ಐ.ಎ.ಡಿ.ಬಿ ರವರು ಸಲ್ಲಿಸುವ ಸ್ವೀಕೃತಿ ರಶೀದಿ ಮೇಲೆ ಆಯುಕ್ತರು ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಇವರ ಮೇಲು ರುಜು ಪಡೆದು ರಾಜ್ಯ ಹುಜೂರು ಖಜಾನೆಯಿಂದ ಹಣ ಪಡೆಯುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 2122

ಅಪರ್ಣ ಪಾವಟೆ

ಪೀಠಾಧಿಕಾರಿ (ತಾಂತ್ರಿಕ ಕೋಶ)

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಜಲ ಸಂಪನ್ಮೂಲ ಸಚಿವಾಲಯ

ವಿಷಯ : ಕೊಪ್ಪಳ ಜಿಲ್ಲೆ ಕುಷ್ಟಗಿ ತಾಲ್ಲೂಕು ಪುರ ಸ.ನೀ.ಕೆರೆ ನಿರ್ಮಾಣ ಕಾಮಗಾರಿಗಾಗಿ ಸ್ವಾಧೀನಪಡಿಸಿಕೊಂಡ ಜಮೀನುಗಳಿಗೆ ಭೂಸ್ವಾಧೀನ ಕಾಯ್ದೆ ಕಲಂ 28(ಎ)ರಡಿ ಭೂಸ್ವಾಧೀನಾಧಿಕಾರಿಗಳು ರಚಿಸಿದ ಐತೀರ್ಪಿನನುಸಾರ ಹೆಚ್ಚುವರಿ ಪರಿಹಾರ ಧನ ಪಾವತಿಸುವ ಬಗ್ಗೆ.

ಓದಲಾಗಿದೆ : ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ಉತ್ತರ) ವಲಯ, ಬಿಜಾಪುರರವರ ದಿನಾಂಕ: 04–08–2010ರ ಪತ್ರ ಸಂ:ಮುಇಂ/ಸನೀ(ಉ)ವ/ಬಿಜಾ/ಭೂಸ್ವಾ/2010–11/3334

ಪ್ರಸ್ತಾವನೆ :

ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ಉತ್ತರ) ವಲಯ, ಬಿಜಾಪುರ ಇವರು ಮೇಲೆ ಓದಲಾದ ಪತ್ರದಲ್ಲಿ ಕೊಪ್ಪಳ ಜಿಲ್ಲೆ, ಕುಷ್ಟಗಿ ತಾಲ್ಲೂಕು, ಪುರ ಸ.ನೀ.ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡ ಯತ್ನಟ್ಟಿ ಗ್ರಾಮದ ಜಮೀನುಗಳಿಗೆ ಭೂಸ್ವಾಧೀನ ಕಾಯ್ದೆ ಕಲಂ 28(ಎ)ರಡಿ ಭೂಸ್ವಾಧೀನಾಧಿಕಾರಿಗಳು ರಚಿಸಿರುವ ಐತೀರ್ಪಿನನುಸಾರ ಹೆಚ್ಚುವರಿ ಪರಿಹಾರ ಧನ ಪಾವತಿಸಲು ರೂ. 14,70,708–00ಗಳನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

ಹೆಚ್ಚುವರಿ ಪರಿಹಾರ ಧನಕ್ಕೆ ತೀರ್ಪು ನೀಡಿದ ಜಮೀನುಗಳ ಭೂಸ್ವಾಧೀನ ಪ್ರಕ್ರಿಯೆ ವಿವರಗಳು ಈ ಕೆಳಕಂಡಂತಿವೆ.

– ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರಡಿ ಅಧಿಸೂಚನೆ ಹೊರಡಿಸಿದ ದಿನಾಂಕ: 14–02–2002.

– ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 11(1)ರಡಿ ಭೂಸ್ವಾಧೀನಾಧಿಕಾರಿಗಳು ಪರಿಹಾರಧನದ ಐತೀರ್ಪು ರಚಿಸಿದ ದಿನಾಂಕ 29–07–2005

ಭೂಸ್ವಾಧೀನಕ್ಕೊಳಪಟ್ಟ ಯತ್ನಟ್ಟಿ ಗ್ರಾಮದ ಜಮೀನುಗಳ ಭೂಮಾಲೀಕರು ಭೂಸ್ವಾಧೀನಾಧಿಕಾರಿಗಳು ರಚಿಸಿದ ಪರಿಹಾರ ಧನದ ಐತೀರ್ಪಿನಂತೆ ಹಣ ಪಡೆದು ಇನ್ನೂ ಹೆಚ್ಚಿನ ಪರಿಹಾರ ನೀಡುವಂತೆ ಭೂಸ್ವಾಧೀನ ಕಾಯ್ದೆ ಕಲಂ 18(1)ರಡಿ ಗಂಗಾವತಿ, (ಹಿರಿಯ ಶ್ರೇಣಿ) ಸಿವಿಲ್ ನ್ಯಾಯಾಲಯದಲ್ಲಿ ಭೂಸ್ವಾಧೀನ ಪ್ರಕರಣ ದಾಖಲಿಸಿದ್ದು, ಈ ಪ್ರಕರಣದಲ್ಲಿ ಸಿವಿಲ್ ನ್ಯಾಯಾಲಯವು ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿದೆ. ಸಿವಿಲ್ ನ್ಯಾಯಾಲಯದ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸುವ ಅಗತ್ಯವಿಲ್ಲವೆಂದು ಕಂದಾಯ ಇಲಾಖೆಯ ಪತ್ರ ಸಂಖ್ಯೆ: ಖಇ 316 ಐಅಉ 2008 ದಿನಾಂಕ 16/02/2009 ರಂದು ಅಭಿಪ್ರಾಯ ನೀಡಿರುತ್ತದೆ. ಈ ಕೆಳಕಂಡ ಸರ್ವೇ ನಂಬರ್‌ಗಳ ಭೂಮಾಲೀಕರು ತಮಗೂ ಸದರಿ ತೀರ್ಪಿನನುಸಾರ ಹೆಚ್ಚುವರಿ ಪರಿಹಾರ ಧನ ನೀಡುವಂತೆ ಅರ್ಜಿ ಸಲ್ಲಿಸಿದ ಮೇರೆಗೆ ಭೂಸ್ವಾಧೀನಾಧಿಕಾರಿಗಳು ಭೂಸ್ವಾಧೀನ ಕಾಯ್ದೆ ಕಲಂ 28 (ಎ) ರಡಿ ಹೆಚ್ಚಿನ ಪರಿಹಾರಕ್ಕಾಗಿ ಐತೀರ್ಪು ರಚಿಸಿರುತ್ತಾರೆ.

ಭೂಸ್ವಾಧೀನ ಕಾಯ್ದೆ ಕಲಂ 28(ಎ)ರಡಿ ಪರಿಹಾರ ಕೋರಿದ ಪ್ರಕರಣದ ವಿವರ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ಯತ್ನಟ್ಟಿ ಗ್ರಾಮದ ಸರ್ವೇ ನಂಬರ್	ವಿಸ್ತೀರ್ಣ ಎ–ಗುಂ.		ಪರಿಹಾರ ಧನದ ಮೊತ್ತ ರೂ.ಗಳಲ್ಲಿ
1	63/3	0–30	ಎಲ್.ಎ.ಸಿ. 35/08 ರ ಆಧಾರದ ಮೇಲೆ ಭೂಸ್ವಾಧೀನದ ಕಾಯ್ದೆ ಕಲಂ 28(ಎ) ರಡಿ ಐತೀರ್ಪಿನನುಸಾರ	2,64,197–00
2	59/ಎ	4–15		4,66,752–00
3	59/ಬಿ	0–17		1,58,520–00
4	60	0–31		3,61,073–00
5	99/ಎ	0–11		2,20,166–00
ಒಟ್ಟು				14,70,708–00

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ. ಸನೀಇ 79 ಭೂಸ್ವಾಪ್ರ 2010, ಬೆಂಗಳೂರು, ದಿನಾಂಕ: 06ನೇ ಆಗಸ್ಟ್ 2010

ಕೊಪ್ಪಳ ಜಿಲ್ಲೆ, ಕುಷ್ಟಗಿ ತಾಲ್ಲೂಕು, ಪುರ ಸ.ನೀ.ಕೆರೆ ಜಲಾಶಯದ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡ ಯತ್ನಟ್ಟಿ ಗ್ರಾಮಕ್ಕೆ ಸೇರಿದ ಮೇಲ್ಕಂಡ ಸರ್ವೆ ನಂಬರ್ ಜಮೀನುಗಳಿಗೆ ಭೂಸ್ವಾಧೀನಾಧಿಕಾರಿಗಳು ಭೂಸ್ವಾಧೀನ ಕಾಯ್ದೆ ಕಲಂ 28(ಎ) ರಡಿ ರಚಿಸಿದ ಐತೀರ್ಪಿನಂತೆ ಹೆಚ್ಚಿನ ಪರಿಹಾರ ಧನದ ಮೊತ್ತ ರೂ. 14,70,708/–ಗಳನ್ನು (ಹದಿನಾಲ್ಕು ಲಕ್ಷ ಎಪ್ಪತ್ತು ಸಾವಿರದ ಏಳುನೂರ ಎಂಟು ರೂಪಾಯಿಗಳು ಮಾತ್ರ) ಪಾವತಿಸಲು ಸರ್ಕಾರವು ಅನುಮೋದನೆ ನೀಡಿದೆ. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತ:ಖ್ತೆಯನ್ನು ದೃಢೀಕರಿಸಿಕೊಂಡು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.

ಈ ವೆಚ್ಚವನ್ನು 2010–11ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ 4702–00–800–1–00–ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು–ಇತ್ಯರ್ಥ 132 ಬಂಡವಾಳ ವೆಚ್ಚಗಳು ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ಭರಿಸಿಕೊಳ್ಳತಕ್ಕದ್ದು.

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಕೂಡಲೇ ಸಂಬಂಧಿಸಿದ ಸಣ್ಣ ನೀರಾವರಿ ಅಧಿಕಾರಿಗಳು ವರ್ಗಾವಣೆ ಬಗ್ಗೆ ಕ್ರಮ ಕೈಗೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 2123

ಹೆಚ್.ಎಸ್.ಉದಯಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ)

ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವಾಲಯ

ವಿಷಯ : ಶ್ರೀ ಕೆ. ನವೀನ್‌ಕುಮಾರ್, ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ–2), ಮೀನುಗಾರಿಕೆ, ಬಂದರು ಯೋಜನೆ ಹೊನ್ನಾವರ ರವರನ್ನು ಸರ್ಕಾರಿ ಸೇವೆಯಿಂದ ತೆಗೆದುಹಾಕುವಿಕೆ (ಆಛಿಛಿಡಿಂಜ).

ಓದಲಾಗಿದೆ : ಪತ್ರ ಸಂಖ್ಯೆ : ಎಡಿಎಂ (2)/44/2008–09, ದಿನಾಂಕ 11–05–2010.

ಪ್ರಸ್ತಾವನೆ :

ಮೇಲೆ ಓದಲಾದ ನಿರ್ದೇಶಕರು, ಮೀನುಗಾರಿಕೆ ಇಲಾಖೆ, ಬೆಂಗಳೂರುರವರ ಪತ್ರದಲ್ಲಿ, ಶ್ರೀ ಕೆ.ನವೀನ್‌ಕುಮಾರ್, ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ–2), ಮೀನುಗಾರಿಕೆ, ಬಂದರು ಯೋಜನೆ, ಹೊನ್ನಾವರ ರವರು ದಿನಾಂಕ 02–08–2008 ರಿಂದ ಕರ್ತವ್ಯಕ್ಕೆ ಅನಧಿಕೃತವಾಗಿ ಗೈರು ಹಾಜರಾಗಿದ್ದು, ಸದರಿ ಆರೋಪದ ಮೇಲೆ ಅವರ ವಿರುದ್ಧ ಕೆ.ಸಿ.ಎಸ್. (ಸಿ.ಸಿ.ಎ.) ನಿಯಮಾವಳಿ 1957ರ ನಿಯಮ 11 ರಡಿ ಶಿಸ್ತು ಕ್ರಮ ಪ್ರಾರಂಭಿಸಿ ಅಧಿಕಾರಿಯವರ ಮನೆಯ ವಿಳಾಸಕ್ಕೆ ನೋಟೀಸ್ ಕಳುಹಿಸಿದ್ದು, ಅದು ವಾಪಸ್ಸು ಬಂದಿರುತ್ತದೆಂದು, ಆರೋಪದ ಸತ್ಯಾಸತ್ಯತೆಯನ್ನು ತಿಳಿಯಲು ವಿಚಾರಣಾಧಿಕಾರಿ ಮತ್ತು ಮಂಡನಾಧಿಕಾರಿಯನ್ನು ನೇಮಿಸಿ ಅಧಿಕಾರಿ ವಿಚಾರಣೆಗೆ ಹಾಜರಾಗದಿದ್ದಲ್ಲಿ ಕೆ.ಸಿ.ಎಸ್. (ಸಿ.ಸಿ.ಎ.) ನಿಯಮ 11(2) ರಂತೆ ಏಕಪಕ್ಷೀಯವಾಗಿ ವಿಚಾರಣೆ ಮುಂದುವರೆಸಲು ಸೂಚಿಸಲಾಗಿತ್ತೆಂದು ಮೀನುಗಾರಿಕೆ ನಿರ್ದೇಶಕರು ತಿಳಿಸಿರುತ್ತಾರೆ.

ಮುಂದುವರೆದು, ಲಭ್ಯವಿದ್ದ ಸಾಕ್ಷಿಗಳು ಮತ್ತು ಪುರಾವೆಗಳನ್ನು ಆಧರಿಸಿ ವಿಚಾರಣಾಧಿಕಾರಿಗಳು ಏಕಪಕ್ಷೀಯವಾಗಿ ವಿಚಾರಣೆಯನ್ನು ನಡೆಸಿ ವರದಿ ಸಲ್ಲಿಸಿದ್ದು, ಆರೋಪವು ಸಾಬೀತಾಗಿದ್ದರಿಂದ, ಆರೋಪಿತರಿಗೆ ಎರಡನೇ ಕಾರಣ ಕೇಳುವ ನೋಟೀಸನ್ನು ಜಾರಿಗೊಳಿಸಲಾಗಿತ್ತೆಂದು,

ಇದಕ್ಕೆದುರಾಗಿ ಆರೋಪಿತರು ತಮ್ಮ ಹೇಳಿಕೆಯಲ್ಲಿ ಉನ್ನತ ಶಿಕ್ಷಣಕ್ಕಾಗಿ ಅನುಮತಿ ಕೋರಿ ದಿನಾಂಕ 04–05–2008 ರಲ್ಲಿ ಅರ್ಜಿ ಸಲ್ಲಿಸಿದ್ದು, ಸರ್ಕಾರದ ಅನುಮತಿಯ ನಿರೀಕ್ಷೆಯ ಮೇರೆಗೆ ಯುರೋಪಿನ ನೆದರ್‌ಲ್ಯಾಂಡ್‌ನಲ್ಲಿ ದಿನಾಂಕ : 04–08–2008 ರಂದು ಹಾಜರಾಗಿರುವುದಾಗಿ, 2 ವರ್ಷಗಳ ಶಿಕ್ಷಣದ ನಂತರ ಕರ್ತವ್ಯಕ್ಕೆ ಹಾಜರಾಗುವುದಾಗಿ ತಿಳಿಸಿ ಶಿಸ್ತು ಕ್ರಮವನ್ನು ಕೈಬಿಡುವಂತೆ ಕೋರಿರುತ್ತಾರೆಂದು ವರದಿ ಮಾಡುತ್ತಾ ಈ ಬಗ್ಗೆ ಸರ್ಕಾರದ ಹಂತದಲ್ಲಿ ಕ್ರಮ ವಹಿಸುವಂತೆ ಕೋರಿರುತ್ತಾರೆ.

ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಪರಿಶೀಲಿಸಿ, ಶ್ರೀ ಕೆ.ನವೀನ್‌ಕುಮಾರ್, ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ–2) ರವರು ದಿನಾಂಕ 03–07–2007 ರಂದು ಸರ್ಕಾರಿ ಸೇವೆಗೆ ಸೇರಿದ್ದು, ಸದರಿಯವರ 2 ವರ್ಷದ ಖಾಯಂಪೂರ್ವ ಪರೀಕ್ಷಣಾವಧಿ ದಿನಾಂಕ : 02–07–2009 ರಂದು ಪೂರ್ಣವಾಗಬೇಕಾಗಿದ್ದು, ಅದಕ್ಕೂ ಮೊದಲೇ ಅಂದರೆ ಖಾಯಂಪೂರ್ವ ಪರೀಕ್ಷಾವಧಿಯಲ್ಲಿ ಅಧಿಕಾರಿಯು ಅನಧಿಕೃತವಾಗಿ ಕರ್ತವ್ಯಕ್ಕೆ ಗೈರು ಹಾಜರಾಗಿರುವುದರಿಂದ, ನಿಯಮಾನುಸಾರ ಪರಿಶೀಲಿಸಿ ಅವರನ್ನು ಸರ್ಕಾರಿ ಸೇವೆಯಿಂದ ತೆಗೆದುಹಾಕಲು ಸರ್ಕಾರವು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂ : ಪಸಂಮೀ 114 ಮೀಇಸೇ 2010, ಬೆಂಗಳೂರು, ದಿನಾಂಕ : 31–07–2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಶ್ರೀ ಕೆ.ನವೀನ್‌ಕುಮಾರ್, ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ–2), ಮೀನುಗಾರಿಕೆ, ಬಂದರು ಯೋಜನೆ, ಹೊನ್ನಾವರರವರು ಖಾಯಂಪೂರ್ವ ಪರೀಕ್ಷಾವಧಿಯಲ್ಲಿ ಕರ್ತವ್ಯಕ್ಕೆ ಅನಧಿಕೃತವಾಗಿ ಗೈರು ಹಾಜರಾಗಿ ದುರ್ವರ್ತನೆ ತೋರಿ ಕರ್ತವ್ಯಲೋಪ ಎಸಗಿರುವುದು ದೃಢಪಟ್ಟಿರುವುದರಿಂದ, ಸದರಿಯವರು ಈ ಹುದ್ದೆಯಲ್ಲಿ ಸೇವೆ ಮಾಡಲು ಅನರ್ಹರು ಎಂದು ಪರಿಗಣಿಸಿ ಕರ್ನಾಟಕ ನಾಗರೀಕ ಸೇವಾ (ಪರೀಕ್ಷಾರ್ಥ) ನಿಯಮಗಳು, 1977ರ ನಿಯಮ 6(1) ರನ್ವಯ ಅವರನ್ನು ಗೈರು ಹಾಜರಾದ ದಿನಾಂಕ 02–08–2008 ರಿಂದಲೇ ಜಾರಿಗೆ ಬರುವಂತೆ ಸರ್ಕಾರಿ ಸೇವೆಯಿಂದ ತೆಗೆದುಹಾಕಲಾಗಿದೆ (Discharge).

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಡಿ.ಎಂ. ರಾಜಣ್ಣ,
ಸರ್ಕಾರದ ಅಧೀನ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ (ಮೀ).

ಪಿ.ಆರ್. 2132

FOREST, ECOLOGY AND ENVIRONMENT SECRETARIAT

SUB :- Grant of quarry leases in respect of buildings materials such as sand, jelly, stones, boulders and laterite stones in forest areas of the Western Ghats region – relaxation given to Public Works Department and Ports and Inland Water Transport Department, Shimoga.

READ :- 1. Government Order No. FEE 115 FFM 2001, dated 26-02-2004.

2. Letter No. A5(6) GFL.CR.34/09-10, dtd : 30-07-2010 of the Principal Chief Conservator of Forests, Bangalore.

PREAMBLE:

In Government Order read at 1 above, guidelines in the Annexure were issued by the State Government for grant of quarry lease in respect of building materials such as sand, jelly, stones boulders and laterite stones in forest areas of the Western Ghats region of Karnataka.

The Principal Chief Conservator of Forests has sent additional information to Government in his letter dated : 30-7-2010 read at (2) above for diversion of 20.80 ha. of forest land for quarrying of stones in Joga village of Honnali Taluk, Davangere District in favour of Executive Engineer, Public Works Department and Ports and Inland Water Transport Department, Shimoga.

He has further stated that since the material is required for development activities and the user agency is the Government Department, area was proposed for diversion. Further, this would help in controlling the entry of large number of private user agencies to the forest for quarrying purpose. Therefore, the condition Nos. 2,3,7,12,13 and 14 of G.O. No. FEE 115 FFM 2001, dated 26-02-2004 be relaxed at Government level.

The proposal has been examined in detail and the following orders are issued.

Government Order No. FEE 182 FFM 2009, Bangalore, dated 03-08-2010

After considering the additional information of Principal Chief Conservator of Forests, Government are pleased to accord relaxation of Sl.No. 2, 3, 7, 12, 13 and 14 of the guidelines of the Annexure to the G.O. No. FEE 115 FFM 2001, dated 26-02-2004 specifically for diversion of 20.80 ha. of forest land for quarrying of stones in Joga Village, Honnali Taluk, Davangere District in favour of Executive Engineer, Public Works Department and Ports and Inland Water Transport Department, Shimoga District.

This Order issued with immediate effect and until further orders.

By Order and in the name of the Governor of Karnataka
H.M. MALLIKARJUNA SWAMY
Under secretary to Government
Forest, Ecology and Environment Department.

P.R. 2133

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ

ವಿಷಯ : ಮಾಜಿ ದೇವದಾಸಿ ಮಹಿಳೆಯರಿಗೆ ಮಾಸಾಶನ ನೀಡುವ ಕುರಿತು ಅನುದಾನ ಬಿಡುಗಡೆ ಮಾಡುವ ಬಗ್ಗೆ – ಆದೇಶ.

ಓದಲಾಗಿದೆ :
1. ಸರ್ಕಾರಿ ಆದೇಶ ಸಂಖ್ಯೆ : ಮಮ ಇ : 57 ಮಅನಿ 2008 : ದಿನಾಂಕ 15.03.2008.
2. ಸರ್ಕಾರಿ ಆದೇಶ ಸಂಖ್ಯೆ : ಮಮ ಇ : 35 ಮಅನಿ 2010 : ದಿನಾಂಕ 29.04.2010.
3. ವ್ಯವಸ್ಥಾಪಕ ನಿರ್ದೇಶಕರು, ಮಹಿಳಾ ಅಭಿವೃದ್ಧಿ ನಿಗಮ, ಬೆಂಗಳೂರು ಇವರ ಪತ್ರ ಸಂಖ್ಯೆ ಮಅನಿ : 01 ಲೆ.ಶಾ 2010–11 : ದಿನಾಂಕ 03.04.2010.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮಾಂಕ (1)ರ ಸರ್ಕಾರದ ಆದೇಶದಲ್ಲಿ ರಾಜ್ಯದ ಮಾಜಿ ದೇವದಾಸಿ ಮಹಿಳೆಯರಿಗೆ ಮಾಸಿಕ ರೂ.400 ಗಳ ಮಾಸಾಶನವನ್ನು ತಾಲ್ಲೂಕಿನ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ನೇರವಾಗಿ ಖಜಾನೆಯಿಂದ ಹಣ ಸೆಳೆದು ಅರ್ಹ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಜಮಾ ಮಾಡಲು ಅನುಮತಿ ನೀಡಲಾಗಿರುತ್ತದೆ.

ಮೇಲೆ ಓದಲಾದ ಕ್ರಮಾಂಕ (2)ರ ಸರ್ಕಾರದ ಆದೇಶದಲ್ಲಿ 2009–10ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ಅನುಷ್ಠಾನಗೊಳಿಸುತ್ತಿರುವ ಮಾಜಿ ದೇವದಾಸಿ ಮಹಿಳೆಯರಿಗೆ ಮಾಸಾಶನ ಯೋಜನೆಗೆ ಲೆಕ್ಕಶೀರ್ಷಿಕೆ 2235–02–101–0–53 ಉಪ ಲೆಕ್ಕಶೀರ್ಷಿಕೆ 251 ರಡಿ ಒದಗಿಸಲಾಗಿರುವ ರೂ.700–00 ಲಕ್ಷಗಳಲ್ಲಿ ಮೊದಲನೇ ಕಂತಾಗಿ ರೂ.175.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ.

ಮೇಲೆ ಓದಲಾದ ಕ್ರಮಾಂಕ (3)ರ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ, ಇವರ ಪ್ರಸ್ತಾವನೆಯಲ್ಲಿ 2010–11ನೇ ಸಾಲಿನಲ್ಲಿ ಉತ್ತರ ಕರ್ನಾಟಕದ ಜಿಲ್ಲೆಗಳಾದ ಬೆಳಗಾವಿ, ಬಿಜಾಪುರ, ಬಾಗಲಕೋಟೆ, ಬಳ್ಳಾರಿ, ರಾಯಚೂರು, ಕೊಪ್ಪಳ, ಗದಗ, ಗುಲ್ಬರ್ಗಾ, ಧಾರವಾಡ ಮತ್ತು ಹಾವೇರಿ ಜಿಲ್ಲೆಗಳಲ್ಲಿನ 45 ವರ್ಷ ವಯಸ್ಸು ಮೀರಿದ ಮಾಜಿ ದೇವದಾಸಿ ಮಹಿಳೆಯರಿಗೆ ಮಾಸಿಕ ರೂ.400 ಗಳ ಮಾಸಾಶನ ಮಂಜೂರು ಮಾಡಲು ರೂ.175.00 ಲಕ್ಷಗಳ ಅನುದಾನವನ್ನು ಸರ್ಕಾರದಿಂದ ಬಿಡುಗಡೆ ಮಾಡಲಾಗಿದ್ದು, ಲಭ್ಯವಿರುವ ಅನುದಾನಕ್ಕೆ ಅನುಗುಣವಾಗಿ ಹಾಗೂ ಫಲಾನುಭವಿಗಳ ಸಂಖ್ಯೆಯನ್ನು ಗಣನೆಗೆ ತೆಗೆದುಕೊಂಡು 3 ತಿಂಗಳ ಅವಧಿಗೆ (ಬಾಗಲಕೋಟೆ ಜಿಲ್ಲೆಗೆ 2 ತಿಂಗಳ ಅವಧಿಗೆ) ಮಾಸಾಶನವನ್ನು ಅರ್ಹ ಫಲಾನುಭವಿಗಳಿಗೆ ಅನುದಾನ ಬಿಡುಗಡೆ ಮಾಡಲು ಕೋರಿ ಜಿಲ್ಲಾವಾರು/ತಾಲ್ಲೂಕುವಾರು ಮಾಜಿ ದೇವದಾಸಿಯರ ವಿವರಗಳೊಂದಿಗೆ ಹಾಗೂ ಬಿಡುಗಡೆ ಮಾಡಬೇಕಾದ ಮೊತ್ತವನ್ನು ನಮೂದಿಸಿ ಅನುದಾನ ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂ : ಮಮ ಇ : 55 : ಮಅನಿ : 2010, ಬೆಂಗಳೂರು, ದಿನಾಂಕ : 31–07–2010

ಪ್ರಸ್ತಾವನೆಯಲ್ಲಿ ವಿವರಿಸಲಾಗಿರುವ ಅಂಶಗಳ ಹಿನ್ನೆಲೆಯಲ್ಲಿ, 2010–11ನೇ ಸಾಲಿನಲ್ಲಿ ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದಲ್ಲಿ ನಮೂದಿಸಿರುವಂತೆ ಬಾಗಲಕೋಟೆ ಜಿಲ್ಲೆಯ ಮಾಜಿ ದೇವದಾಸಿ ಮಹಿಳೆಯರಿಗೆ 2 ತಿಂಗಳ ಅವಧಿಗೆ ಹಾಗೂ ಇತರೆ ಜಿಲ್ಲೆಯಲ್ಲಿನ ಮಾಜಿ ದೇವದಾಸಿ ಮಹಿಳೆಯರಿಗೆ ಮೂರು ತಿಂಗಳ ಅವಧಿಗೆ ರೂ.400 ಗಳಂತೆ ಮಾಸಾಶನವನ್ನು ಪಾವತಿಸಲು 2ನೇ ಕಂತಾಗಿ ರೂ.175.00 (ರೂಪಾಯಿ ಒಂದು ನೂರಾ ಎಪ್ಪತ್ತೈದು ಲಕ್ಷಗಳು ಮಾತ್ರ) ಲಕ್ಷಗಳನ್ನು ಬಿಡುಗಡೆ ಮಾಡಲು ಆದೇಶಿಸಿದೆ. ತಾಲ್ಲೂಕಿನ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ನೇರವಾಗಿ ಖಜಾನೆಯಿಂದ ಹಣ ಸೆಳೆದು ಅರ್ಹ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಜಮಾ ಮಾಡುವುದು ಹಾಗೂ ಸದರಿ ಮೊಬಲಗನ್ನು ಉಪಯೋಗಿಸಿ ತಕ್ಷಣವೇ ಉಪಯುಕ್ತತಾ ಪ್ರಮಾಣ ಪತ್ರವನ್ನು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ಇವರಿಗೆ ಸಲ್ಲಿಸುವುದು.

ಇದಕ್ಕೆ ತಗಲುವ ವೆಚ್ಚವನ್ನು ಮಾಜಿ ದೇವದಾಸಿಯರಿಗೆ ಮಾಸಾಶನ ಪಿಂಚಣಿ ಮತ್ತು ನಿವೃತ್ತಿ ಸೌಲಭ್ಯಗಳು ಲೆಕ್ಕ ಶೀರ್ಷಿಕೆ 2235–02–103–0–053–251 (ಯೋಜನೆ) ಅಡಿಯಲ್ಲಿ ಒದಗಿಸಿರುವ ಆಯವ್ಯಯದಲ್ಲಿ ಭರಿಸುವುದು.

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂಖ್ಯೆ : ಸಕಕಾ 140 ಆಂಅಸ 2010, ದಿನಾಂಕ 24.04.2010 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹಾಗೂ ಸರ್ಕಾರದ ಆದೇಶ ಸಂಖ್ಯೆ : ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ 16–05–2008 ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ. ಕಮಲಮ್ಮ

ಸರ್ಕಾರದ ಅಧೀನ ಕಾರ್ಯದರ್ಶಿ–2,

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.

ಸರ್ಕಾರದ ಆದೇಶ ಸಂಖ್ಯೆ : ಮಮಇ 55 ಮಅನಿ 2010, ದಿನಾಂಕ 31–07–2010 ಕ್ಕೆ

ಅನುಬಂಧ

2010–11ನೇ ಸಾಲಿನಲ್ಲಿ ಮಾಸಾಶನ ಪಡೆಯಲು ಜನವರಿ 2010 ರಿಂದ ಮಾರ್ಚ್ 2010 ರವರೆಗೆ ಅರ್ಹರಿರುವ ಫಲಾನುಭವಿಗಳ ಸಂಖ್ಯೆ ಮತ್ತು ಅಗತ್ಯವಿರುವ ಮೊತ್ತದ ವಿವರ

ಕ್ರ. ಸಂ.	ಜಿಲ್ಲೆಗಳು / ತಾಲ್ಲೂಕುಗಳು	2010–11ನೇ ಸಾಲಿನ ಫಲಾನುಭವಿಗಳ ಸಂಖ್ಯೆ	ಬಿಡುಗಡೆ ಮಾಡುತ್ತಿರುವ 1ನೇ ಕಂತಿನ ಅನುದಾನ
1	2	3	4
1	**ಬಿಜಾಪುರ ಜಿಲ್ಲೆ**		
	(1) ಬಿಜಾಪುರ	738	885600
	(2) ಇಂಡಿ	98	117600

	(3) ಸಿಂದಗಿ	253	303600
	(4) ಬಿ. ಬಾಗೇವಾಡಿ	529	634800
	(5) ಮುದ್ದೆಬೀಹಾಳ	392	470400
	ಒಟ್ಟು	**2010**	**2412000**
2	**ಬಾಗಲಕೋಟೆ**		
	(1) ಬಾಗಲಕೋಟೆ	331	264800
	(2) ಜಮಖಂಡಿ	830	664000
	(3) ಮುಧೋಳ	917	758000
	(4) ಬೀಳಗಿ	308	369600
	(5) ಬದಾಮಿ	308	246400
	(6) ಹುನಗುಂದ	224	179200
	ಒಟ್ಟು	**2918**	**2482000**
3	**ಬೆಳಗಾವಿ**		
	(1) ಬೆಳಗಾವಿ (ನ)	20	24000
	(2) ಅಥಣಿ	602	722400
	(3) ರಾಯಬಾಗ	603	723600
	(4) ಸವದತ್ತಿ	152	182400
	(5) ಹುಕ್ಕೇರಿ	461	553200
	(6) ಗೋಕಾಕ	439	526800
	(7) ಚಿಕ್ಕೋಡಿ	308	369600
	(8) ಖಾನಾಪೂರ	22	26400
	(9) ಬೈಲಹೊಂಗಲ	71	85200
	(10) ರಾಮದುರ್ಗ	448	537600
	ಒಟ್ಟು	**3126**	**3751200**
4	**ಬಳ್ಳಾರಿ**		
	(1) ಹೊಸಪೇಟೆ	538	645600
	(2) ಸಂಡೂರು	747	896400
	ಒಟ್ಟು	**1285**	**1542000**
5	**ಕೊಪ್ಪಳ**		
	(1) ಕೊಪ್ಪಳ	612	734400
	(2) ಗಂಗಾವತಿ	734	880800
	(3) ಯಲಬುರ್ಗಾ	236	283200
	(4) ಕುಷ್ಟಗಿ	243	291600
	ಒಟ್ಟು	**1825**	**2190000**
6	**ರಾಯಚೂರು**		
	(1) ರಾಯಚೂರು	160	192000
	(2) ಮಾನ್ವಿ	451	541200
	(3) ದೇವದುರ್ಗ	393	471600
	(4) ಲಿಂಗಸಗೂರು	526	631200
	(5) ಸಿಂಧನೂರು	460	552000
	ಒಟ್ಟು	**1990**	**2388000**
7	**ಗುಲ್ಬರ್ಗಾ**		
	(1) ಸುರಪುರ	120	144000
	(2) ಶಹಾಪುರ	146	175200
	(3) ಯಾದಗಿರಿ	30	36000
	(4) ಜೇವರ್ಗಿ	87	104400
	(5) ಆಳಂದ	129	154800
	(6) ಚಿತ್ತಾಪೂರ	64	76800
	(7) ಸೇಡಂ	11	13200
	(8) ಅಫ್ಜಲ್‌ಪುರ	35	42000
	(9) ಚಿಂಚೋಳಿ	2	0

	ಒಟ್ಟು	**624**	**746400**
8	**ಗದಗ**		
	(1) ಗದಗ	164	196800
	(2) ಶಿರಹಟ್ಟಿ	198	237600
	(3) ರೋಣ	251	301200
	(4) ಮುಂಡರಗಿ	82	98400
	(5) ನರಗುಂದ	49	58800
	ಒಟ್ಟು	**744**	**892800**
9	**ಧಾರವಾಡ**		
	(1) ಧಾರವಾಡ (ಗ್ರಾ)	43	51600
	(2) ಹುಬ್ಬಳ್ಳಿ (ಗ್ರಾ)	48	57600
	(3) ಹುಬ್ಬಳ್ಳಿ ಧಾರವಾಡ	150	180000
	(4) ಕುಂದಗೋಳ	130	156000
	(5) ಕಲಘಟಗಿ	30	36000
	(6) ನವಲಗುಂದ	66	79200
	ಒಟ್ಟು	**467**	**560400**
10	**ಹಾವೇರಿ**		
	(1) ಹಾವೇರಿ	128	153600
	(2) ರಾಣೆಬೆನ್ನೂರು	88	105600
	(3) ಶಿಗ್ಗಾಂವ	42	50400
	(4) ಹಿರೇಕೆರೂರು	50	60000
	(5) ಹಾನಗಲ್	16	19200
	(6) ಸವಣೂರು	95	114000
	(7) ಬ್ಯಾಡ್ಗಿ	27	32400
	ಒಟ್ಟು	446	535200
	ಒಟ್ಟು ಮೊತ್ತ	**15435**	**17500000**

ಬಿ. ಕಮಲಮ್ಮ
ಸರ್ಕಾರದ ಅಧೀನ ಕಾರ್ಯದರ್ಶಿ-2,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.

ಪಿ.ಆರ್. ನಂ. 2134

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಮಹ್ಮದ್ ಇಸ್ಮಾಯಿಲ್, ಪಿ.ಎಸ್.ಐ. ರವರ ಖಾಯಂಪೂರ್ವ ಅವಧಿ ವಿಸ್ತರಿಸುವ ಕುರಿತು.

ಓದಲಾಗಿದೆ : ಡಿಜಿ ಮತ್ತು ಐಜಿಪಿ ರವರ ಪತ್ರ ಸಂಖ್ಯೆ : 120/ಸಿಬ್ಬಂದಿ-1/2009-10, ದಿನಾಂಕ 07.03.2008 ಮತ್ತು 23.06.2010.

ಪ್ರಸ್ತಾವನೆ :

ಮೇಲೆ ಓದಲಾದ (1)ರ ಪತ್ರದಲ್ಲಿ ಶ್ರೀ ಮಹ್ಮದ್ ಇಸ್ಮಾಯಿಲ್, ಪಿ.ಎಸ್.ಐ., ಹೆಚ್ಚುವರಿ ಸಂಚಾರಿ ಪೊಲೀಸ್ ಠಾಣೆ, ಗುಲ್ಬರ್ಗಾ ಜಿಲ್ಲೆ ರವರು ಸೇವಾನಿರತ ಪಿ.ಎಸ್.ಐ. ಹುದ್ದೆಗೆ ದಿನಾಂಕ 15-09-2003 ರಂದು ನೇಮಕಾತಿ ಹೊಂದಿ, 2 1/2 ವರ್ಷಗಳ ಖಾಯಂಪೂರ್ವ ಅವಧಿಯನ್ನು ದಿನಾಂಕ 15-03-2006 ಕ್ಕೆ ಪೂರ್ಣಗೊಳಿಸಿದ್ದು, ಸದರಿಯವರು ನಿಗದಿತ ಇಲಾಖಾ ಪರೀಕ್ಷೆಯಾದ ಅಕೌಂಟ್ಸ್ ಹೈಯರ್ ನಲ್ಲಿ ಉತ್ತೀರ್ಣರಾಗಿಲ್ಲದಿದ್ದರಿಂದ, ಇವರ ಖಾಯಂಪೂರ್ವ ಅವಧಿಯನ್ನು ಕೆ.ಸಿ.ಎಸ್. (ಪ್ರೊಬೇಷನ್) ನಿಯಮ, 1977ರ ನಿಯಮಾವಳಿ 4(1)(ii) ರ ಮೇರೆಗೆ ದಿನಾಂಕ 16-03-2006 ರಿಂದ 15.06.2007 ರವರೆಗೆ ಐ.ಜಿ.ಪಿ. ಈಶಾನ್ಯ ವಲಯ, ಗುಲ್ಬರ್ಗಾ ರವರು ವಿಸ್ತರಿಸಿ ಆದೇಶಿಸಿರುತ್ತಾರೆ.

ತದನಂತರ ಸದರಿ ಪಿ.ಎಸ್.ಐ. ರವರು 2009ನೇ ಸಾಲಿನ ಪ್ರಥಮ ಅಧಿವೇಶನದಲ್ಲಿ ಇಲಾಖಾ ಪರೀಕ್ಷೆಯಾದ ಅಕೌಂಟ್ಸ್ ಹೈಯರ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದು, ಇವರ ವಿರುದ್ಧ ಯಾವುದೇ ಕ್ರಿಮಿನಲ್ ಮೊಕದ್ದಮೆ/ಚಾಲ್ತಿ ಶಿಕ್ಷೆ ಇರುವುದಿಲ್ಲ ಹಾಗೂ ಕೆ.ಸಿ.ಎಸ್. (ಪ್ರೊಬೇಷನ್) ನಿಯಮಗಳು, 1977ರ ನಿಯಮ 4 ಮತ್ತು 5(1) ರನ್ವಯ ಇವರು ಹೊಂದಿರುವ ಹುದ್ದೆಯ ಕಾರ್ಯಭಾರ ನಿರ್ವಹಿಸಲು ಸಮರ್ಥರಾಗಿದ್ದು, ಇವರ ಖಾಯಂಪೂರ್ವ ಅವಧಿಯನ್ನು ದಿನಾಂಕ 16-06-2007 ರಿಂದ 29-08-2009 ರವರೆಗೆ ವಿಸ್ತರಿಸುವಂತೆ ಡಿಜಿ ಮತ್ತು ಐಜಿಪಿ ರವರು ಕೋರಿರುತ್ತಾರೆ.

ಸರ್ಕಾರದ ಆದೇಶ ಸಂ : ಒಇ 147 ಪೊಸಇ 2010, ಬೆಂಗಳೂರು, ದಿನಾಂಕ : 09-08-2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ನು ಪರಿಶೀಲಿಸಿ ಸರ್ಕಾರವು ಕರ್ನಾಟಕ ನಾಗರೀಕ ಸೇವಾ (ಪರಿವೀಕ್ಷಣಾ) ನಿಯಮಗಳು, 1977ರ ನಿಯಮ 4(1)(ಽ) ರನ್ವಯ ಶ್ರೀ ಮಹ್ಮದ್ ಇಸ್ಮಾಯಿಲ್, ಪಿ.ಎಸ್.ಐ. ಇವರ ಖಾಯಂ ಪೂರ್ವ ಅವಧಿಯನ್ನು ದಿನಾಂಕ 16-06-2007 ರಿಂದ 03-12-2009 ರವರೆಗೆ (ಇವರು ಅಕೌಂಟ್ಸ್ ಹೈಯರ್ ಪರೀಕ್ಷೆ ಫಲಿತಾಂಶವು ರಾಜ್ಯ ಪತ್ರದಲ್ಲಿ ಪ್ರಕಟಣೆಯಾದ ದಿನಾಂಕದವರೆಗೆ) ವಿಸ್ತರಿಸಿ ಆದೇಶಿಸಿದೆ.

ವಿಸ್ತರಿಸಿದ ಪರಿವೀಕ್ಷಣಾ ಅವಧಿಗೆ ಕ.ನಾ.ಸೇ. (ಪರಿವೀಕ್ಷಣೆ) ನಿಯಮಗಳು 1977ರ ನಿಯಮ 10ರ ಪ್ರಕಾರ ವಾರ್ಷಿಕ ವೇತನ ಬಡ್ತಿಗಳನ್ನು ನೀಡುವಂತಿಲ್ಲ. ಕಾಲ್ಪನಿಕವಾಗಿ ವಾರ್ಷಿಕ ವೇತನ ಬಡ್ತಿಗಳನ್ನು ಪರಿಗಣಿಸಿ ವೇತನವನ್ನು ನಿಗದಿಪಡಿಸುವುದು. ಹೀಗೆ ನಿಗದಿಪಡಿಸಿದ ವೇತನದ ಬಾಕಿಯನ್ನು ನೀಡಲು ಅವಕಾಶವಿರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಟಿ.ಎನ್. ರವಿಪ್ರಕಾಶ್,

ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ.ಆರ್. 2135 ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು).

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಅನಿವಾಸಿ ಭಾರತೀಯ ಸಮಿತಿ, ಕರ್ನಾಟಕ, ಬೆಂಗಳೂರು ಇದರ ಉಪಾಧ್ಯಕ್ಷರ ಆಪ್ತ ಶಾಖೆ ಹಾಗೂ ಸಮಿತಿಯ ಶಾಖೆಗೆ ಹುದ್ದೆಗಳನ್ನು ಮುಂದುವರೆಸುವ ಬಗ್ಗೆ.

ಓದಲಾಗಿದೆ : 1. ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 68 ಶಿಸನೇ 2008, ದಿನಾಂಕ 24-11-2008.

2. ಉಪಾಧ್ಯಕ್ಷರು, ಅನಿವಾಸಿ ಭಾರತೀಯ ಸಮಿತಿ, ಕರ್ನಾಟಕ, ಇವರ ಕಡತ ಸಂಖ್ಯೆ : ಅಭಾಸಕ/ಅಕಾ/15/10, ದಿನಾಂಕ 24-05-2010.

ಪ್ರಸ್ತಾವನೆ :

ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 68 ಶಿಸನೇ 2000, ದಿನಾಂಕ 05-08-2008 ರಂದು "ಅನಿವಾಸಿ ಭಾರತೀಯ ಸಮಿತಿ" ಕರ್ನಾಟಕ ಇದನ್ನು ರಚಿಸಲಾಗಿದೆ.

ಮೇಲೆ ಓದಲಾದ ಕ್ರಮಸಂಖ್ಯೆ (1) ರಲ್ಲಿನ ಆದೇಶದಲ್ಲಿ ಉಪಾಧ್ಯಕ್ಷರು ಅನಿವಾಸಿ ಭಾರತೀಯರ ಸಮಿತಿಯು ಸಮರ್ಪಕವಾಗಿ ಕಾರ್ಯನಿರ್ವಹಿಸಲು ಅನುವಾಗುವಂತೆ ಉಪಾಧ್ಯಕ್ಷರ ಆಪ್ತ ಶಾಖೆಗೆ ಹಾಗೂ ಸಮಿತಿಯ ಶಾಖೆಗೆ ಅಗತ್ಯ ಸಿಬ್ಬಂದಿಯನ್ನು ಸೃಜಿಸಲಾಗಿದೆ.

ಮೇಲೆ ಓದಲಾದ ಕ್ರಮಸಂಖ್ಯೆ (2) ರಲ್ಲಿನ ಟಿಪ್ಪಣಿಯಲ್ಲಿ ಸದರಿ ಹುದ್ದೆಗಳನ್ನು ಮುಂದುವರೆಸುವಂತೆ ಕೋರಲಾಗಿದೆ. ಅದರಂತೆ ಅನಿವಾಸಿ ಭಾರತೀಯ ಸಮಿತಿ, ಕರ್ನಾಟಕ, ಇದರ ಕಾರ್ಯನಿರ್ವಹಣೆಗೆ ಅಗತ್ಯ ಹುದ್ದೆಗಳನ್ನು ಮುಂದುವರೆಸುವ ಬಗ್ಗೆ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂ : ಸಿಆಸುಇ 55 ಶಿಸನೇ 2010, ಬೆಂಗಳೂರು, ದಿನಾಂಕ : 10-08-2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, "ಅನಿವಾಸಿ ಭಾರತೀಯ ಸಮಿತಿ, ಕರ್ನಾಟಕ" ಇದರ ಉಪಾಧ್ಯಕ್ಷರ ಆಪ್ತ ಶಾಖೆ ಹಾಗೂ ಸಮಿತಿಯ ಕಛೇರಿಗೆ ಈ ಕೆಳಕಂಡ ಹುದ್ದೆಗಳನ್ನು ದಿನಾಂಕ 24-11-2010 ರಿಂದ 2 ವರ್ಷಗಳ ಅವಧಿಗೆ ಮುಂದುವರೆಸಿದೆ.

ಆಪ್ತ ಶಾಖೆಗೆ :	
ಆಪ್ತ ಕಾರ್ಯದರ್ಶಿ	01 ಹುದ್ದೆ
ಗ್ರೂಪ್ - ಸಿ	02 ಹುದ್ದೆಗಳು
ಗ್ರೂಪ್ - ಡಿ	02 ಹುದ್ದೆಗಳು
ವಾಹನ ಚಾಲಕ	01 ಹುದ್ದೆ
ಸಮಿತಿಯ ಶಾಖೆಗೆ :	
ಸದಸ್ಯ ಕಾರ್ಯದರ್ಶಿ	01 ಹುದ್ದೆ
ಅಧೀನ ಕಾರ್ಯದರ್ಶಿ	01 ಹುದ್ದೆ
ಡಾಟಾ ಎಂಟ್ರಿ ಆಪರೇಟರ್	01 ಹುದ್ದೆ
ಸಹಾಯಕ/ಹಿರಿಯ ಸಹಾಯಕ	01 ಹುದ್ದೆ
ಕಿರಿಯ ಸಹಾಯಕ	01 ಹುದ್ದೆ
ವಾಹನ ಚಾಲಕ	01 ಹುದ್ದೆ
ಗ್ರೂಪ್ - ಡಿ	01 ಹುದ್ದೆ
	07 ಹುದ್ದೆಗಳು

2. ಈ ಹುದ್ದೆಗಳನ್ನು deputation/out source ಮೂಲಕ ತುಂಬತಕ್ಕದ್ದು.

3. ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ : ಆಇ 495 ವೆಚ್ಚ-12 2010, ದಿನಾಂಕ 27-07-2010 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ. ರಹಮತ್ ಉಲ್ಲಾ,

ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ.ಆರ್. 2136 ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ

(ರಾಜ್ಯ ಶಿಷ್ಟಾಚಾರ).

ಒಳಾಡಳಿತ ಸಚಿವಾಲಯ

ವಿಷಯ : ನಕಲಿ ಛಾಪಾ ಕಾಗದದ ಹಗರಣಗಳಿಗೆ ಸಂಬಂಧಿಸಿದಂತೆ ವಿಚಾರಣಾಧಿಕಾರಿಗಳನ್ನು ಬದಲಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ : ಒಇ 23 ಪೊಸಿಪ 2004 ದಿನಾಂಕ 23-01-2004, 07-01-2005.
2. ಸರ್ಕಾರದ ಆದೇಶ ಸಂಖ್ಯೆ : ಒಇ 23 ಪೊಸಿಪ 2004 ದಿನಾಂಕ 11-12-2006.
3. ಸರ್ಕಾರದ ಆದೇಶ ಸಂಖ್ಯೆ : ಒಇ 23 ಪೊಸಿಪ 2004 ದಿನಾಂಕ 13-05-2009.
4. ಪೊಲೀಸ್ ಮಹಾನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು ರವರ ಕಛೇರಿ ಪತ್ರ ಸಂಖ್ಯೆ : ಸಿಬಿ (5) 25-03-04, ದಿನಾಂಕ 15-06-2010.

ಪ್ರಸ್ತಾವನೆ :

ಮೇಲೆ (1) ರಲ್ಲಿ ಓದಲಾದ ಆದೇಶದಲ್ಲಿ ಶ್ರೀ ರಾಘವೇಂದ್ರ ಔರಾದ್‌ಕರ್, ಡಿ.ಐ.ಜಿ. ಇಂಟೆಲಿಜೆನ್ಸ್ ರವರು ಸಲ್ಲಿಸಿದ ವರದಿಯಲ್ಲಿ ರಾಜ್ಯದಲ್ಲಿನ ನಕಲಿ ಛಾಪಾ ಕಾಗದದ ಹಗರಣಕ್ಕೆ ಸಂಬಂಧಿಸಿದಂತೆ ಪೊಲೀಸ್ ಇಲಾಖೆಯ ಅಧಿಕಾರಿಗಳು ಎಸಗಿರುವ ಕರ್ತವ್ಯಲೋಪಗಳು ಮೇಲ್ನೋಟಕ್ಕೆ ಸಾಬೀತಾಗುವಂತೆ ಕಂಡು ಬಂದಿರುವ ಕಾರಣ ಈ ಕೆಳಕಂಡ ಅಧಿಕಾರಿಗಳ ವಿರುದ್ಧ ಕೆ.ಎಸ್.ಪಿ. (ಡಿ.ಪಿ.) ನಿಯಮಗಳ, 1965ರ ನಿಯಮ 6 ಮತ್ತು 8 ರಡಿಯಲ್ಲಿ ಜಂಟಿ ಇಲಾಖಾ ವಿಚಾರಣೆಯನ್ನು ನಡೆಸಲು ತೀರ್ಮಾನಿಸಿ ಎ.ಡಿ.ಜಿ.ಪಿ. (ನೇಮಕಾತಿ ಮತ್ತು ತರಬೇತಿ) ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಲಾಗಿತ್ತು.

1. ಶ್ರೀ ಟಿ.ಜಿ. ಸಂಗ್ರಾಮ್ ಸಿಂಗ್, ಎ.ಸಿ.ಪಿ. ಹಲಸೂರು ಉಪ ವಿಭಾಗ, ಬೆಂಗಳೂರು ನಗರ.
2. ಶ್ರೀ ವಾಲಿ ಬಾಷಾ, ಪೊಲೀಸ್ ಇನ್ಸ್‌ಪೆಕ್ಟರ್, ಸಿ.ಸಿ.ಬಿ. ಬೆಂಗಳೂರು.
3. ಶ್ರೀ ವಜೀರ್ ಅಹಮ್ಮದ್ ಖಾನ್, ಪಿ.ಎಸ್.ಐ. ಕೆ.ಜಿ. ಹಳ್ಳಿ, ಬೆಂಗಳೂರು.
4. ಶ್ರೀ ಕೆ.ಎಂ. ಮುದ್ದಯ್ಯ, ಡಿ.ವೈ.ಎಸ್.ಪಿ.
5. ಶ್ರೀ. ಜಿ.ಎ. ಬಾವ, ಎ.ಸಿ.ಪಿ., ಸಿ.ಸಿ.ಬಿ., ಬೆಂಗಳೂರು.
6. ಶ್ರೀ ಮರಿಸ್ವಾಮಿ ಗೌಡ, ಪೊಲೀಸ್ ಇನ್ಸ್‌ಪೆಕ್ಟರ್, ಅಶೋಕನಗರ, ಪೊಲೀಸ್ ಠಾಣೆ, ಬೆಂಗಳೂರು ನಗರ.
7. ಶ್ರೀ ಕೆ. ನಂಜುಂಡೇಗೌಡ, ಪೊಲೀಸ್ ಇನ್ಸ್‌ಪೆಕ್ಟರ್, ಸಿ.ಸಿ.ಬಿ. ಬೆಂಗಳೂರು.
8. ಶ್ರೀ ಎಂ.ಎಂ. ಸೌದಾಗರ, ಡಿ.ವೈ.ಎಸ್.ಪಿ., ಸಿ.ಓ.ಡಿ., ಬೆಂಗಳೂರು.

ಮೇಲೆ (2) ರಲ್ಲಿ ಓದಲಾದ ಆದೇಶದಲ್ಲಿ ಪೊಲೀಸ್ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು ರವರು ವಿಚಾರಣಾಧಿಕಾರಿಯವರು ರಾಜ್ಯ ಗುಪ್ತಚರ ದಳದ ಮುಖ್ಯಸ್ಥರಾಗಿದ್ದ ಸಮಯದಲ್ಲಿ ಈ ಪ್ರಕರಣದ ಬಗ್ಗೆ ಸರ್ಕಾರಕ್ಕೆ ಹಲವಾರು ಗೌಪ್ಯ ಮಾಹಿತಿಗಳನ್ನು ನೀಡಿದ್ದು ವಿಚಾರಣೆಯನ್ನು ನಡೆಸಿದರೆ ದೋಷಿತ ಅಧಿಕಾರಿಗಳು ಆಕ್ಷೇಪಣೆ ಮಾಡುವ ಸಂಭವವಿರುವುದರಿಂದ ಎ.ಡಿ.ಜಿ.ಪಿ. ಮತ್ತು ಐ.ಜಿ. (ಪ್ರಿಸನ್ಸ್) ಬೆಂಗಳೂರು ರವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸುವಂತೆ ಕೋರಿದ್ದರ ಮೇರೆಗೆ ದಿನಾಂಕ 11-12-2006ರ ಆದೇಶದಲ್ಲಿ ಶ್ರೀ ಎಸ್.ಟಿ. ರಮೇಶ್, ಎ.ಡಿ.ಜಿ.ಪಿ. ಮತ್ತು ಡಿ.ಜಿ. (ಪ್ರಿಸನ್ಸ್), ಬೆಂಗಳೂರು ರವರನ್ನು ವಿಶೇಷ ಅಧಿಕಾರ ಹೊಂದಿದ ವಿಚಾರಣಾಧಿಕಾರಿಯನ್ನಾಗಿ ನೇಮಿಸಲಾಗಿತ್ತು. ದಿನಾಂಕ 10-02-2005ರ ಆದೇಶದಲ್ಲಿನ ಉಳಿದ ಇತರೆ ಅಂಶಗಳ ಬಗ್ಗೆ ಯಥಾವತ್ತಾಗಿ ಮುಂದುವರಿಸಲಾಗಿತ್ತು.

ಮೇಲೆ (3) ರಲ್ಲಿ ಓದಲಾದ ಆದೇಶದಲ್ಲಿ ಸರ್ಕಾರದ ಆದೇಶ ಸಂಖ್ಯೆ : ಡಿಪಿಎಆರ್ 76 : ಎಸ್‌ಪಿಎಸ್ 08, ದಿನಾಂಕ 10.07.2008 ರನ್ವಯ ಎ.ಡಿ.ಜಿ.ಪಿ., ಅಪರಾಧ ಮತ್ತು ತಾಂತ್ರಿಕ ಸೇವೆಗಳು ಇಲ್ಲಿಗೆ ವರ್ಗಾವಣೆಯಾಗಿದ್ದರಿಂದ ಹಾಗೂ ಪ್ರಸ್ತುತ ಹುದ್ದೆಯಲ್ಲಿನ ಅಧಿಕ ಕೆಲಸದ ಒತ್ತಡದಿಂದ ಸದರಿ ಪ್ರಕರಣಕ್ಕೆ ಸಂಬಂಧಿಸಿದ ಇಲಾಖೆ ವಿಚಾರಣೆಯ ಕಡತವನ್ನು ಅವರ ಉತ್ತರಾಧಿಕಾರಿಯವರಿಂದ ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರ ಮತ್ತು ಕಾರಾಗೃಹಗಳ ಮಹಾ ನಿರೀಕ್ಷಕರು, ಬೆಂಗಳೂರು ರವರಿಗೆ ಹಸ್ತಾಂತರ ಮಾಡಿ ಅವರೊಂದಿಗೆ ಪತ್ರ ವ್ಯವಹಾರ ನಡೆಸುವಂತೆ ಕೋರುತ್ತಾ ಪ್ರಕರಣದಲ್ಲಿ ಶ್ರೀ ಪ್ರಭಾಕರ ಗಣಪತಿ ಕುಲಕರ್ಣಿ (ನಿ) ನ್ಯಾಯಾಧೀಶರು, ಬೆಳಗಾಂ ರವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸುವಂತೆ ಈ ಇಲಾಖಾ ವಿಚಾರಣೆಯಲ್ಲಿ ಇನ್ನೂ ಮಾಡಬೇಕಾದ ಕೆಲಸದ ಗಾತ್ರವನ್ನು ಗಮನಿಸಿದರೆ ಸೇವೆಯಲ್ಲಿರುವ ಮತ್ತೊಬ್ಬ ಅಧಿಕಾರಿಯನ್ನು ಶ್ರೀ ಎಸ್.ಟಿ. ರಮೇಶ್ ಅವರ ಜಾಗದಲ್ಲಿ ವಿಚಾರಣಾಧಿಕಾರಿಯನ್ನಾಗಿ ನೇಮಿಸಿದರೆ ತನ್ನ ಕೆಲಸದ ಜೊತೆಗೆ ಈ ಇಲಾಖಾ ವಿಚಾರಣೆಯನ್ನು ಕಾಲಮಿತಿಯೊಳಗಾಗಿ ಪೂರ್ಣಗೊಳಿಸಿ ವಿಚಾರಣಾ ವರದಿಯನ್ನು ಸಲ್ಲಿಸುವುದು ಕಷ್ಟಸಾಧ್ಯವಾಗಿರುತ್ತದೆ. ಆದ್ದರಿಂದ ಡಿ.ಜಿ.ಪಿ. ಯವರ ಶಿಫಾರಸ್ಸಿನಂತೆ ಶ್ರೀ ಎಸ್.ಟಿ. ರಮೇಶ್, ಎ.ಡಿ.ಜಿ.ಪಿ. ರವರ ಬದಲಾಗಿ ಶ್ರೀ ಕೆ. ರಾಮಕೃಷ್ಣ ಭಟ್ (ನಿವೃತ್ತ) ನ್ಯಾಯಾಧೀಶರು ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಲಾಗಿತ್ತು.

ಮೇಲೆ (4) ರಲ್ಲಿ ಓದಲಾದ ಪತ್ರದಲ್ಲಿ ದಿನಾಂಕ 13-05-2009 ರಲ್ಲಿ ನಕಲಿ ಛಾಪಾ ಕಾಗದದ ಹಗರಣಗಳಿಗೆ ಸಂಬಂಧಿಸಿದಂತೆ ಶ್ರೀ ಕೆ. ರಾಮಕೃಷ್ಣ ಭಟ್, ನಿವೃತ್ತ ನ್ಯಾಯಾಧೀಶರು, ಬೆಂಗಳೂರು ರವರನ್ನು ವಿಚಾರಣಾಧಿಕಾರಿಯಾಗಿ ನೇಮಿಸಲಾಗಿತ್ತು. ವಿಚಾರಣಾಧಿಕಾರಿಯವರು ದಿನಾಂಕ 20-04-2010ರ ಪತ್ರದಲ್ಲಿ ಅವರನ್ನು ವಿಚಾರಣಾಧಿಕಾರಿಯಾಗಿ ನೇಮಕ ಮಾಡಿದ ಆದೇಶವನ್ನು ರದ್ದುಪಡಿಸುವಂತೆ ಕೋರಿದ್ದು ಆದ್ದರಿಂದ ಪ್ರಕರಣದಲ್ಲಿ ಶ್ರೀ ಅಮರಕುಮಾರ ಪಾಂಡೆ, ಐ.ಪಿ.ಎಸ್., ಐ.ಜಿ.ಪಿ., ಆಂತರಿಕ ಭದ್ರತೆ, ಬೆಂಗಳೂರು ರವರನ್ನು ಬದಲಿ ವಿಚಾರಣಾಧಿಕಾರಿಯನ್ನಾಗಿ ನೇಮಿಸಲು ಡಿ.ಜಿ. ಮತ್ತು ಐ.ಜಿ.ಪಿ. ರವರು ಕೋರಿರುತ್ತಾರೆ.

ಪ್ರಸ್ತಾವನೆ ಪರಿಶೀಲಿಸಿದೆ. ಈ ಪ್ರಕರಣವು ಪ್ರಮುಖವಾದ ಪ್ರಕರಣವಾಗಿರುವುದರಿಂದ ಈ ಪ್ರಕರಣದಲ್ಲಿ ಒಳಗೊಂಡಿರುವ ಪೊಲೀಸ್ ಅಧಿಕಾರಿಗಳ ಕರ್ತವ್ಯ ನಿರ್ಲಕ್ಷತೆ ಬಗ್ಗೆ ವಿಚಾರಣೆ ನಡೆಸಲು ನಿವೃತ್ತ ನ್ಯಾಯಾಧೀಶರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸುವುದು ಸೂಕ್ತ ಎಂದು ತೀರ್ಮಾನಿಸಿ ಶ್ರೀ ಕೆ. ಶಿವರಾಂ, ನಿವೃತ್ತ ಜಿಲ್ಲಾ ನ್ಯಾಯಾಧೀಶರು, ಬೆಂಗಳೂರು ರವರನ್ನು ಶ್ರೀ ಕೆ. ರಾಮಕೃಷ್ಣ ಭಟ್, ನಿವೃತ್ತ ನ್ಯಾಯಾಧೀಶರ ಬದಲಾಗಿ ಪ್ರಕರಣದಲ್ಲಿ ವಿಚಾರಣಾಧಿಕಾರಿಯನ್ನಾಗಿ ನೇಮಿಸಲು ತೀರ್ಮಾನಿಸಿದೆ. ಕಾರಣ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಒಇ 23 ಪೊಸಿಪ 2004, ಬೆಂಗಳೂರು, ದಿನಾಂಕ : 09-08-2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ ಒಇ 23 ಪೊಸಿಪ 2004 ದಿನಾಂಕ 13.05.2009 ನ್ನು ಭಾಗಶಃ ಮಾರ್ಪಡಿಸಿ ಶ್ರೀ ಕೆ. ರಾಮಕೃಷ್ಣ ಭಟ್, ನಿವೃತ್ತ ಜಿಲ್ಲಾ ನ್ಯಾಯಾಧೀಶರು, ಬೆಂಗಳೂರು ರವರ ಬದಲಾಗಿ ಶ್ರೀ ಕೆ. ಶಿವರಾಂ, ನಿವೃತ್ತ ಜಿಲ್ಲಾ

ನ್ಯಾಯಾಧೀಶರು, ಅನುಗ್ರಹ, ನಂ.59, 3ನೇ ಸರ್ಕ್ಯುಲರ್ ರೋಡ್, 6ನೇ ಕ್ರಾಸ್, ನಂದಿನಿ ಲೇಔಟ್, ಬೆಂಗಳೂರು–96 ರವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಿದೆ.

ದಿನಾಂಕ 10–02–1005 ರ ಆದೇಶದಲ್ಲಿನ ಉಳಿದ ಇತರೆ ಆದೇಶಗಳು ಯಥಾವತ್ತಾಗಿ ಮುಂದುವರೆಯುತ್ತದೆ.

ವಿಚಾರಣಾಧಿಕಾರಿಗಳಿಗೆ ವಿಚಾರಣೆ ನಡೆಸಲು ಅನುಕೂಲವಾಗುವಂತೆ ಸೂಕ್ತ ಸ್ಥಳಾವಕಾಶ/ಕಟ್ಟಡ/ಪೀಠೋಪಕರಣಗಳು ಮತ್ತು ಪೂರಕ ಸಿಬ್ಬಂದಿ ಇತ್ಯಾದಿ ಮೂಲ ಸೌಲಭ್ಯಗಳನ್ನು ಒದಗಿಸಲು ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು ಇವರಿಗೆ ಸೂಚಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಟಿ.ಎನ್. ರವಿಪ್ರಕಾಶ್,
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು).

ಪಿ.ಆರ್. 2137

COMMERCE & INDUSTRIES SECRETARIAT

Sub :- Approval to the Project Proposal of M/s. Kalyani Steels Ltd., for "Expansion of Existing Steel Plant Capacity to 3 MTPA" in Ginigere Village, Koppal Taluk and District.

Read :- Proceedings of the 23rd State High Level Clearance Committee (SHLCC) meeting held on 19-06-2010.

Preamble:

M/s Kalyani Steels Ltd., proposes for "Expansion of Existing Steel Plant Capacity to 3 MTPA" in Ginigere Village, Koppal Taluk and District, with an investment of Rs. 7500 crores, generating employment of about 4500 persons.

In the 23rd State High Level Clearance Committee (SHLCC) meeting held on 19-06-2010 the proposal of the Company was discussed and approved.

Government has examined the recommendations made by the State High Level Clearance Committee in the 23rd meeting held on 19-06-2010 in all aspects.

Hence the following Order.

Government Order No. CI 427 SPI 2010, Bangalore, dated : 19-07-2010

Government is pleased to accord in principle approval to the project proposal of M/s. Kalyani Steels Ltd., for "Expansion of Existing Steel Plant Capacity to 3 MTPA" in Ginigere Village, Koppal Taluk and District, with an investment of Rs. 7500 crores, generating employment to about 4500 persons and extend the following infrastructure facilities, incentives and concessions.

Infrastructure Facilities :

1. **Land :** 2000 acres – KIADB to acquire and allot as SUC adjacent to the factory premises in Ginigere Village, Koppal taluk and District.
2. **Water :** 200 Million LPD from nearest water source, subject to water audit and approval of the Water Resources Department.
3. **Power :** 224000 KVA to be serviced by GESCOM
4. **Incentives and Concessions:** As per prevailing Industrial Policy of the State.

GENERAL TERMS AND CONDITIONS :

1. **Ore :** The ore based industries to make arrangements on their own for the ore requirement and State Government does not guarantee the ore for these projects.
2. **Environment :** The promoters to obtain CFE and CFO from KSPCB and environmental clearance from MOEF, GOI.
3. **Employment :** The Company shall prepare a plan for development of Human Resources required for the project, train local people and provide employment to these trained local youth and comply with the provisions of Industrial Policy of Govt. of Karnataka. A copy of Human Resources Development plan shall be sent to the Commissioner for I.D. & Director of Industries and Commerce for monitoring.
4. **Vendor Development :** Wherever there is scope for vendor development for the project, the company shall prepare a vendor development plan, develop local vendors and procure the required inputs, components and sub assemblies from these local vendor units. A copy of the vendor development plan shall be sent to the Commissioner for I.D. & Director of Industries and Commerce for monitoring.
5. **Social Infrastructure Development :** The Company is advised to take up social infrastructure development projects in the vicinity of the proposed location of the unit. A copy of such projects shall be sent to the Commissioner for I.D. & Director of Industries and Commerce for monitoring.
6. **Others :**

c) The project proponents shall provide employment to at least one member of the family of each land looser as the land is being acquired through KIADB.

- ❖ ಮಾರುಕಟ್ಟೆ ಲಿಂಕೇಜ್ – ಲಭ್ಯವಿರುವ ಸಂಸ್ಥೆಗಳ ವಿವರ
- ❖ ನಾಯಕತ್ವ, ಸಂವಹನ ಹಾಗೂ ಸಮಸ್ಯೆ ಪರಿಹಾರ
- ❖ ಸಾಮಾಜಿಕ ಸಮಸ್ಯೆಗಳನ್ನು/ಪಿಡುಗುಗಳನ್ನು ಬಗೆಹರಿಸುವಲ್ಲಿ ಗೊಂಚಲುಗಳ ಪಾತ್ರ

ಆರ್ಥಿಕ ವಿವರ :–

ವಿಶೇಷ ಅಭಿವೃದ್ಧಿ ಯೋಜನೆಯಡಿ ಸ್ತ್ರೀಶಕ್ತಿ ಒಕ್ಕೂಟ ಹಾಗೂ ಗೊಂಚಲುಗಳ ಬಲವರ್ಧನೆಗಾಗಿ ಒದಗಿಸಲಾದ ಅನುದಾನವನ್ನು ಗೊಂಚಲುಗಳ ತರಬೇತಿಗಾಗಿ ಈ ಕೆಳಕಂಡಂತೆ ವೆಚ್ಚ ಭರಿಸಲಾಗುವುದು ಎಂದು ತಿಳಿಸಿರುತ್ತಾರೆ.

ಒಂದು ತಂಡದಲ್ಲಿ ತರಬೇತಿ ನೀಡುವ ಸದಸ್ಯರ ಸಂಖ್ಯೆ 30, ತರಬೇತಿಗೆ ಒಬ್ಬರಿಗೆ ತಗಲುವ ವೆಚ್ಚ ರೂ. 465.00, ತರಬೇತಿ ಅವಧಿ 3 ದಿನ	*ರೂ.ಗಳಲ್ಲಿ*
1. ಊಟ/ವಸತಿ (ಒಂದು ದಿನಕ್ಕೆ ಒಬ್ಬರಿಗೆ 70ಥ30ಥ3)	6,300.00
2. ತರಬೇತಿಗೆ ಅವಶ್ಯವಿರುವ ಕಿಟ್ ಸಾಮಾಗ್ರಿ (ಒಬ್ಬರಿಗೆ) 50ಥ30	1,500.00
3. ಪ್ರಯಾಣ ಭತ್ಯೆ (ವಾಸ್ತವಿಕ) ಒಬ್ಬರಿಗೆ 25ಥ30)	750.00
4. ಸಂಪನ್ಮೂಲ ವ್ಯಕ್ತಿಗಳಿಗೆ ಗೌರವಧನ (ಒಂದು ಅಧಿವೇಶನಕ್ಕೆ ಒಬ್ಬರಿಗೆ) 5006	3,000.00
5. ಶಿಷ್ಯ ವೇತನ ಒಬ್ಬರಿಗೆ ದಿನಕ್ಕೆ 10ಥ30ಥ3	900.00
6. ಸಾದಿಲ್ವಾರು ವೆಚ್ಚ (ಒಂದು ತಂಡಕ್ಕೆ)	1550.00
ಒಟ್ಟು	**14,000.00**

ಪ್ರತೀ ತಂಡದಲ್ಲಿ 30 ಜನರಂತೆ 3 ದಿನಗಳ ತರಬೇತಿಗೆ ಒಟ್ಟು ರೂ. 14,000.00 ವೆಚ್ಚವನ್ನು ಭರಿಸಲಾಗುವುದು ಹಾಗೂ ವಸತಿ ಸಹಿತ ತರಬೇತಿಯಾಗಿದ್ದು, ತರಬೇತಿಯನ್ನು ಸದಸ್ಯರಿಗೆ ಅನುಕೂಲವಾಗುವಂತಹ ಸ್ಥಳಗಳಲ್ಲಿ ಸ್ಥಳೀಯವಾಗಿ ಹಮ್ಮಿಕೊಳ್ಳಲಾಗುವುದು.

ಅನುಷ್ಠಾನದ ವಿಧಾನ :–

- ❖ ವಿಶೇಷ ಅಭಿವೃದ್ಧಿ ಯೋಜನೆಯಡಿ ಲೆಕ್ಕ ಶೀರ್ಷಿಕೆ : 2235–02–103–0–55 ರಡಿಯಲ್ಲಿ ಬ್ಲಾಕ್ ಸೊಸೈಟಿಗಳ ಹಾಗೂ ಗೊಂಚಲುಗಳ ಸಬಲೀಕರಣಕ್ಕಾಗಿ ಒದಗಿಸಿರುವ ಅನುದಾನ ರೂ. 330.00 ಲಕ್ಷಗಳನ್ನು 114 ಹಿಂದುಳಿದ ತಾಲ್ಲೂಕುಗಳಲ್ಲಿ ಗೊಂಚಲುಗಳ ಸದಸ್ಯರ ತರಬೇತಿಗಾಗಿ ಉಪಯೋಗಿಸಲಾಗುವುದು.
- ❖ ಈ ಕಾರ್ಯಕ್ರಮಕ್ಕೆ ಬೇಕಾಗುವ ಅನುದಾನವನ್ನು ಸಂಬಂಧಿಸಿದ ಜಿಲ್ಲೆಯ ಉಪ ನಿರ್ದೇಶಕರುಗಳಿಗೆ ಸಿ.ಡಿ.ಐ. ಇಂಡೆಕ್ಸ್ ಪ್ರಕಾರ ನಿಗದಿಪಡಿಸಲಾಗುವ ಅನುದಾನ ಹಂಚಿಕೆ ಹಾಗೂ ಅದರಂತೆ ನಿಗದಿ ಪಡಿಸುವ ಭೌತಿಕ ಗುರಿಯನ್ವಯ 4 ಕಂತುಗಳಲ್ಲಿ ಬಿಡುಗಡೆ ಮಾಡಲಾಗುವುದು. ಉಪ ನಿರ್ದೇಶಕರುಗಳ ತಮ್ಮ ಜಿಲ್ಲೆಯಲ್ಲಿರುವ ತಾಲ್ಲೂಕು ಶಿಶು ಅಭಿವೃದ್ಧಿ ಯೋಜನೆಗಳಿಗೆ ಅನುದಾನ ಮರು ಹಂಚಿಕೆ ಮಾಡುವುದು ಹಾಗೂ ಆ ತಾಲ್ಲೂಕುಗಳಲ್ಲಿ ತರಬೇತಿ ಹೊಂದಿದ ತರಬೇತುದಾರರ ಮೂಲಕ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು.
- ❖ ಈ ಕಾರ್ಯಕ್ರಮಕ್ಕೆ ಸಂಬಂಧಿಸಿದ ಲೆಕ್ಕ ಪತ್ರಗಳನ್ನು ಸಂಬಂಧಿಸಿದ ತಾಲ್ಲೂಕು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ನಿರ್ವಹಿಸುವುದು, ತರಬೇತಿ ನಂತರ ವರದಿ/ಉಪಯುಕ್ತತಾ ಪ್ರಮಾಣ ಪತ್ರಗಳನ್ನು ಜಿಲ್ಲಾ ಉಪ ನಿರ್ದೇಶಕರ ಮುಖಾಂತರ ದೃಢೀಕರಣದೊಂದಿಗೆ ಪ್ರಧಾನ ಕಛೇರಿಗೆ ಸಲ್ಲಿಸುವುದು.

ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಪ್ರಸ್ತಾವನೆಯನ್ನು ಪರಿಶೀಲಿಸಲಾಯಿತು.

ಸರ್ಕಾರಿ ಆದೇಶ ಸಂಖ್ಯೆ: ಮಮಇ 167 ಮಮಅ 2010, ಬೆಂಗಳೂರು, ದಿನಾಂಕ: 12ನೇ ಆಗಸ್ಟ್ 2010

ಮೇಲಿನ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ರಾಜ್ಯದ 114 ಹಿಂದುಳಿದ ತಾಲ್ಲೂಕುಗಳಲ್ಲಿ ವಿಶೇಷ ಅಭಿವೃದ್ಧಿ ಯೋಜನೆಯಡಿ ಸ್ತ್ರೀಶಕ್ತಿ ಯೋಜನೆಯ ಸ್ವಸಹಾಯ ಗುಂಪುಗಳ ಗೊಂಚಲುಗಳು/ಬ್ಲಾಕ್ ಸೊಸೈಟಿಗಳ ಬಲವರ್ಧನೆಗಾಗಿ ಹಾಗೂ ತಾಲ್ಲೂಕು ಸ್ತ್ರೀಶಕ್ತಿ ಒಕ್ಕೂಟಗಳು ಮತ್ತು ಗೊಂಚಲುಗಳು ಸ್ವತಂತ್ರವಾಗಿ ಕಾರ್ಯ ನಿರ್ವಹಿಸಲು ಅನುಕೂಲವಾಗುವಂತೆ ಸಬಲೀಕರಣ ಮಾಡಲು ಪ್ರತಿ ತಾಲ್ಲೂಕಿನಲ್ಲಿ 5 ಜನ ಸದಸ್ಯರುಳ್ಳ 2 ತಂಡಗಳನ್ನು ರಚಿಸಿ ಅವರಿಂದ ಗೊಂಚಲುಗಳ ಸದಸ್ಯರಿಗೆ ತರಬೇತಿ ನೀಡಲು ಗೊಂಚಲುಗಳಲ್ಲಿ ಸೇರ್ಪಡೆಯಾಗಿರುವ ಪ್ರತೀ ಸ್ವಸಹಾಯ ಗುಂಪಿನಿಂದ ಆಯ್ದ ಶಕ್ತವಿರುವ ಒಬ್ಬ/ಇಬ್ಬರು ಪ್ರತಿನಿಧಿಗಳಿಗೆ 3 ದಿನಗಳ ತರಬೇತಿ ಕಾರ್ಯಕ್ರಮ ಹಮ್ಮಿಕೊಂಡು. ತರಬೇತಿ ಕಾರ್ಯಕ್ರಮ ನೀಡುವ ಹೊಸ ಯೋಜನೆಗೆ ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದಲ್ಲಿನ ರೂಪುರೇಷೆಗಳಂತೆ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.

ಈ ಯೋಜನೆಯ ಉಪಯುಕ್ತತೆಯನ್ನು ಮುಂದಿನ ದಿನಗಳಲ್ಲಿ ಮೌಲ್ಯಮಾಪನಕ್ಕೆ ಒಳಪಡಿಸಲು ಹಾಗೂ ಫಲಾನುಭವಿಗಳ/ಗುಂಪುಗಳ ಆಯ್ಕೆ ತರಬೇತಿ ಕೇಂದ್ರಗಳ ಆಯ್ಕೆ ಹಾಗೂ ಸಲಕರಣೆಗಳು ಮತ್ತು ಸೇವೆಗಳು ಇವುಗಳನ್ನು ಪಡೆಯುವಲ್ಲಿ ಸಂಪೂರ್ಣವಾಗಿ ಕೆ.ಟಿ.ಪಿ.ಪಿ. ಕಾಯ್ದೆ ಹಾಗೂ ಕಾನೂನನ್ನು ಪಾಲಿಸಬೇಕೆಂದು ಸಹ ಸೂಚಿಸಲಾಗಿದೆ.

ಸದರಿ ವೆಚ್ಚವನ್ನು ವಿಶೇಷ ಅಭಿವೃದ್ಧಿ ಯೋಜನೆಯಡಿ ಲೆಕ್ಕಶೀರ್ಷಿಕೆ 2235–02–103–0–55 (ಯೋಜನೆ) ಅಡಿಯಲ್ಲಿ ಒದಗಿಸಿರುವ ಆಯವ್ಯಯದಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಯೋಜನಾ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ : ಪಿಡಿ 4 ಎಸ್.ಸಿ.ಇ.ಎ. 2010 ಮಮಕ, ದಿನಾಂಕ 26–07–2010 ಮತ್ತು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಆಇ 426 ವೆಚ್ಚ–3/10, ದಿನಾಂಕ 29–07–2010ರ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
(ಎಸ್. ಎನ್. ಕೃಷ್ಣಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ–1
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಸರ್ಕಾರಿ ಆದೇಶ ಸಂಖ್ಯೆ: ಮಮಇ 167 ಮಮಅ 2010, ಬೆಂಗಳೂರು, ದಿನಾಂಕ: 12ನೇ ಆಗಸ್ಟ್ 2010ಕ್ಕೆ

ಅನುಬಂಧ

ವಿಶೇಷ ಅಭಿವೃದ್ಧಿ ಯೋಜನೆಯಡಿ ಸ್ತ್ರೀಶಕ್ತಿ ಗೊಂಚಲುಗಳ ಹಾಗೂ ಬ್ಲಾಕ್ ಸೊಸೈಟಿಗಳ ಬಲವರ್ಧನೆಗಾಗಿ ತರಬೇತಿ ಕಾರ್ಯಕ್ರಮ ಅನುಷ್ಠಾನಗೊಳಿಸುವ ಹೊಸ ಯೋಜನೆಗೆ ರೂಪುರೇಷೆಗಳು:

I ಯೋಜನೆಯ ಉದ್ದೇಶ :–

- ತಾಲ್ಲೂಕು ಸ್ತ್ರೀಶಕ್ತಿ ಬ್ಲಾಕ್ ಸೊಸೈಟಿಗಳ ಹಾಗೂ ಗೊಂಚಲುಗಳ ಸಬಲೀಕರಣಕ್ಕೆ ಸಹಕರಿಸುವುದು.
- ತಾಲ್ಲೂಕು ಬ್ಲಾಕ್ ಸೊಸೈಟಿಗಳ ಹಾಗೂ ಗೊಂಚಲುಗಳ ಕಾರ್ಯ ವೈಖರಿಯನ್ನು ಉತ್ತಮ ಪಡಿಸುವುದು.
- ತಾಲ್ಲೂಕು ಸ್ತ್ರೀಶಕ್ತಿ ಬ್ಲಾಕ್ ಸೊಸೈಟಿಗಳ ಹಾಗೂ ಗೊಂಚಲುಗಳು ಸ್ವತಂತ್ರವಾಗಿ ಕಾರ್ಯ ನಿರ್ವಹಿಸುವುದು.
- ಸ್ವಸಹಾಯ ಗುಂಪುಗಳ ಸಂಪೂರ್ಣ ಉಸ್ತುವಾರಿಯನ್ನು ಗೊಂಚಲುಗಳ ಹಾಗೂ ಬ್ಲಾಕ್ ಸೊಸೈಟಿಗಳು ನಿರ್ವಹಿಸುವುದು.

II ಯೋಜನೆಯಡಿ ಒದಗಿಸುವ ಸೌಲಭ್ಯಗಳು :–

ರಾಜ್ಯದ 114 ಹಿಂದುಳಿದ ತಾಲ್ಲೂಕುಗಳಲ್ಲಿ ವಿಶೇಷ ಅಭಿವೃದ್ಧಿ ಯೋಜನೆಯಡಿ ತಾಲ್ಲೂಕು ಸ್ತ್ರೀಶಕ್ತಿ ಒಕ್ಕೂಟಗಳ ಹಾಗೂ ಗೊಂಚಲುಗಳು ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಅನುಕೂಲವಾಗುವಂತೆ ಸಬಲೀಕರಣ ಮಾಡಲು ಪ್ರತಿ ತಾಲ್ಲೂಕಿನಲ್ಲಿ 5 ಜನ ಸದಸ್ಯರುಳ್ಳ 2 ತಂಡಗಳನ್ನು ರಚಿಸಿ ಅವರಿಂದ ಗೊಂಚಲುಗಳ ಸದಸ್ಯರಿಗೆ ತರಬೇತಿ ನೀಡಲಾಗುವುದು. ಗೊಂಚಲುಗಳಲ್ಲಿ ಸೇರ್ಪಡೆಯಾಗಿರುವ ಪ್ರತೀ ಸ್ವಸಹಾಯ ಗುಂಪಿನಿಂದ ಆಯ್ದ ಶಕ್ತವಿರುವ ಒಬ್ಬ/ಇಬ್ಬರು ಪ್ರತಿನಿಧಿಗಳಿಗೆ 3 ದಿನಗಳ ತರಬೇತಿ ನೀಡುವುದು.

III ತರಬೇತಿ ವಿಧಾನ :–

ಸ್ತ್ರೀಶಕ್ತಿ ಯೋಜನೆಯಡಿಯಲ್ಲಿ ಪ್ರತೀ ತಾಲ್ಲೂಕಿನಿಂದ ಮೇಲ್ವಿಚಾರಕಿಯರು ಸಹಾಯಕ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಆಯ್ದ ಅಂಗನವಾಡಿ ಕಾರ್ಯಕರ್ತೆ, ಸ್ವಯಂಸೇವಾ ಸಂಸ್ಥೆ, ಉತ್ತಮವಾಗಿ ಕಾರ್ಯ ನಿರ್ವಹಿಸುವ ಸ್ವಸಹಾಯ ಗುಂಪಿನ/ಒಕ್ಕೂಟದಿಂದ ಒಬ್ಬ ಪ್ರತಿನಿಧಿ ಹೀಗೆ 5 ಜನರ ಒಂದು ತಂಡದಂತೆ 2 ತಂಡಗಳಲ್ಲಿ 10 ಜನರಿಂದ ತರಬೇತಿಯನ್ನು ನೀಡುವುದು.

ತರಬೇತಿ ಹೊಂದಿದ ತರಬೇತುದಾರರು 114 ಹಿಂದುಳಿದ ತಾಲ್ಲೂಕುಗಳಲ್ಲಿ ಆಯಾ ತಾಲ್ಲೂಕು ವ್ಯಾಪ್ತಿಗೆ ಗೊಂಚಲು ಗುಂಪುಗಳಲ್ಲಿ ಪ್ರತಿನಿಧಿ ಹೊಂದಿರುವ ಪ್ರತೀ ಗುಂಪಿನಿಂದ ಒಬ್ಬ ಸದಸ್ಯರಿಗೆ 3 ದಿನಗಳ ತರಬೇತಿಯನ್ನು ಹಂತ ಹಂತದಲ್ಲಿ ನೀಡುವುದು.

IV ಗೊಂಚಲುಗಳ/ಬ್ಲಾಕ್ ಸೊಸೈಟಿಗಳ ಸಬಲೀಕರಣ ತರಬೇತಿಯಲ್ಲಿ ಅಳವಡಿಸುವ ವಿಷಯಗಳ ಪಟ್ಟಿ :

1) ಸ್ವಸಹಾಯ ಗುಂಪುಗಳ/ಗೊಂಚಲುಗಳ/ಬ್ಲಾಕ್ ಸೊಸೈಟಿಗಳ ರಚನೆ ಹಾಗೂ ಪರಿಕಲ್ಪನೆ
2) ಗೊಂಚಲು/ಬ್ಲಾಕ್ ಸೊಸೈಟಿಗಳ ಕರ್ತವ್ಯಗಳು/ಜವಾಬ್ದಾರಿಗಳು/ಕಾರ್ಯವೈಖರಿ ಬ್ಲಾಕ್ ಸೊಸೈಟಿ
3) ಗೊಂಚಲಿನಲ್ಲಿ ಪಾಲಿಸಬೇಕಾದ ನಿಯಮಗಳು
4) ಗೊಂಚಲುಗಳು ನಿರ್ವಹಿಸಬೇಕಾದ ದಾಖಲಾತಿಗಳು/ಹಣಕಾಸು ನಿರ್ವಹಣೆ
5) ಗೊಂಚಲು/ಬ್ಲಾಕ್ ಸೊಸೈಟಿಗಳಿಂದ ದೊರೆಯುವ ಸೇವೆಗಳು
6) ಗೊಂಚಲು/ಬ್ಲಾಕ್ ಸೊಸೈಟಿಗಳ ಆರ್ಥಿಕ ಬಲವರ್ಧನೆಗಾಗಿ ಹಮ್ಮಿಕೊಳ್ಳಬಹುದಾದ ಚಟುವಟಿಕೆಗಳು
7) ಗುಂಪುಗಳ ಮಾಹಿತಿ ಸಂಗ್ರಹಣೆ/ಉಸ್ತುವಾರಿ/ಮಾರ್ಗದರ್ಶನ ವರದಿ ಸಂಗ್ರಹಣೆ
8) ಸ್ಥಳೀಯ ಸಂಪನ್ಮೂಲಗಳ ಕ್ರೋಢೀಕರಣ
9) ವಿವಿಧ ಇಲಾಖೆಗಳಲ್ಲಿ ದೊರಕುವ ಸೌಲಭ್ಯಗಳ ಪರಿಚಯ
10) ಯಶಸ್ವಿಯಾಗಿ ಕಾರ್ಯ ನಿರ್ವಹಿಸುವ ಬ್ಲಾಕ್ ಸೊಸೈಟಿಗಳು/ಗೊಂಚಲುಗಳಿಗೆ ಕ್ಷೇತ್ರ ಭೇಟಿ
11) ಬ್ಯಾಂಕ್ ಲಿಂಕೇಜ್, ಗ್ರೇಡಿಂಗ್, ಆದಾಯೋತ್ಪನ್ನ ಚಟುವಟಿಕೆಗಳಿಗಾಗಿ ತರಬೇತಿ ನೀಡುವ ಸಂಸ್ಥೆಗಳ ವಿವರ
12) ಮಾರುಕಟ್ಟೆ ಲಿಂಕೇಜ್ – ಲಭ್ಯವಿರುವ ಸಂಸ್ಥೆಗಳ ವಿವರ
13) ನಾಯಕತ್ವ, ಸಂವಹನ ಹಾಗೂ ಸಮಸ್ಯೆ ಪರಿಹಾರ
14) ಸಾಮಾಜಿಕ ಸಮಸ್ಯೆಗಳನ್ನು/ಪಿಡುಗುಗಳನ್ನು ಬಗೆಹರಿಸುವಲ್ಲಿ ಗೊಂಚಲುಗಳ ಪಾತ್ರ

V ಆರ್ಥಿಕ ವಿವರ :–

ವಿಶೇಷ ಅಭಿವೃದ್ಧಿ ಯೋಜನೆಯಡಿ ಸ್ತ್ರೀಶಕ್ತಿ ಒಕ್ಕೂಟ ಹಾಗೂ ಗೊಂಚಲುಗಳ ಬಲವರ್ಧನೆಗಾಗಿ ಒದಗಿಸಲಾದ ಅನುದಾನವನ್ನು ಗೊಂಚಲುಗಳ ತರಬೇತಿಗಾಗಿ ಈ ಕೆಳಕಂಡಂತೆ ವೆಚ್ಚ ಭರಿಸುವುದು.

ಒಂದು ತಂಡದಲ್ಲಿ ತರಬೇತಿ ನೀಡುವ ಸದಸ್ಯರ ಸಂಖ್ಯೆ 30, ತರಬೇತಿಗೆ ಒಬ್ಬರಿಗೆ ತಗಲುವ ವೆಚ್ಚ ರೂ. 465.00, ತರಬೇತಿ ಅವಧಿ 3 ದಿನ	*ರೂ.ಗಳಲ್ಲಿ*
1. ಊಟ/ವಸತಿ (ಒಂದು ದಿನಕ್ಕೆ ಒಬ್ಬರಿಗೆ 70x30x3)	6,300.00
2. ತರಬೇತಿಗೆ ಅವಶ್ಯವಿರುವ ಕಿಟ್ ಸಾಮಾಗ್ರಿ (ಒಬ್ಬರಿಗೆ) 50x30	1,500.00
3. ಪ್ರಯಾಣ ಭತ್ಯೆ (ವಾಸ್ತವಿಕ) ಒಬ್ಬರಿಗೆ 25x30	750.00
4. ಸಂಪನ್ಮೂಲ ವ್ಯಕ್ತಿಗಳಿಗೆ ಗೌರವಧನ (ಒಂದು ಅಧಿವೇಶನಕ್ಕೆ ಒಬ್ಬರಿಗೆ) 5006	3,000.00
5. ಶಿಷ್ಯ ವೇತನ ಒಬ್ಬರಿಗೆ ದಿನಕ್ಕೆ 10x30x3	900.00
6. ಸಾದಿಲ್ವಾರು ವೆಚ್ಚ (ಒಂದು ತಂಡಕ್ಕೆ)	1550.00
ಒಟ್ಟು	**14,000.00**

ಪ್ರತೀ ತಂಡದಲ್ಲಿ 30 ಜನರಂತೆ 3 ದಿನಗಳ ತರಬೇತಿಗೆ ಒಟ್ಟು ರೂ. 14,000.00 ವೆಚ್ಚವನ್ನು ಭರಿಸುವುದು ಹಾಗೂ ವಸತಿ ಸಹಿತ ತರಬೇತಿಯನ್ನು ಸದಸ್ಯರಿಗೆ ಅನುಕೂಲವಾಗುವಂತಹ ಸ್ಥಳಗಳಲ್ಲಿ ಸ್ಥಳೀಯವಾಗಿ ಹಮ್ಮಿಕೊಳ್ಳುವುದು.

VI ಅನುಷ್ಠಾನದ ವಿಧಾನ :–

1. ವಿಶೇಷ ಅಭಿವೃದ್ಧಿ ಯೋಜನೆಯಡಿ ಲೆಕ್ಕ ಶೀರ್ಷಿಕೆ : 2235–02–103–0–55 ರಡಿಯಲ್ಲಿ ಬ್ಲಾಕ್ ಸೊಸೈಟಿಗಳ ಹಾಗೂ ಗೊಂಚಲುಗಳ ಸಬಲೀಕರಣಕ್ಕಾಗಿ ಒದಗಿಸಿರುವ ಅನುದಾನ ರೂ. 330.00 ಲಕ್ಷಗಳನ್ನು 114 ಹಿಂದುಳಿದ ತಾಲ್ಲೂಕುಗಳಲ್ಲಿ ಗೊಂಚಲುಗಳ ಸದಸ್ಯರ ತರಬೇತಿಗಾಗಿ ಉಪಯೋಗಿಸುವುದು.
2. ಈ ಕಾರ್ಯಕ್ರಮಕ್ಕೆ ಬೇಕಾಗುವ ಅನುದಾನವನ್ನು ಸಂಬಂಧಿಸಿದ ಜಿಲ್ಲೆಯ ಉಪ ನಿರ್ದೇಶಕರುಗಳಿಗೆ ಸಿ.ಡಿ.ಐ. ಇಂಡೆಕ್ಸ್ ಪ್ರಕಾರ ನಿಗದಿ ಪಡಿಸಲಾಗುವ ಅನುದಾನ ಹಂಚಿಕೆ ಹಾಗೂ ಅದರಂತೆ ನಿಗದಿ ಪಡಿಸುವ ಭೌತಿಕ ಗುರಿಯನ್ವಯ 4 ಕಂತುಗಳಲ್ಲಿ ಬಿಡುಗಡೆ ಮಾಡುವುದು. ಉಪ ನಿರ್ದೇಶಕರುಗಳು ತಮ್ಮ ಜಿಲ್ಲೆಯಲ್ಲಿರುವ ತಾಲ್ಲೂಕು ಶಿಶು ಅಭಿವೃದ್ಧಿ ಯೋಜನೆಗಳಿಗೆ ಅನುದಾನ ಮರು ಹಂಚಿಕೆ ಮಾಡುವುದು ಹಾಗೂ ಆ ತಾಲ್ಲೂಕುಗಳಲ್ಲಿ ತರಬೇತಿ ಹೊಂದಿದ ತರಬೇತುದಾರರ ಮೂಲಕ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.
3. ಈ ಕಾರ್ಯಕ್ರಮಕ್ಕೆ ಸಂಬಂಧಿಸಿದ ಲೆಕ್ಕ ಪತ್ರಗಳನ್ನು ಸಂಬಂಧಿಸಿದ ತಾಲ್ಲೂಕು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ನಿರ್ವಹಿಸುವುದು, ತರಬೇತಿ ನಂತರ ವರದಿ/ಉಪಯುಕ್ತತಾ ಪ್ರಮಾಣ ಪತ್ರಗಳನ್ನು ಜಿಲ್ಲಾ ಉಪ ನಿರ್ದೇಶಕರ ಮುಖಾಂತರ ದೃಢೀಕರಣದೊಂದಿಗೆ ಪ್ರಧಾನ ಕಛೇರಿಗೆ ಸಲ್ಲಿಸುವುದು.

(ಎಸ್. ಎನ್. ಕೃಷ್ಣಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ–1
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಪಿ.ಆರ್. 2179

COMMERCE & INDUSTRIES SECRETARIAT

Sub :- Conversion of Purchase Tax on Sugarcane into Interest Free Loan-Reg.

Read :- 1. Government Order No. CI/140/FMI/71 dated 06-06-1973.
2. Letter No. RFD/CR-12/2009-10 dated 28-01-2010, from Commissioner of Commercial Taxes, Bangalore.
3. Letter No. RFD/CR-12/2009-10 dated 19-03-2010 and 08-07-2010 from Additional Commissioner of Commercial Taxes, Bangalore.

***

Preamble:

In the Government order read at SI. No. 1 above, sanction has been accorded for conversion of purchase tax dues from sugar factories into interest free loan and it shall be recovered over a period of five years, after the expiry of the first ten years (concessional period) in equal annual installments to be paid before 30th September each year.

The Commissioner of Commercial Taxes and Additional Commissioner of Commercial Taxes in his letters read at (2) & (3) above has sent the proposal for providing a sum of Rs. 41,18,02,930/- (Rupees Forty one crores eighteen lakhs two thousand nine hundred and thirty only) for conversion of purchase tax on sugarcane into interest free loan in respect of the following 9 sugar factories.

(in Rupees)

Sl. No.	Name of the Societies	Year	Private	Co-operative
1	M/s Raitara Sahakari, Sakkare Kharkhane, Mudhola, Bagalkote	2008-09	-	1,36,18,336-00
2	M/s Mahatma Gandhi Sahakari Sakkare, Kharkhane, Balki, Bidar	2007-08 2008-09	-	65,87,763-00 1,04,99,453-00
3	M/s Bhagyalakshmi, Sahakari Sakkare Kharkhane, Khanapur	2004-05 2005-06 2006-07 2007-08	-	40,71,019-00 1,06,94,008-00 1,11,09,426-00 15,25,295-00
4	M/s Venkatesh Power Project LTD.,Bedakihall	2005-06 2006-07 2008-09	1,63,7,055-00 2,51.92.940-00 2,13,64,845-00	-
5	M/s Jamkhandi Sugars Ltd., Hippargi, Jamkhandi Taluk, Bagalkote	2008-09	2,28,40,191-00	-
6	M/s Prabhulingeshwara Sugars and Chemicals, Siddapur, Jamkhandi Taluk, Bagalkote	2005-06 2006-07 2007-08 2008-09	4,17,22,029-00 4,75,81,632-00 2,01,11,619-00 3,73,32,918-00	-
7	M/s Coromandal Sugars Ltd., (I.C.L. Sugars)	2007-08	35,43,977-00	-
8	M/s Athani Farmers Sugars Factory, Athani	2007-08 2008-09	90,37,803-00 1,10,38,211-00	-
9	M/s Shree Renuka Sugars Ltd., Manoli, Belgaum	2006-07 2007-08 2008-09	3,40,07,426-00 77,46,732-00 5,58,00,252-00	-
			35,36,97,630-00	5,81,05,300-00
	Total Private & Co-operative			**41,18,02,930-00**

The Proposal has been examined in detail. Hence, the following order.

Government Order No. CI 44 SGF 2010, Bangalore, dated 30th August, 2010

Government are pleased to accord sanction and release a sum of Rs. 41,18,02,930/- (Rupees Forty one crores eighteen lakhs two thousand nine hundred and thirty only) towards conversion of purchase tax on sugar cane into interest free loan to the following 9 sugar factories subject to the condition that the said release is by way of book adjustment not involving out go of cash, by debiting a sum of Rs. 5,81,05,300-00 (Rupees Five crores eight one lakhs five thousand three hundred only) in respect of three Co-operative sugar factories and a sum of Rs. 35,36,97,630-00 (Rupees Thirtyfive crores thirtysix lakhs ninety seven thousand six hundred and thirty only) in respect of 6 private sugar factories.

The funds released will be provided in the supplementary estimates 2010-11 (1st installment) shall be debited as loan in respect of Co-operative Sugar factories and Private sugar factories to the head of account 6860-04-190-1-16(P) – 394 Loans and equal amount shall be taken as receipt under head account 0040-00-102-0-01 sales tax by countra entry as receipt from the concerned sugar factories towards purchase tax on sugar cane. This is only a book adjustment and there is no cash outgo involved. As there is no provision is made in the budget 2010-11 for this purpose.

(in Rupees)

Sl. No.	Name of the Societies	Year	Private	Co-operative
1	M/s Raitara Sahakari, Sakkare Kharkhane, Mudhola, Bagalkote	2008-09	-	1,36,18,336-00
2	M/s Mahatma Gandhi Sahakari Sakkare, Kharkhane, Balki, Bidar	2007-08 2008-09	-	65,87,763-00 1,04,99,453-00
3	M/s Bhagyalakshmi, Sahakari Sakkare Kharkhane, Khanapur	2004-05 2005-06 2006-07 2007-08	-	40,71,019-00 1,06,94,008-00 1,11,09,426-00 15,25,295-00
4	M/s Venkatesh Power Project LTD.,Bedakihall	2005-06 2006-07 2008-09	1,63,77,055-00 2,51.92.940-00 2,13,64,845-00	-

5	M/s Jamkhandi Sugars Ltd., Hippargi, Jamkhandi Taluk, Bagalkote	2008-09	2,28,40,191-00	-
6	M/s Prabhulingeshwara Sugars and Chemicals, Siddapur, Jamkhandi Taluk, Bagalkote	2005-06 2006-07 2007-08 2008-09	4,17,22,029-00 4,75,81,632-00 2,01,11,619-00 3,73,32,918-00	-
7	M/s Coromandal Sugars Ltd., (I.C.L. Sugars)	2007-08	35,43,977-00	-
8	M/s Athani Farmers Sugars Factory, Athani	2007-08 2008-09	90,37,803-00 1,10,38,211-00	-
9	M/s Shree Renuka Sugars Ltd., Manoli, Belgaum	2006-07 2007-08 2008-09	3,40,07,426-00 77,46,732-00 5,58,00,252-00	-
			35,36,97,630-00	5,81,05,300-00
	Total Private & Co-operative			**41,18,02,930-00**

The Accountant General, Bangalore is requested to carry out necessary adjustments as indicated above in the books of accounts for 2010-11.

This order is issued with the concurrence of the Finance Department vide its Note No. FD 588 Exp-I/2010 dated 28-04-2010 & U.O. Note No. FD 588 Exp-1/2010 dated 16-08-2010.

By Order and in the name of the Governor of Karnataka
(**P. Ananda Kumar)**
Desk Officer (Sugar)
Commerce & Industries Department

P.R. 2315

ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವಾಲಯ

ವಿಷಯ : ಹೈದ್ರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ 2010–11ನೇ ಸಾಲಿನ ಎರಡನೆಯ ಕಂತಾಗಿ ರೂ. 575.00 ಲಕ್ಷಗಳನ್ನು ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ : 1) ಪತ್ರ ಸಂಖ್ಯೆ: ಹೈಕಪ್ರಮಂ/ಹನಿ/ಎಸಿ–1/2010/790 ದಿನಾಂಕ: 23–07–2010.
2) ಸರ್ಕಾರಿ ಆದೇಶ ಸಂಖ್ಯೆ: ಯೋಇ 39 ಹೈಕಮಂ 2010 ದಿನಾಂಕ: 25–06–2010.

ಪ್ರಸ್ತಾವನೆ :

2010–11ನೇ ಸಾಲಿನಲ್ಲಿ ಹೈದ್ರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ಲೆಕ್ಕಶೀರ್ಷಿಕೆ "2515–00–800–0–01– (ಯೋಜನೆ)" ಅಡಿಯಲ್ಲಿ ರೂ. 130.00 ಲಕ್ಷಗಳನ್ನು ಹಾಗೂ "4515–00–800–0–01" ಅಡಿಯಲ್ಲಿ ರೂ. 2170.00 ಲಕ್ಷಗಳನ್ನು ಒದಗಿಸಲಾಗಿದೆ. ಮೇಲೆ ಓದಲಾದ(2)ರ ಆದೇಶದಲ್ಲಿ ಮೊದಲನೇ ಕಂತಾಗಿ ರೂ. 575.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿತ್ತು. ಮೇಲೆ ಓದಲಾದ(1)ರ ಪತ್ರದಲ್ಲಿ ಕಾರ್ಯದರ್ಶಿ, ಹೈದ್ರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ, ಇವರು ಎರಡನೆಯ ಕಂತಾಗಿ ರೂ. 575.00 ಲಕ್ಷಗಳನ್ನು ಬಿಡುಗಡೆ ಮಾಡಲು ಕೋರಿರುವ ಹಿನ್ನಲೆಯಲ್ಲಿ ಮಂಡಳಿಗೆ ಎರಡನೆಯ ಕಂತಾಗಿ ರೂ. 575.00 ಲಕ್ಷಗಳನ್ನು ಬಿಡುಗಡೆ ಮಾಡಲು ಉದ್ದೇಶಿಸಲಾಗಿದೆ. ಆದುದರಿಂದ ಈ ಆದೇಶ

ಸರ್ಕಾರಿ ಆದೇಶ ಸಂಖ್ಯೆ: ಯೋಇ 39 ಹೈಕಮಂ 2010, ಬೆಂಗಳೂರು, ದಿನಾಂಕ: 30–08–2010

2010–11ನೇ ಸಾಲಿನಲ್ಲಿ ಹೈದ್ರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ಲೆಕ್ಕಶಿರ್ಷಿಕೆ "4515–00–800–0–01–132" (ಬಂಡವಾಳ ವೆಚ್ಚಗಳು) ಅಡಿಯಲ್ಲಿ ರೂ. 575.00 ಲಕ್ಷಗಳನ್ನು (ಐನೂರ ಎಪ್ಪತ್ತೈದು ಲಕ್ಷಗಳು ಮಾತ್ರ) ಬಿಡುಗಡೆ ಮಾಡಲಾಗಿದೆ.

2) ಬಿಡುಗಡೆಯಾದ ಮೊತ್ತವನ್ನು ಮಂಡಳಿಯ ವೈಯಕ್ತಿಕ ಖಾತೆಯಲ್ಲಿ ಮೊದಲು ಇಟ್ಟು ನಂತರ ಕಾರ್ಯಕ್ರಮದ ಅನುಗುಣವಾಗಿ ಖರ್ಚು ಮಾಡತಕ್ಕದ್ದು. ನಿಯಮಾನುಸಾರ ಹಣ ಬಳಕೆ ದೃಢೀಕರಣ ಪತ್ರವನ್ನು 2010–11ರ ಸಾಲಿನಲ್ಲಿ ಮಂಡಳಿಯ ಕಾರ್ಯದರ್ಶಿಯವರು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

3) ಗುಲ್ಬರ್ಗಾ ಜಿಲ್ಲೆಯ ಕಾಮಗಾರಿಗಳಿಗೆ ಅನುದಾನವನ್ನು ಚುನಾವಣಾ ನೀತಿ ಸಂಹಿತೆ ಮುಕ್ತಾಯಗೊಂಡ ನಂತರ ಬಿಡುಗಡೆ ಮಾಡತಕ್ಕದ್ದು.

4) ಈ ಆದೇಶವನ್ನು ಆದೇಶ ಸಂಖ್ಯೆ : ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ: 16–05–2008ರಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರಿಗೆ ನೀಡಲಾದ ಅಧಿಕಾರ ಪ್ರತ್ಯಾಯೋಜನೆಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
(ಬಿ. ಚಿಕ್ಕರಾಜು)
ಸರ್ಕಾರದ ಅಧೀನ ಕಾರ್ಯದರ್ಶಿ 1 & 2
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ

ಪಿ.ಆರ್. 2316

ENERGY SECRETARIAT

Sub :- M/s Udupi Power Corporation Limited (UPCL) Augmentation of capacity from 1015 MW to 1200 MW and Supplementary Power Purchase Agreement.

Read :- 1) G.O. No. EN 15 PPC 2005, dated 17-06-2010.

2) Letter No. ಬೆವಿಕಂ/ಬಿಸಿ–09/1569/2010011 ದಿನಾಂಕ: 11–08–2010 received from the Managing Director, Bangalore Electricity Supply Company Limited.

***

Preamble:

1. In Government Order read at (1) above has constituted the Independent Committee under the Chairmanship of Hon'ble Justice Sri. R. Gururajan to examine afresh the request of M/s Udupi Power Corporation Limited (UPCL). The Committee was directed to submit its Report to the Government within a period of two months. The time provided by the Government for finalization of its report expires on 17-08-2010.

2. The Managing Director, Bangalore Electricity Supply Company Limited and Nodal Officer of the above Committee vide letter read at (2) above has stated that the Committee met on the following days:

i) 7th July 2010 at Kaveri Bhavan, Bangalore.

ii) 12th and 13th July 2010 at Plant Site, Udupi

iii) 3rd, 4th and 5th August 2010 at Kaveri Bhavan, Bangalore.

The next Meeting of the Committee is scheduled for 31st August 2010, 1st September 2010 and 2nd September 2010.

3. Further, the managing Director, BESCOM has stated that the Committee in its meeting held on 5th August 2010 expressed that the time provided by the Government for finalization of its report may not be adequate and hence desires to seek extension of time by one more month. The Managing Director, BESCOM has requested to extend the period of the Committee by one more month.

4. The request of the Managing Director, BESCOM, has been examined and issued the following order:

Government Order No. EN 15 PPC 2005, Bangalore, dated 21st August, 2010

Under the circumstances explained in the Preamble, the State Government is pleased to accord approval to extend the term of the Committee for finalization and submission of its Report to the Government up to 17th September 2010.

By Order and in the name of the Governor of Karnataka

(**S. J. Sampath Kumar)**

Under Secretary to Government,

Energy Department.

P.R. 2317

ನಗರಾಭಿವೃದ್ಧಿ ಸಚಿವಾಲಯ

ವಿಷಯ : ನಗರಾಭಿವೃದ್ಧಿ ಪ್ರಾಧಿಕಾರಗಳ ಲೆಕ್ಕ ಪರಿಶೋಧನಾ ವರದಿಗಳಲ್ಲಿನ ಆಕ್ಷೇಪಣೆ/ವಸೂಲಾತಿ ಕಂಡಿಕೆಗಳ ತೀರುವಳಿ ಕುರಿತು.

ಓದಲಾಗಿದೆ : 1. ಸರ್ಕಾರದ ಅಧಿಸೂಚನೆ ಸಂಖ್ಯೆ: ಹೆಚ್‌ಯುಡಿ 580 ಎಂಐಬಿ 83, ದಿನಾಂಕ: 12–84

2. ನಿಯಂತ್ರಕರು, ರಾಜ್ಯ ಲೆಕ್ಕಪತ್ರ ಇಲಾಖೆ ಇವರ ಪತ್ರ ಸಂಖ್ಯೆ: ರಾಲೆಪ:ನಸ್ಥಸ: 1(1) : ಬನಪ್ರಾ: ಲೆಪವ: 08–09: 550, ದಿನಾಂಕ: 10–05–2010.

ಪ್ರಸ್ತಾವನೆ :

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987ರ ಕಲಂ 48(2) ಹಾಗೂ ಮೇಲೆ ಓದಲಾದ ಅಧಿಸೂಚನೆಯನ್ವಯ ನಗರಾಭಿವೃದ್ಧಿ ಪ್ರಾಧಿಕಾರಗಳ ಲೆಕ್ಕ ಪರಿಶೋಧನೆಯನ್ನು ನಿಯಂತ್ರಕರು, ರಾಜ್ಯ ಲೆಕ್ಕಪತ್ರ ಇಲಾಖೆಯ ವತಿಯಿಂದ ಕೈಗೊಳ್ಳಲು ಅವಕಾಶ ಕಲ್ಪಿಸಿರುವ ಹಿನ್ನೆಲೆಯಲ್ಲಿ ಆಯಾ ಜಿಲ್ಲೆಗಳ ವ್ಯಾಪ್ತಿಯಲ್ಲಿ ಬರುವ ಪ್ರಾಧಿಕಾರಗಳ ಲೆಕ್ಕಪರಿಶೋಧನೆಯನ್ನು ಸಂಬಂಧಪಟ್ಟ ವರ್ತುಲ ಕಛೇರಿಗಳ ಸಹಾಯಕ ನಿಯಂತ್ರಕರು ಕೈಗೊಂಡು ಲೆಕ್ಕಪರಿಶೋಧನಾ ವರದಿಗಳನ್ನು ಬಿಡುಗಡೆಗೊಳಿಸಲಾಗುತ್ತಿದೆ.

ಲೆಕ್ಕಪರಿಶೋಧನಾ ವರದಿಗಳಲ್ಲಿ ಆಕ್ಷೇಪಣೆ/ವಸೂಲಾತಿಗೆ ಸೂಚಿಸಿರುವ ಕಂಡಿಕೆಗಳಿಗೆ ಪ್ರಾಧಿಕಾರಗಳು ಅನುಪಾಲನಾ ವರದಿಯನ್ನು ಸಲ್ಲಿಸಿದ ನಂತರ ಕಂಡಿಕೆಗಳನ್ನು ಇತ್ಯರ್ಥಪಡಿಸಲು ಸಕ್ಷಮ ಪ್ರಾಧಿಕಾರ ಯಾರು ಎಂಬ ಬಗ್ಗೆ ಯಾವುದೇ ನಿರ್ದೇಶನ ಇಲ್ಲದಿರುವುದರಿಂದ ಲೆಕ್ಕಪರಿಶೋಧನೆ ಕಂಡಿಕೆಗಳನ್ನು ತೀರುವಳಿಗೊಳಿಸುವ ಬಗ್ಗೆ ಸ್ಪಷ್ಟ ನಿರ್ದೇಶನ ನೀಡಲು ಮೇಲೆ ಓದಲಾದ ಕ್ರಮಾಂಕ (2) ಪತ್ರದಲ್ಲಿ ರಾಜ್ಯ ಲೆಕ್ಕ ಪತ್ರ ಇಲಾಖೆ ನಿಯಂತ್ರಕರು ಕೋರಿರುತ್ತಾರೆ.

ಈ ಬಗ್ಗೆ ಸರ್ಕಾರವು ಪರಿಶೀಲಿಸಿ ಕರ್ನಾಟಕ ಮುನಿಸಿಪಲ್ ಕಾಯ್ದೆ 1964 ರ ಸೆಕ್ಷನ್ 295 ರ ಪ್ರಕಾರ ನಗರ ಸ್ಥಳೀಯ ಸಂಸ್ಥೆಗಳ ಮತ್ತು ಕರ್ನಾಟಕ ನಗರ ಯೋಜನಾ ಪ್ರಾಧಿಕಾರಗಳ ನಿಯಮ 1965 ರ ನಿಯಮ 27ರ ಪ್ರಕಾರ ಯೋಜನಾ ಪ್ರಾಧಿಕಾರಗಳ ಲೆಕ್ಕ ಪರಿಶೋಧನಾ ವರದಿಗಳಿಗೆ

ಸಲ್ಲಿಸಲಾಗುವ ಅನುಸರಣಾ ವರದಿಗಳನ್ನು ಇತ್ಯರ್ಥಪಡಿಸಲು ನಿಯಂತ್ರಕರು ರಾಜ್ಯ ಲೆಕ್ಕ ಪತ್ರ ಇಲಾಖೆರವರೇ ಸಕ್ಷಮ ಪ್ರಾಧಿಕಾರಗಳಾಗಿರುವ ಪ್ರಯುಕ್ತ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಲೆಕ್ಕ ಪರಿಶೋಧನಾ ವರದಿಗಳಲ್ಲಿನ ಆಕ್ಷೇಪಣೆ/ವಸೂಲಾತಿ ಕಂಡಿಕೆಗಳ ತೀರುವಳಿಗೊಳಿಸುವ ವಿಧಾನದಲ್ಲಿ ಸಹ ಏಕರೂಪತೆಯನ್ನು ತರುವ ಉದ್ದೇಶದಿಂದ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಲೆಕ್ಕಪರಿಶೋಧನಾ ವರದಿಗಳಲ್ಲಿನ ಆಕ್ಷೇಪಣೆ/ವಸೂಲಾತಿ ಮತ್ತು ನಿಯಾಮಾವಳಿಗಳಿಗೆ ವಿರುದ್ಧವಾಗಿ ಪ್ರಾಧಿಕಾರದ ಹಣವನ್ನು ಉಪಯೋಗಿಸಿದ್ದಲ್ಲಿ ಅಂತಹ ಪ್ರಕರಣಗಳ ಬಗ್ಗೆ ಸೂಕ್ತ ಕ್ರಮ ಕೈಗೊಂಡು ಕಾಯ್ದೆಯೊಳಗೆ ಅವಕಾಶ ಕಲ್ಪಿಸಿರುವ ಪ್ರಕರಣಗಳ ತೀರುವಳಿಗಳನ್ನು ರಾಜ್ಯ ಲೆಕ್ಕಪತ್ರ ಇಲಾಖೆ ವತಿಯಿಂದಲೇ ಕ್ರಮ ಕೈಗೊಳ್ಳಲು ಸರ್ಕಾರದ ಅನುಮೋದನೆ ಅಗತ್ಯವಿರುತ್ತದೆ. ನಿಯಮಾವಳಿಗಳಲ್ಲಿ ಅವಕಾಶ ಕಲ್ಪಿಸದೇ ಇದ್ದಂತ ಆಕ್ಷೇಪಣೆಗಳಿಗೆ ಸಂಬಂಧಿಸಿದಂತೆ ವಿವರವಾದ ವರದಿಯೊಂದಿಗೆ ಸೂಕ್ತ ಶಿಫಾರಸ್ಸಿನೊಂದಿಗೆ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವುದು ಸಹ ಅಗತ್ಯವಿರುತ್ತದೆ. ರಾಜ್ಯ ಲೆಕ್ಕಪತ್ರ ಇಲಾಖೆಯು ಪ್ರಾಧಿಕಾರಗಳ ಈ ಹಿಂದಿನ ಲೆಕ್ಕಪರಿಶೋಧನಾ ವರದಿಗಳಿಗೆ ತೀರುವಳಿಗಳು ಬಾಕಿ ಇದ್ದಲ್ಲಿ ಸಹ ಸೂಕ್ತ ಅಗತ್ಯ ಕ್ರಮ ವಹಿಸುವುದು ಸಹ ಅಗತ್ಯವಿರುತ್ತದೆ.

ಅನುಸರಣಾ ವರದಿಯನ್ನು ಪರಿಶೀಲಿಸಿ ಕಂಡಿಕೆಗಳನ್ನು ತೀರುವಳಿಗೊಳಿಸುವಲ್ಲಿ ಉಂಟಾಗುವ ವಿಳಂಬವನ್ನು ತಪ್ಪಿಸುವ ದೃಷ್ಟಿಯಿಂದ ಆಕ್ಷೇಪಣೆಗಳನ್ನು ತೀರುವಳಿಗೊಳಿಸುವ ವಿಧಾನದಲ್ಲಿ ಎಕರೂಪತೆಯನ್ನು ತರುವ ಉದ್ದೇಶದಿಂದ ನಗರಾಭಿವೃದ್ಧಿ ಪ್ರಾಧಿಕಾರಗಳ ಲೆಕ್ಕ ಪರಿಶೋಧನಾ ವರದಿಗಳಲ್ಲಿನ ಆಕ್ಷೇಪಿತ ಕಂಡಿಕೆಗಳನ್ನು ತೀರುವಳಿಗೊಳಿಸಲು ಮೇಲೆ ಕ್ರಮಾಂಕ (2) ರ ಪತ್ರದಲ್ಲಿ ಕೋರಿರುವ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ನಅಇ 358 ಬೆಮೆಪ್ರಾ 2009 (ಭಾಗ–2), ಬೆಂಗಳೂರು, ದಿನಾಂಕ: 24–08–2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ' ಲೆಕ್ಕ ಪರಿಶೋಧನಾ ವರದಿಗಳಲ್ಲಿನ ಆಕ್ಷೇಪಣೆ/ವಸೂಲಾತಿ ಕಂಡಿಕೆಗಳ ತೀರುವಳಿಗಳನ್ನು (ಬಾಕಿ ಇತ್ಯರ್ಥಗೊಳಿಸದಿರುವ ಹಿಂದಿನ ತೀರುವಳಿಗಳು ಸೇರಿ) ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987ರ ಕಲಂ 48(2) ರನ್ವಯ ರಾಜ್ಯ ಲೆಕ್ಕಪತ್ರ ಇಲಾಖೆ ವತಿಯಿಂದಲೇ ಕ್ರಮ ಕೈಗೊಳ್ಳಲು ಸರ್ಕಾರದ ಅನುಮೋದನೆ ನೀಡಿದೆ.

ಈ ಆದೇಶವನ್ನು ತಕ್ಷಣದಿಂದ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆಗೆ ಜಾರಿಯಲ್ಲಿರುವಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

(ಎಂ.ಎಂ. ಹಿರೇಮಠ)

ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ.ಆರ್. 2318

ನಗರಾಭಿವೃದ್ಧಿ ಇಲಾಖೆ

ಕಾರ್ಮಿಕ ಸಚಿವಾಲಯ

ವಿಷಯ : ಖಾಸಗಿ ಕೈಗಾರಿಕಾ ತರಬೇತಿ ಕೇಂದ್ರಗಳಿಗೆ ವಿದ್ಯಾರ್ಥಿ ಕೇಂದ್ರೀಕೃತ ಅನುದಾನ ನೀಡುವ ಬಗ್ಗೆ – ಆದೇಶ

ಓದಲಾಗಿದೆ : ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ ಇವರ ಪತ್ರ ಸಂ. ಉತಇ/ತ/ಸಂ–2/ವಿವ–01/2010–11, ದಿನಾಂಕ: 20–04–2010.

ಪ್ರಸ್ತಾವನೆ :

ಮೇಲೆ ಓದಲಾದ ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ ಇವರ ಪತ್ರದಲ್ಲಿ ಪ್ರಸ್ತುತ ರಾಜ್ಯದಲ್ಲಿ 158 ಸರ್ಕಾರಿ, 1110 ಖಾಸಗಿ ಕೈಗಾರಿಕಾ ತರಬೇತಿ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿದ್ದು, ಈ ಪೈಕಿ 146 ಖಾಸಗಿ ಸಂಸ್ಥೆಗಳ ಅರ್ಹ 1668 ಸಿಬ್ಬಂದಿಗಳಿಗೆ ಸರ್ಕಾರವು ಶೇ. 100 ರಷ್ಟು ವೇತನಾನುದಾನವನ್ನು ನೀಡುತ್ತಿರುವುದಾಗಿ ವರದಿ ಮಾಡಿರುತ್ತಾರೆ. ಅಲ್ಲದೆ ಖಾಸಗಿ ಸಂಸ್ಥೆಗಳ ಸಿಬ್ಬಂದಿಗಳಿಗೆ ಪ್ರಸ್ತುತ ಜಾರಿಯಲ್ಲಿರುವ ವೇತನಾನುದಾನ ಸಂಹಿತೆಯನುಸಾರ ವೇತನಾನುದಾನ ನೀಡುವ ಬದಲು ಶ್ರೀ ಪಿ.ಎಸ್.ಎಸ್. ಥಾಮಸ್ ಇವರ ಖಾಸಗಿ ವೆಚ್ಚಗಳ ಅಧ್ಯಯನದ ವರದಿಯ ಶಿಫಾರಸ್ಸಿನಂತೆ ವಿದ್ಯಾರ್ಥಿ ಕೇಂದ್ರೀಕೃತ ಸಹಾಯಾನುದಾನ ನೀಡುವುದು ಸೂಕ್ತವೆಂದು ಸರ್ಕಾರವು ಪರಿಗಣಿಸಿದೆ. ಅಲ್ಲದೆ ಮಾನ್ಯ ಮುಖ್ಯಮಂತ್ರಿಗಳು 2010–11ನೇ ಸಾಲಿನ ಆಯವ್ಯಯ ಭಾಷಣದಲ್ಲಿ "ರಾಜ್ಯದಲ್ಲಿ ಈಗಾಗಲೇ ಪ್ರಾರಂಭಿಸಲಾಗಿರುವ ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳಿಗೆ ಪ್ರತಿ ವಿದ್ಯಾರ್ಥಿಗೆ ಪ್ರತಿವರ್ಷ ರೂ. 6000 ರಂತೆ ಅನುದಾನವನ್ನು ನೀಡುವ ನೂತನ ಅನುದಾನ ಪದ್ಧತಿಯ ಜಾರಿಗಾಗಿ ರೂ. 50 ಕೋಟಿ ನೀಡಲಾಗುವುದು" ಎಂದು ಘೋಷಿಸಿರುತ್ತಾರೆ.

ಈ ಯೋಜನೆಯನ್ನು ರಾಜ್ಯದ ಅನುದಾನರಹಿತ ಎಲ್ಲಾ ಖಾಸಗಿ ಕೈಗಾರಿಕಾ ತರಬೇತಿ ಕೇಂದ್ರಗಳ ಎನ್‌ಸಿವಿಟಿ ಯಿಂದ ಸಂಯೋಜನೆ ಹೊಂದಿರುವ ಎಲ್ಲಾ ವೃತ್ತಿ/ಘಟಕಗಳಿಗೆ ಹಾಗೂ 146 ಅನುದಾನಿತ ಕೈಗಾರಿಕಾ ತರಬೇತಿ ಕೇಂದ್ರಗಳ, ಸರ್ಕಾರ ವೇತನಾನುದಾನ ನೀಡಿಲ್ಲದ ವೃತ್ತಿ/ಘಟಕಗಳಿಗೆ ಈ ಕೆಳಗಿನ ಷರತ್ತುಗಳಿಗೊಳಪಡಿಸಿ ಜಾರಿಗೆ ತರಬಹುದಾಗಿದೆ ಎಂದು ತಿಳಿಸಿರುತ್ತಾರೆ.

1. ಈ ಯೋಜನೆಯು ಈಗಾಗಲೇ ಜಾರಿಯಲ್ಲಿರುವ ವೇತನಾನುದಾನ ಸಂಹಿತೆಯಡಿಯಲ್ಲಿ ವೇತನಾನುದಾನ ಪಡೆಯುತ್ತಿರುವ ವೃತ್ತಿ/ಘಟಕಗಳನ್ನು ಹೊರತುಪಡಿಸಿ, ದಿನಾಂಕ: 31–06–2010 ರೊಳಗೆ ಸಂಯೋಜನೆ ಪಡೆದ ಉಳಿದೆಲ್ಲ ಸಂಸ್ಥೆಗಳ ಸಂಯೋಜನೆ ಹೊಂದಿರುವ ವೃತ್ತಿ/ಘಟಕಗಳಿಗೆ ಅನ್ವಯಿಸುತ್ತದೆ.
2. ಈ ಸಂಸ್ಥೆಗಳಲ್ಲಿ ಲಭ್ಯವಿರುವ ಒಟ್ಟು ಸ್ಥಾನಗಳನ್ನು ಅಯಾ ಸಂಸ್ಥೆಗಳು ಮೀಸಲಾತಿ ನಿಯಮದ ಪ್ರಕಾರ ಭರ್ತಿ ಮಾಡಿಕೊಳ್ಳುವುದು. ಪ್ರವೇಶಾತಿ ಸಂಬಂಧ ಸರ್ಕಾರ ಹೊರಡಿಸುವ ಮಾರ್ಗಸೂಚಿಗಳಿಗೆ ಬದ್ಧವಾಗಿರಬೇಕಾಗುತ್ತದೆ.
3. ಈ ಸಂಸ್ಥೆಗಳಲ್ಲಿ ಪ್ರತಿ ವೃತ್ತಿ/ಘಟಕಕ್ಕೆ ಡಿ.ಜಿ.ಇಟಿ. ನಿಯಮಾನುಸಾರ ಅರ್ಹ ಸಿಬ್ಬಂದಿಗಳಿರಬೇಕು.
4. ಎಲ್ಲಾ ಸಂಸ್ಥೆಗಳಿಗೆ ಆಯಾ ಹುದ್ದೆಯ ಮೂಲ ವೇತನದ ಶ್ರೇಣಿಯ ಕನಿಷ್ಠ ವೇತನವನ್ನು ಬ್ಯಾಂಕ್ ಖಾತೆಯ ಮೂಲಕ ಪಾವತಿಸಬೇಕು.
5. ಎಲ್ಲಾ ವೃತ್ತಿ/ಘಟಕಗಳಿಗೆ ಡಿ.ಜಿ.ಇಟಿ. ನಿಯಮಾನುಸಾರ ಇತ್ತೀಚಿನ ಪಠ್ಯಕ್ರಮದಂತೆ ಶೇ. 100 ರಷ್ಟು ಯಂತ್ರೋಪಕರಣಗಳಿರಬೇಕು.
6. ತರಬೇತಿ ಪೂರ್ಣಗೊಳಿಸಿದ ವಿದ್ಯಾರ್ಥಿಗಳಿಗೆ ಉದ್ಯೋಗ ಒದಗಿಸಲು ಸೂಕ್ತವಾದ ಪ್ಲೇಸ್‌ಮೆಂಟ್ ಸೆಲ್ ಅನ್ನು ಪ್ರತಿ ಸಂಸ್ಥೆಯು ಸ್ಥಾಪಿಸಿ ನಿರ್ವಹಿಸುವುದು.

7. ಸಂಯೋಜನೆ ಹೊಂದಿರುವ ಪ್ರತಿ ವೃತ್ತಿ/ಘಟಕದಲ್ಲಿ ತರಬೇತಿ ಪಡೆಯುವ ವಿದ್ಯಾರ್ಥಿಗೆ ಒಂದು ವರ್ಷಕ್ಕೆ ಗರಿಷ್ಠ ರೂ. 6000/– ದಂತೆ ಅನುದಾನ ಲೆಕ್ಕ ಮಾಡಿ ಎರಡು ಕಂತುಗಳಲ್ಲಿ ಆಯಾ ಸಂಸ್ಥೆಗೆ ತರಬೇತಿ ವೆಚ್ಚದ ಭಾಗವನ್ನು ಭರಿಸಲು ಈ ಕೆಳಗಿನಂತೆ ನೀಡಲಾಗುವುದು.

   ಒಂದು ವರ್ಷದ ವೃತ್ತಿಗೆ 2 ಕಂತುಗಳಲ್ಲಿ ಪ್ರತಿ ಕಂತು ರೂ. 3000 ದಂತೆ.

   ಎರಡು ವರ್ಷದ ವೃತ್ತಿಗೆ 4 ಕಂತುಗಳಲ್ಲಿ ಪ್ರತಿ ಕಂತು ರೂ. 3000 ದಂತೆ.

   ಮೂರು ವರ್ಷದ ವೃತ್ತಿಗೆ 6 ಕಂತುಗಳಲ್ಲಿ ಪ್ರತಿ ಕಂತು ರೂ. 3000 ದಂತೆ.

   ಪ್ರತಿ ವೃತ್ತಿಯ ಘಟಕದ ವಿದ್ಯಾರ್ಥಿಯ ಸಂಖ್ಯೆಗೆ ಅನುಗುಣವಾಗಿ ಲೆಕ್ಕ ಮಾಡಿ ವಿತರಿಸಲಾಗುವುದು.

8. ಈ ಸಂಸ್ಥೆಗಳಲ್ಲಿ ಅನುದಾನಕ್ಕೆ ಪರಿಗಣಿಸುವ ಪ್ರವೇಶಗೊಂಡ ತರಬೇತಿ ಪಡೆಯುತ್ತಿರುವ ತರಬೇತಿದಾರನು ಶೇ, 80 ರಷ್ಟು ಹಾಜರಾತಿ ಹೊಂದಿರಬೇಕು. ಈ ಹಾಜರಾತಿಯನ್ನು ಆರು ತಿಂಗಳ ಅವಧಿಯಲ್ಲಿ ಲೆಕ್ಕ ಹಾಕಿ ಪರಿಗಣಿಸಬೇಕು.
9. ಒಂದು ವರ್ಷದ ನಂತರ ಈ ಸಂಸ್ಥೆಗಳಿಗೆ ಅನುದಾನವನ್ನು ಮುಂದುವರೆಸುವಾಗ/ಪಾವತಿಸಲು ಹಿಂದಿನ ವರ್ಷದ ಆ ಸಂಸ್ಥೆಯ ವೃತ್ತಿ ಪರೀಕ್ಷಾ ಫಲಿತಾಂಶವು ಶೇ. 60 ಕ್ಕಿಂತ ಕಡಿಮೆ ಇರಬಾರದು ಹಾಗೂ ಮೇಲಿನ ಎಲ್ಲಾ ನಿಬಂಧನೆಗಳನ್ನು ಪೂರೈಸಿರಬೇಕು.
10. ವಿದ್ಯಾರ್ಥಿ ಕೇಂದ್ರೀಕೃತ ಅನುದಾನಕ್ಕಾಗಿ ನಿಗದಿತ ನಮೂನೆಯಲ್ಲಿ ಉದ್ಯೋಗ ಮತ್ತು ತರಬೇತಿ ಇಲಾಖೆ, ಕೌಶಲ್ಯ ಭವನ, ಡೈರಿ ವೃತ್ತ, ಬೆಂಗಳೂರು-29 ಇಲ್ಲಿಗೆ ಅರ್ಜಿ ಸಲ್ಲಿಸಬೇಕು ಅರ್ಜಿ ಜೊತೆಗೆ ಸಲ್ಲಿಸಬೇಕಾದ ನಿಗದಿತ ದಾಖಲೆಗಳನ್ನು ಅನುಬಂಧಗೊಳಿಸಲಾಗಿದೆ.
11. ಈ ಯೋಜನೆಯಡಿ ಆರ್ಥಿಕ ಸೌಲಭ್ಯ ದಿನಾಂಕ: 01-04-2010 ರಿಂದ ಜಾರಿಗೆ ಬರುತ್ತದೆ.
12. ಮೇಲಿನ ಯಾವುದೇ ನಿಬಂಧನೆಗಳನ್ನು ಪಾಲಿಸದ ಹಾಗೂ ಡಿ.ಜಿ.ಇಟಿ. ನಿಯಮಾನುಸಾರ ತರಬೇತಿ ನೀಡದೆ ಇರುವುದು ತನಿಖೆಗಳಲ್ಲಿ ಕಂಡು ಬಂದರೆ ಕೂಡಲೇ ಈ ಅನುದಾನವನ್ನು ನಿಲ್ಲಿಸಲಾಗುವುದು ಜೊತೆಗೆ ಶಿಸ್ತು ಕ್ರಮ ಜರುಗಿಸಲಾಗುವುದು ಹಾಗೂ ಸಂಯೋಜನೆಯನ್ನು ಹಿಂದಕ್ಕೆ ಪಡೆಯಲು ಕ್ರಮ ತೆಗೆದುಕೊಳ್ಳಲಾಗುವುದು.
13. ಈ ಬಗ್ಗೆ ಎಲ್ಲಾ ನಿಬಂಧನೆಗಳನ್ನು ಷರತ್ತುಗಳನ್ನು ಒಪ್ಪಿರುವ ಬಗ್ಗೆ ಪ್ರತಿ ಸಂಸ್ಥೆಯ ಆಡಳಿತ ಮಂಡಳಿ ಇಲಾಖೆಗೆ ಮುಚ್ಚಳಿಕೆ ನೀಡಬೇಕಾಗುತ್ತದೆ.

ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ ಕೆಳಗಿನಂತೆ ಆದೇಶಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ: ಕಾಇ 118 ಇಟಿಐ 2010 ಬೆಂಗಳೂರು, ದಿನಾಂಕ: 30-08-2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ರಾಜ್ಯದ ಖಾಸಗಿ ಕೈಗಾರಿಕಾ ತರಬೇತಿ ಕೇಂದ್ರಗಳಿಗೆ ವಿದ್ಯಾರ್ಥಿ ಆಧಾರಿತ ಅನುದಾನ ಪದ್ಧತಿಯನ್ನು ಈ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟು ದಿನಾಂಕ 01-04-2010 ರಿಂದ ಜಾರಿಗೆ ತರಲು ಮಂಜೂರಾತಿ ನೀಡಲಾಗಿದೆ.

1. ಈ ಯೋಜನೆಯು ಈಗಾಗಲೇ ಜಾರಿಯಲ್ಲಿರುವ ವೇತನಾನುದಾನ ಸಂಹಿತೆಯಡಿಯಲ್ಲಿ ವೇತನಾನುದಾನ ಪಡೆಯುತ್ತಿರುವ ವೃತ್ತಿ/ಘಟಕಗಳನ್ನು ಹೊರತುಪಡಿಸಿ, ದಿನಾಂಕ: 31-06-2010 ರೊಳಗೆ ಸಂಯೋಜನೆ ಪಡೆದ ಉಳಿದೆಲ್ಲ ಸಂಸ್ಥೆಗಳ ಸಂಯೋಜನೆ ಹೊಂದಿರುವ ವೃತ್ತಿ/ಘಟಕಗಳಿಗೆ ಅನ್ವಯಿಸುತ್ತದೆ.
2. ಈ ಸಂಸ್ಥೆಗಳಲ್ಲಿ ಲಭ್ಯವಿರುವ ಒಟ್ಟು ಸ್ಥಾನಗಳನ್ನು ಆಯಾ ಸಂಸ್ಥೆಗಳು ಮೀಸಲಾತಿ ನಿಯಮದ ಪ್ರಕಾರ ಭರ್ತಿ ಮಾಡಿಕೊಳ್ಳುವುದು. ಪ್ರವೇಶಾತಿ ಸಂಬಂಧ ಸರ್ಕಾರ ಹೊರಡಿಸುವ ಮಾರ್ಗಸೂಚಿಗಳಿಗೆ ಬದ್ಧವಾಗಿರತಕ್ಕದ್ದು.
3. ಈ ಸಂಸ್ಥೆಗಳಲ್ಲಿ ಪ್ರತಿ ವೃತ್ತಿ/ಘಟಕಕ್ಕೆ ಡಿ.ಜಿ.ಇ.ಟಿ. ನಿಯಮಾನುಸಾರ ಅರ್ಹ ಸಿಬ್ಬಂದಿಗಳಿರಬೇಕು.
4. ಎಲ್ಲಾ ಸಂಸ್ಥೆಗಳಿಗೆ ಆಯಾ ಹುದ್ದೆಯ ನಿಗದಿಪಡಿಸಲಾದ ಕನಿಷ್ಠಕ್ಕಿಂತ ಕಡಿಮೆ ಇಲ್ಲದ ವೇತನವನ್ನು ಬ್ಯಾಂಕ್ ಖಾತೆ ಮೂಲಕ ಪಾವತಿಸಬೇಕು.
5. ಎಲ್ಲಾ ವೃತ್ತಿ/ಘಟಕಕ್ಕೆ ಡಿ.ಜಿ.ಇ.ಟಿ. ನಿಯಮಾನುಸಾರ ಇತ್ತೀಚಿನ ಪಠ್ಯಕ್ರಮದಂತೆ ಶೇ. 100 ರಷ್ಟು ಯಂತ್ರೋಪಕರಣಗಳಿರಬೇಕು.
6. ತರಬೇತಿ ಪೂರ್ಣಗೊಳಿಸಿದ ವಿದ್ಯಾರ್ಥಿಗಳಿಗೆ ಉದ್ಯೋಗ ಒದಗಿಸಲು ಸೂಕ್ತವಾದ ಪ್ಲೇಸ್‌ಮೆಂಟ್ ಸೆಲ್ ಅನ್ನು ಪ್ರತಿ ಸಂಸ್ಥೆಯು ಸ್ಥಾಪಿಸಿ ನಿರ್ವಹಿಸತಕ್ಕದ್ದು.
7. ಸಂಯೋಜನೆ ಹೊಂದಿರುವ ಪ್ರತಿ ವೃತ್ತಿ/ಘಟಕದಲ್ಲಿ ತರಬೇತಿ ಪಡೆಯುವ ವಿದ್ಯಾರ್ಥಿಗೆ ಒಂದು ವರ್ಷಕ್ಕೆ ಗರಿಷ್ಠ ರೂ. 6000/– ದಂತೆ ಅನುದಾನ ಲೆಕ್ಕ ಮಾಡಿ ಎರಡು ಕಂತುಗಳಲ್ಲಿ ಆಯಾ ಸಂಸ್ಥೆಗೆ ತರಬೇತಿ ವೆಚ್ಚದ ಭಾಗವನ್ನು ಭರಿಸಲು ಈ ಕೆಳಗಿನಂತೆ ನೀಡಲಾಗುವುದು.

   ಒಂದು ವರ್ಷದ ವೃತ್ತಿಗೆ 2 ಕಂತುಗಳಲ್ಲಿ ಪ್ರತಿ ಕಂತು ರೂ. 3000 ದಂತೆ.

   ಎರಡು ವರ್ಷದ ವೃತ್ತಿಗೆ 4 ಕಂತುಗಳಲ್ಲಿ ಪ್ರತಿ ಕಂತು ರೂ. 3000 ದಂತೆ.

   ಮೂರು ವರ್ಷದ ವೃತ್ತಿಗೆ 6 ಕಂತುಗಳಲ್ಲಿ ಪ್ರತಿ ಕಂತು ರೂ. 3000 ದಂತೆ.

8. ಈ ಸಂಸ್ಥೆಗಳಲ್ಲಿ ಅನುದಾನಕ್ಕೆ ಪರಿಗಣಿಸುವ ಪ್ರವೇಶಗೊಂಡ ತರಬೇತಿ ಪಡೆಯುತ್ತಿರುವ ತರಬೇತಿದಾರನು ಶೇ, 80 ರಷ್ಟು ಹಾಜರಾತಿ ಹೊಂದಿರಬೇಕು. ಈ ಹಾಜರಾತಿಯನ್ನು ಆರು ತಿಂಗಳ ಅವಧಿಯಲ್ಲಿ ಲೆಕ್ಕ ಹಾಕಿ ಪರಿಗಣಿಸಬೇಕು.
9. ವಿದ್ಯಾರ್ಥಿ ಕೇಂದ್ರೀಕೃತ ಅನುದಾನಕ್ಕಾಗಿ ನಿಗದಿತ ನಮೂನೆಯಲ್ಲಿ ಉದ್ಯೋಗ ಮತ್ತು ತರಬೇತಿ ಇಲಾಖೆ, ಕೌಶಲ್ಯ ಭವನ, ಡೈರಿ ವೃತ್ತ, ಬೆಂಗಳೂರು-29 ಇಲ್ಲಿಗೆ ಅರ್ಜಿ ಸಲ್ಲಿಸಬೇಕು ಅರ್ಜಿ ಜೊತೆಗೆ ಸಲ್ಲಿಸಬೇಕಾದ ನಿಗದಿತ ದಾಖಲೆಗಳನ್ನು ಅನುಬಂಧಗೊಳಿಸಲಾಗಿದೆ.
10. ಮೇಲಿನ ಯಾವುದೇ ನಿಬಂಧನೆಗಳನ್ನು, ಪಾಲಿಸದ ಹಾಗೂ ಡಿಜಿಇಟಿ ನಿಯಮಾನುಸಾರ ತರಬೇತಿ ನೀಡದೆ ಇರುವುದು ತನಿಖೆಗಳಲ್ಲಿ ಕಂಡು ಬಂದರೆ ಕೂಡಲೇ ಈ ಅನುದಾನವನ್ನು ನಿಲ್ಲಿಸಲಾಗುವುದು. ಜೊತೆಗೆ ಶಿಸ್ತು ಕ್ರಮ ಜರುಗಿಸಲಾಗುವುದು ಹಾಗೂ ಸಂಯೋಜನೆಯನ್ನು ಹಿಂದಕ್ಕೆ ಪಡೆಯಲು ಕ್ರಮ ತೆಗೆದುಕೊಳ್ಳಲಾಗುವುದು.

11. ಈ ಬಗ್ಗೆ ಎಲ್ಲಾ ನಿಬಂಧನೆಗಳನ್ನು, ಷರತ್ತುಗಳನ್ನು ಒಪ್ಪಿರುವ ಬಗ್ಗೆ ಪ್ರತಿ ಸಂಸ್ಥೆಯ ಆಡಳಿತ ಮಂಡಳಿ ಇಲಾಖೆಗೆ ಮುಚ್ಚಳಿಕೆ ನೀಡತಕ್ಕದ್ದು.
12. ರಾಜ್ಯದಲ್ಲಿನ ಓಅಗಿಖಿ ಪ್ರಮಾಣೀಕರಿಸಿದ 5 ವರ್ಷ ಪೂರೈಸಿದ ವೇತನಾನುದಾನಕ್ಕೊಳಪಡದ ಖಾಸಗಿ ಕೈಗಾರಿಕಾ ತರಬೇತಿ ಕೇಂದ್ರಗಳಲ್ಲಿನ ಪ್ರತಿ ವಿದ್ಯಾರ್ಥಿಗೆ ರೂ. 6,000 ರಂತೆ ವಿದ್ಯಾರ್ಥಿ ಆಧಾರಿತ ಸಹಾಯಾನುದಾನವನ್ನು ಈ ಕೆಳಕಂಡ ಉಪ ಷರತ್ತುಗಳಿಗನುಸಾರ ನೀಡುವುದು. ಇನ್ನು ಮುಂದೆ ಆರಂಭವಾಗುವ ಹೊಸ ಕೈಗಾರಿಕಾ ತರಬೇತಿ ಕೇಂದ್ರಗಳಿಗೂ ಸಹ ಇದು ಅನ್ವಯವಾಗುತ್ತದೆ.
    ಅ. ಕನಿಷ್ಠ ಶೇ. 75 ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾದಲ್ಲಿ ಎಲ್ಲಾ ವಿದ್ಯಾರ್ಥಿಗಳಿಗೆ ಪ್ರತಿ ವಿದ್ಯಾರ್ಥಿಗೆ ರೂ. 6,000 ದಂತೆ;
    ಆ. ಶೇ. 75 ಕ್ಕಿಂತ ಕಡಿಮೆ ವಿದ್ಯಾರ್ಥಿಗಳು ಉತ್ತೀರ್ಣರಾದಲ್ಲಿ ಪ್ರತಿ ಶೇಕಡಾಂಶಕ್ಕೆ ಆವರ್ತಕ ಅನುದಾನವನ್ನು ಶೇ. 2ರ ಪ್ರಮಾಣದಲ್ಲಿ ಕಡಿತಗೊಳಿಸಲಾಗುವುದು. (ಉದಾಹರಣೆಗೆ: ಶೇ. 60 ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾದಲ್ಲಿ ಶೇ 30 ರಷ್ಟು (75–60) X 2, ಎ.ಜ., 15X2 =30 ವಿದ್ಯಾರ್ಥಿಗಳ ಅನುದಾನವನ್ನು ಕಡಿತಗೊಳಿಸಿ ಉಳಿದ ಶೇ. 70 ರಷ್ಟು ವಿದ್ಯಾರ್ಥಿಗಳಿಗೆ ಅನುದಾನ ನೀಡಲಾಗುವುದು. ಅಂತೆಯೇ ಶೇ. 50 ರಷ್ಟು ವಿದ್ಯಾರ್ಥಿಗಳು ಮಾತ್ರ ಉತ್ತೀರ್ಣರಾದಲ್ಲಿ, ಶೇ. 50 ರಷ್ಟು (75-50 x 2, i.e., 25x2) ವಿದ್ಯಾರ್ಥಿಗಳ ಅನುದಾನವನ್ನು ಕಡಿತಗೊಳಿಸಿ ಉಳಿದ ಶೇ. 50 ರಷ್ಟು ವಿದ್ಯಾರ್ಥಿಗಳಿಗೆ ಮಾತ್ರ ಅನುದಾನವನ್ನು ಪಾವತಿಸಲಾಗುವುದು.
    ಇ. ಶೇ. 50ಕ್ಕಿಂತ ಕಡಿಮೆ ವಿದ್ಯಾರ್ಥಿಗಳು ಉತ್ತೀರ್ಣರಾದಲ್ಲಿ ಶೇಕಡಾವಾರು ಪ್ರಮಾಣಕ್ಕನುಗುಣವಾಗಿ ಅನುದಾನವನ್ನು ಸೀಮಿತಗೊಳಿಸಲಾಗುವುದು. ಅಂದರೆ, ಶೇ. 50ಕ್ಕೂ ಹೆಚ್ಚು ಪ್ರಮಾಣದಲ್ಲಿ ಅನುತ್ತೀರ್ಣತೆ ಇದ್ದಲ್ಲಿ ಕಡಿತವಾಗುವ ಅನುದಾನ ಶೇ. 50+ ಶೇ. 50ರ ನಂತರದ ಪ್ರತಿ ಶೇ. 1ರ ಅನುತ್ತೀರ್ಣತೆಗೆ ಪ್ರತಿ ವಿದ್ಯಾರ್ಥಿಗೆ ಶೇ. 1 ರಷ್ಟು, ಉದಾಹರಣೆಗೆ ಉತ್ತೀರ್ಣತೆ ಪ್ರಮಾಣ ಶೇ. 40 ರಷ್ಟು ಆದಲ್ಲಿ ಅನುದಾನವನ್ನು ಶೇ. 40 ರಷ್ಟು ವಿದ್ಯಾರ್ಥಿಗಳಿಗೆ ಮಾತ್ರ ಸೀಮಿತಗೊಳಿಸಲಾಗುವುದು.
    ಈ. ಮೇಲ್ಕಂಡಂತೆ ಲೆಕ್ಕ ಮಾಡಲಾದ ಅನುದಾನವನ್ನು ಕೈಗಾರಿಕಾ ತರಬೇತಿ ಕೇಂದ್ರಕ್ಕೆ ಪಾವತಿಸುವುದೇ ಹೊರತು ವಿದ್ಯಾರ್ಥಿಗಳಿಗಲ್ಲ.

ಮೇಲಿನ ಯೋಜನೆಗಳಿಗನುಸಾರ ಇಲಾಖೆಯ ವೇತನಾನುದಾನ ಸಂಹಿತೆಯನ್ನು ಮರು ಪರಿಶೀಲಿಸಿ ಪರಿಷ್ಕೃತ ಕೋಡ್ ಸಿದ್ದಪಡಿಸಿ ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ ಇವರು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

ಈ ಆದೇಶವನ್ನು ಯೋಜನಾ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ ಪಿಡಿ 39 ಎಂ ಅಂಡ್ ಇ 2010 ದಿನಾಂಕ 22/05/2010 ಹಾಗೂ ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ 292 ವೆಚ್ಚ –9/2010 ಆರ್.ಎಫ್. 42443, ದಿನಾಂಕ 09/06/2010 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
(ಎ.ಎಸ್. ವಿಶ್ವೇಶ್ವರಯ್ಯ)
ಪೀಠಾಧಿಕಾರಿ,
ಕಾರ್ಮಿಕ ಇಲಾಖೆ (ಉದ್ಯೋಗ ಮತ್ತು ತರಬೇತಿ)

ಅರ್ಜಿ ನಮೂನೆ

ವಿದ್ಯಾರ್ಥಿ ಕೇಂದ್ರೀಕೃತ ಅನುದಾನ ಪಡೆಯಲು ಸಲ್ಲಿಸುವ ವಿವರ

ಕ್ರಮ ಸಂಖ್ಯೆ	ವಿವರ	
1	ಕೈಗಾರಿಕಾ ತರಬೇತಿ ಕೇಂದ್ರದ ಹೆಸರು ಮತ್ತು ವಿಳಾಸ (ದೂರವಾಣಿ ಸಂಖ್ಯೆ) ಇ ಮೇಲ್ ವಿಳಾಸ	
2	ಆಡಳಿತ ಮಂಡಳಿಯ ಹೆಸರು ಮತ್ತು ವಿಳಾಸ (ದೂರವಾಣಿ ಸಂಖ್ಯೆ)	
3	ಸಂಯೋಜನಾ ವಿವರಗಳು	
4	ಪ್ರವೇಶಾತಿ ವಿವರ ಪ್ರವೇಶ ಪಡೆದ ವಿವರಗಳು: ಎಸ್.ಸಿ., ಎಸ್.ಟಿ., ಮಹಿಳಾ, ಇತರೆ ಮತ್ತು ಅಂಗವಿಕಲ	
5	ವಿಭಾಗೀಯ ಕಛೇರಿಯಿಂದ ಅನುಮೋದನೆ ಪಡೆದ ಪ್ರವೇಶ ಪಟ್ಟಿಯ ವಿವರಗಳು	

6	ಸಿಬ್ಬಂದಿ ವಿವರ (ತಾಂತ್ರಿಕ ಮತ್ತು ತಾಂತ್ರಿಕೇತರ)	
7	ಕೈಗಾರಿಕಾ ತರಬೇತಿ ಕೇಂದ್ರದ ಕಟ್ಟಡದ ಬಗ್ಗೆ ವಿವರ : ವೃತ್ತಿ/ಘಟಕವಾರು ವಿಸ್ತೀರ್ಣ ಚ.ಮೀ. ಗಳಲ್ಲಿ	<table><tr><td>ಕ್ರ.ಸಂ.</td><td>ವೃತ್ತಿ</td><td>ಕೊಠಡಿ</td><td>ವಿಸ್ತೀರ್ಣ (ಚ.ಮೀ.)</td></tr><tr><td>1</td><td></td><td></td><td></td></tr><tr><td>2</td><td></td><td></td><td></td></tr><tr><td>3</td><td></td><td></td><td></td></tr><tr><td>4</td><td></td><td></td><td></td></tr></table>
8	ವಿದ್ಯುಚ್ಛಕ್ತಿ ವಿವರ	
9	ಯಂತ್ರೋಪಕರಣ ಮತ್ತು ಪೀಠೋಪಕರಣಗಳ ವಿವರ	
10	ಅಖಿಲ ಭಾರತ ವೃತ್ತಿ ಪರೀಕ್ಷಾ ವಿವರ ಆಗಸ್ಟ್ 2007 ಆಗಸ್ಟ್ 2008 ಆಗಸ್ಟ್ 2009	
11	ವಾರ್ಷಿಕ ಪರಿವೀಕ್ಷಣಾ ಶುಲ್ಕದ ವಿವರ	

ಆಡಳಿತ ಮಂಡಳಿಯ ಅಧ್ಯಕ್ಷರು/ಕಾರ್ಯದರ್ಶಿ ಪ್ರಾಚಾರ್ಯರು

ಪಿ.ಆರ್. 2319

ಕಂದಾಯ ಸಚಿವಾಲಯ

ವಿಷಯ : ಆಸರೆ ಯೋಜನೆ ಮನೆಗಳ ನಿರ್ಮಾಣಕ್ಕಾಗಿ ಲೆಕ್ಕ ಶೀರ್ಷಿಕೆ 8235–00–111–0–02 "Public Contributions to Calamity Relief" ಅಡಿಯಲ್ಲಿ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ ಇವರಿಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ : ಮಾನ್ಯ ಮುಖ್ಯಮಂತ್ರಿಯವರ ಕಾರ್ಯದರ್ಶಿಯವರ ಟಿಪ್ಪಣಿ ಸಂಖ್ಯೆ: ಮುಮಕಾ/4762/2010, ದಿನಾಂಕ: 2–8–2010.

ಪ್ರಸ್ತಾವನೆ:

ಮೇಲೆ ಓದಲಾದ ಮುಖ್ಯಮಂತ್ರಿಗಳ ಕಾರ್ಯಾಲಯದ ದಿನಾಂಕ: 2–8–2010ರ ಟಿಪ್ಪಣಿಯಲ್ಲಿ ರೂ.5000/– ಲಕ್ಷಗಳನ್ನು ಬಿಡುಗಡೆ ಮಾಡುವಂತೆ ಆದೇಶಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರವು ಆದೇಶ ಸಂಖ್ಯೆ : ಕಂಇ 174 ಟಿಎನ್‌ಆರ್ 2010 ಬೆಂಗಳೂರು, ದಿನಾಂಕ: 11–8–2010.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಆಸರೆ ಯೋಜನೆ ಅಡಿಯಲ್ಲಿ ನೆರೆ ಪೀಡಿತ ಜಿಲ್ಲೆಗಳಲ್ಲಿ ಮನೆಗಳನ್ನು ನಿರ್ಮಾಣ ಮಾಡಲು ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ, ಬೆಂಗಳೂರು ಇವರಿಗೆ ರೂ.5000–00 ಲಕ್ಷಗಳನ್ನು (ರೂ. ಐದು ಸಾವಿರ ಲಕ್ಷಗಳು ಮಾತ್ರ) ಲೆಕ್ಕ ಶೀರ್ಷಿಕೆ 8235–00–111–0–02 "Public Contributions to Calamity Relief" ಅಡಿಯಲ್ಲಿ ಬಿಡುಗಡೆ ಮಾಡಲು ಮಂಜೂರಾತಿ ನೀಡಿದೆ.

ಮೇಲಿನಂತೆ ಬಿಡುಗಡೆ ಮಾಡಿರುವ ಅನುದಾನವನ್ನು ಸಂಸ್ಥೆಯ ಮುಖ್ಯಸ್ಥರು, ಅನುದಾನದ ಬಿಲ್ (payees Receipt) ತಯಾರಿಸಿ, ಸರ್ಕಾರದ ಕಾರ್ಯದರ್ಶಿಗಳು (ವಿಪತ್ತು ನಿರ್ವಹಣೆ), ಕಂದಾಯ ಇಲಾಖೆ ಇವರಿಂದ ಮೇಲು ಸಹಿ ಪಡೆದು ಖಜಾನೆಯಿಂದ ಡ್ರಾ ಮಾಡಲು ಸೂಚಿಸಿದೆ.

ಅನುದಾನವನ್ನು ಬಿಡುಗಡೆ ಮಡಲಾದ ಉದ್ದೇಶಕ್ಕಾಗಿಯೇ ಉಪಯೋಗಿಸತಕ್ಕದ್ದು ಹಾಗೂ ಅನುದಾನದ ವೆಚ್ಚ ಮಾಡಿದ್ದಕ್ಕೆ ಉಪಯೋಗಿತ ಪ್ರಮಾಣಪತ್ರ ಸಲ್ಲಿಸುವುದು.

ಈ ಆದೇಶವನ್ನು ಮುಖ್ಯಮಂತ್ರಿಯವರ ಕಾರ್ಯದರ್ಶಿಯವರ ಟಿಪ್ಪಣಿ ಸಂಖ್ಯೆ: ಮುಮಕಾ/4762/2010 ದಿನಾಂಕ:2–8–2010ರ ಆದೇಶದ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಟಿ. ಗಂಗಾಧರ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ. (ವಿ, ನಿ & **ಸೇವೆಗಳು–2**)

ಪಿ.ಆರ್ 2248

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವಾಲಯ

ವಿಷಯ : ಕನ್ನಡ ಭವನದ ಕದಂಬ/ಚಾಲುಕ್ಯ ವಿಭಾಗಗಳ ಹಾಗೂ ರವೀಂದ್ರ ಕಲಾಕ್ಷೇತ್ರಕ್ಕೆ ಹೊಂದಿಕೊಂಡಂತೆ ಭದ್ರತಾ ರಕ್ಷಕರ ಸೇವೆಯನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ ಕಸಂವಾಪ್ರ 227 ಕಸನಿ 2007, ದಿನಾಂಕ 14.03.2008
2. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಇವರ ದಿನಾಂಕ 22.4.2010ರಂದು ಕೊನೆಗೊಂಡ ಪತ್ರ ಸಂಖ್ಯೆ ಕಸನಿ 12 ಕಭಗುಸೇ: 2009–10

ಪ್ರಸ್ತಾವನೆ:

ಕನ್ನಡ ಭವನದ ಕದಂಬ/ಚಾಲುಕ್ಯ ವಿಭಾಗಗಳ ಹಾಗೂ ರವೀಂದ್ರ ಕಲಾಕ್ಷೇತ್ರಕ್ಕೆ ಹೊಂದಿಕೊಂಡಂತೆ ಇರುವ ಕಟ್ಟಡಗಳ ಭದ್ರತೆಗಾಗಿ ನೊಂದಾಯಿತ ಏಜೆನ್ಸಿಗಳಿಂದ ಹೊರಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿಗಳನ್ನು ದಿನಾಂಕ 20.09.2007ರಿಂದ 19.09.2008 ರವರೆಗೆ ಒಂದು ವರ್ಷದ ಅವಧಿಗೆ ಈ ಕೆಳಕಂಡ ಹುದ್ದೆಗೆ ನೇಮಕ ಮಾಡಲು ಮೇಲೆ (1) ರಲ್ಲಿ ಓದಲಾದ ಆದೇಶದಲ್ಲಿ ಮಂಜೂರಾತಿ ನೀಡಲಾಗಿದೆ.

ಕ್ರ.ಸಂ	ಹುದ್ದೆ	ಸಂಖ್ಯೆ
1	ಸೆಕ್ಯೂರಿಟಿ ಸೂಪರ್‌ವೈಸರ್	2
2	ಸೆಕ್ಯೂರಿಟಿ ಹೆಡ್ ಗಾರ್ಡ್	2
3	ಸೆಕ್ಯೂರಿಟಿ ಗಾರ್ಡ್	18
	ಒಟ್ಟು	22

ಈ ಮೇರೆಗೆ ಸದರಿ ಕಛೇರಿ ಹಾಗೂ ಕಟ್ಟಡಗಳ ಭದ್ರತೆಗಾಗಿ ಪಾರದರ್ಶಕತೆ ಅಧಿನಿಯಮ ಪ್ರಕಾರ ಟೆಂಡರ್ ಕರೆದು ಮೆII ಸುಪ್ರೀತ್ ಎಂಟರ್ ಪ್ರೈಸಸ್, ಬೆಂಗಳೂರು ಇವರ ಮುಖಾಂತರ ಹೊರಗುತ್ತಿಗೆ ಆಧಾರದ ಮೇಲೆ ಭದ್ರತಾ ಕಾರ್ಯವನ್ನು ನಿರ್ವಹಿಸಿರುವ ಪ್ರಯುಕ್ತ ಮಾರ್ಚ್ 2009ರಿಂದ ಆಗಸ್ಟ್ 2009 ರವರೆಗಿನ ಅವಧಿಗೆ ರೂ.5,35,993/–ನ್ನು ಪಾವತಿಸಲಾಗಿದೆ ಹಾಗೂ ಈ ಸಂಸ್ಥೆಯ ಗುತ್ತಿಗೆ ಅವಧಿ ದಿನಾಂಕ 19.09.2009ರಂದು ಮುಕ್ತಾಯಗೊಂಡಿರುವುದಾಗಿ ನಿದೇಶಕರು ತಿಳಿಸಿರುತ್ತಾರೆ.

ತದನಂತರ ಕನ್ನಡ ಭವನದ ವಿವಿಧ ಭಾಗಗಳಿಗೆ ಭದ್ರತಾ ರಕ್ಷಕರ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪಾರದರ್ಶಕ ನಿಯಮಗಳನ್ವಯ ಟೆಂಡರ್ ಕರೆದು ಮೆII ವಿಸ್‌ಡಂ ಸೆಕ್ಯೂರಿಟಿ ಸರ್ವಿಸಸ್, ಬೆಂಗಳೂರು ಇವರಿಗೆ 2(ಎರಡು) ಸೆಕ್ಯೂರಿಟಿ ಸೂಪರ್‌ವೈಸರ್, 2(ಎರಡು) ಸೆಕ್ಯೂರಿಟಿ ಹೆಡ್ ಗಾರ್ಡ್ ಹಾಗೂ 18 ಸೆಕ್ಯೂರಿಟಿ ಗಾರ್ಡ್ ಜೊತೆಗೆ ಕಲಾಗ್ರಾಮಕ್ಕೆ ಹೆಚ್ಚುವರಿಯಾಗಿ 3 ಸೆಕ್ಯೂರಿಟಿ ಗಾರ್ಡ್ ಸೇರಿದಂತೆ ಭದ್ರತೆಗಾಗಿ ನೇಮಿಸಿರುವ ಒಟ್ಟು 25 ಜನ ಸಿಬ್ಬಂದಿಗಳಿಗೆ ರಕ್ಷಣಾ ಕಾರ್ಯಕ್ಕೆ ಒಂದು ವರ್ಷದವರೆಗೆ ರೂ.13,10,554/–ಲಕ್ಷಗಳ ವೆಚ್ಚ ಬರಲಿದ್ದು ಸದರಿ ಹಣವನ್ನು 2010–11 ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ 4202–04–800–1–01–139 ಜಿಲ್ಲಾ ರಂಗಮಂದಿರ/ಕನ್ನಡ ಭವನ (ಯೋಜನೆ) ಅಡಿಯಲ್ಲಿ ಭರಿಸಬಹುದಾಗಿದೆ. ಆದ್ದರಿಂದ ಈ ಬಗ್ಗೆ ತೆಗೆದುಕೊಂಡ ಕ್ರಮದ ಕುರಿತು ಅನುಸಮರ್ಥನೆ ನೀಡಬೇಕೆಂದು ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರು ಮೇಲೆ (2) ರಲ್ಲಿ ಓದಲಾದ ಪತ್ರದಲ್ಲಿ ಕೋರಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರವು ಆದೇಶ ಸಂಖ್ಯೆ : ಸಂವಾಪ್ರ 87 ಕಸನಿ 2009 ಬೆಂಗಳೂರು, ದಿನಾಂಕ: 17–08–2010.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಕನ್ನಡ ಭವನದ ಕದಂಬ/ಚಾಲುಕ್ಯ ವಿಭಾಗಗಳ ಹಾಗೂ ರವೀಂದ್ರ ಕಲಾಕ್ಷೇತ್ರಕ್ಕೆ ಹಾಗೂ ಕಲಾಕ್ಷೇತ್ರದ ಕಟ್ಟಡಗಳ ಸುರಕ್ಷತೆ ಹಾಗೂ ಭದ್ರತೆಗಾಗಿ 25 ಜನ ಭದ್ರತಾ ರಕ್ಷಕರ

ಸೇವೆಯನ್ನು ಮೆII ವಿಸ್‌ಡಂ ಸೆಕ್ಯೂರಿಟಿ ಸರ್ವೀಸಸ್, ಬೆಂಗಳೂರು ಸಂಸ್ಥೆಯಿಂದ ಹೊರಗುತ್ತಿಗೆ ಆಧಾರದ ಮೇಲೆ ಒಂದು ವರ್ಷದ ಅವಧಿಗೆ (ದಿನಾಂಕ 20.09.2009ರಿಂದ 19.09.2010ರವರೆಗೆ) ನೇಮಕ ಮಾಡಿಕೊಂಡಿರುವುದಕ್ಕೆ ಅನುಸಮರ್ಥನೆ ನೀಡಲಾಗಿದೆ.

ಕನ್ನಡ ಭವನದ ಕದಂಬ/ಚಾಲುಕ್ಯ ವಿಭಾಗಗಳ ಹಾಗೂ ರವೀಂದ್ರ ಕಲಾಕ್ಷೇತ್ರ ಹಾಗೂ ಕಲಾಗ್ರಾಮದ ಭದ್ರತೆಗಾಗಿ 25 ಜನ ಭದ್ರತಾ ರಕ್ಷಕರ ಸೇವೆಗೆ ತಗಲುವ ವೆಚ್ಚ ರೂ.13,10,554/–(ಹದಿಮೂರು ಲಕ್ಷ ಹತ್ತು ಸಾವಿರದ ಐದುನೂರ ಐವತ್ತ ನಾಲ್ಕು ರೂಪಾಯಿಗಳು ಮಾತ್ರ) ಗಳನ್ನು ಮೆII ವಿಸ್‌ಡಂ ಸೆಕ್ಯೂರಿಟಿ ಸರ್ವೀಸಸ್, ಬೆಂಗಳೂರು ಸಂಸ್ಥೆಗೆ ಪಾವತಿಸಲು ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರಿಗೆ ಸರ್ಕಾರದ ಮಂಜೂರಾತಿ ನೀಡಿದೆ.

ಈ ವೆಚ್ಚವನ್ನು 2010–11ನೇ ಸಾಲಿನ ಲೆಕ್ಕಶೀರ್ಷಿಕೆ 4202–04–800–1–01–139 ಜಿಲ್ಲಾ ರಂಗಮಂದಿರ/ಕನ್ನಡ ಭವನ (ಯೋಜನೆ)ಯಡಿ ಭರಿಸತಕ್ಕದ್ದು ಹಾಗೂ ಹಣ ಬಳಕೆ ಪ್ರಮಾಣಪತ್ರವನ್ನು ಸಲ್ಲಿಸತಕ್ಕದ್ದು.

ಈ ಆದೇಶವನ್ನು ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಯ ಆಂತರಿಕ ಆರ್ಥಿಕ ಸಲಹೆಗಾರರು ಟಿಪ್ಪಣಿ ಸಂಖ್ಯೆ: ಶಿಇ 1440 ಐಎಫ್(ಬಿ&ಎ) 2010 ದಿನಾಂಕ 23.07.2010 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್ 2249

ಎಂ.ಕೆ ಧರ್ಮರಾಜಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ
ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು
ಪ್ರವಾಸೋದ್ಯಮ ಇಲಾಖೆ. (ಆಡಳಿತ ಕನ್ನಡ)

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಕರ್ನಾಟಕ ಲೋಕಸೇವಾ ಆಯೋಗದಿಂದ ನಡೆಸಲಾಗುವ ಇಲಾಖಾ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಶುಲ್ಕವನ್ನು ಪರಿಷ್ಕರಿಸುವ ಬಗ್ಗೆ.

ಓದಲಾಗಿದೆ : ಕರ್ನಾಟಕ ಲೋಕಸೇವಾ ಆಯೋಗದ ಪತ್ರ ಸಂಖ್ಯೆ: ಇ.ಪ.(1) 509/10–11 ಪಿಎಸ್‌ಸಿ ದಿನಾಂಕ: 10.05.2010

ಪ್ರಸ್ತಾವನೆ:

ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿರುವ ನೌಕರರಿಗೆ ಕರ್ನಾಟಕ ಲೋಕಸೇವಾ ಆಯೋಗ (ಸೇವಾ ಪರೀಕ್ಷೆ ನಡೆಸುವಿಕೆ) ನಿಯಮಗಳು, 1965 ರನ್ವಯ ಆಯೋಗವು ಇಲಾಖಾ ಪರೀಕ್ಷೆಗಳನ್ನು ನಡೆಸುತ್ತಿದ್ದು, ಈ ಸಂಬಂಧ ಸದರಿ ನಿಯಮಗಳ: ನಿಯಮ 6(1) ರ ಮೇರೆಗೆ ಅಭ್ಯರ್ಥಿಗಳಿಂದ ಶುಲ್ಕವನ್ನು ಪಡೆಯಲಾಗುತ್ತಿದೆ. ಪ್ರಸ್ತುತ ಆಯೋಗವು 2010ನೇ ಪ್ರಥಮ ಅಧಿವೇಶನದಿಂದ ಇಲಾಖಾ ಪರೀಕ್ಷೆಗಳಿಗೆ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಿ ಈ ಪರೀಕ್ಷೆಗೆ ತಗಲುವ ವೆಚ್ಚಗಳನ್ನು ಗಮನಿಸಿದಲ್ಲಿ ಅಭ್ಯರ್ಥಿಗಳಿಂದ ಪಡೆಯಲಾಗುತ್ತಿರುವ ಪರೀಕ್ಷಾ ಶುಲ್ಕವು ತೀರಾ ಕಡಿಮೆ ಎಂಬ ಅಂಶವನ್ನು ಮನಗಂಡು ಪರೀಕ್ಷಾ ಶುಲ್ಕ, ಅಂಕಗಳ ಮರುಎಣಿಕೆ ಶುಲ್ಕ ಇತ್ಯಾದಿ ಶುಲ್ಕಗಳನ್ನು ಈ ಕೆಳಕಂಡಂತೆ ಪರಿಷ್ಕರಿಸಿ ಆದೇಶ ಹೊರಡಿಸುವಂತೆ ಕೋರಿದೆ.

ಕ್ರ.ಸಂ	ವಿವರಣೆ	ಪರಿಷ್ಕರಿಸಬೇಕಾದ ಶುಲ್ಕ
1	ಒಂದು ಪತ್ರಿಕೆ ಇರುವ ವಿಷಯದ ಪರೀಕ್ಷಾ ಶುಲ್ಕ	ರೂ. 50.00
2	ಎರಡು ಪತ್ರಿಕೆ ಇರುವ ವಿಷಯದ ಪರೀಕ್ಷಾ ಶುಲ್ಕ	ರೂ. 100–00
3	ಎರಡಕ್ಕಿಂತ ಹೆಚ್ಚಿಗೆ ಪತ್ರಿಕೆ ಇರುವ ವಿಷಯದ ಪರೀಕ್ಷಾ ಶುಲ್ಕ	ರೂ. 100.00
4	ಅಂಕಗಳ ಮರು ಎಣಿಕೆಯ ಪ್ರತಿ ವಿಷಯಕ್ಕೆ	ರೂ. 100.00
5	ನಕಲು ಪ್ರಮಾಣ ಪತ್ರ ಪ್ರತಿ ವಿಷಯಕ್ಕೆ	ರೂ. 100.00

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

ಆದೇಶ

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 6 ಸೇಲೋಸೇ 2010, ಬೆಂಗಳೂರು, ದಿನಾಂಕ: 06.08.2010

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಸೇವಾ ಆಯೋಗ (ಸೇವಾ ಪರೀಕ್ಷಾ ನಡೆಸುವಿಕೆ) ನಿಯಮಗಳು, 1965ರ ನಿಯಮ 6(1)ರಡಿಯಲ್ಲಿ ಇಲಾಖಾ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ವಿವಿಧ ಶುಲ್ಕಗಳ ದರಗಳನ್ನು ನಿಗದಿಪಡಿಸಲು ಸರ್ಕಾರವು ಅನುಮೋದನೆ ನೀಡಿರುತ್ತದೆ.

ಕ್ರಮ ಸಂಖ್ಯೆ	ವಿವರ	ಪರಿಷ್ಕರಿಸಲು ಸಹಮತಿಸಿದ ಶುಲ್ಕ
1.	ಒಂದು ಪತ್ರಿಕೆ ಇರುವ ವಿಷಯದ ಪರೀಕ್ಷಾ ಶುಲ್ಕ	ರೂ. 50–00
2.	ಎರಡು ಪತ್ರಿಕೆ ಇರುವ ವಿಷಯದ ಪರೀಕ್ಷಾ ಶುಲ್ಕ	ರೂ. 100–00
3.	ಎರಡಕ್ಕಿಂತ ಹೆಚ್ಚಿಗೆ ಪತ್ರಿಕೆ ಇರುವ ವಿಷಯದ ಪರೀಕ್ಷಾ ಶುಲ್ಕ	ರೂ. 100–00
4.	ಅಂಕಗಳ ಮರು ಎಣಿಕೆ ಶುಲ್ಕ–ಪ್ರತಿ ವಿಷಯಕ್ಕೆ	ರೂ. 100–00
5.	ನಕಲು ಪ್ರಮಾಣ ಪತ್ರ–ಪ್ರತಿ ವಿಷಯಕ್ಕೆ	ರೂ. 100–00

ಈ ಆದೇಶವನ್ನು ಆರ್ಥಿಕ ಇಲಾಖೆಯ ಅ.ಟಿ. ಸಂಖ್ಯೆ: ಆಇ 558 ವೆಚ್ಚ–12/10 ದಿನಾಂಕ: 24.07.2010ರಲ್ಲಿ ನೀಡಿದ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ದೇವರಾಜು

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ.

(ಸೇವಾ ನಿಯಮಗಳು–1)

ಪಿ.ಆರ್ 2250

ವಸತಿ ಸಚಿವಾಲಯ

ವಿಷಯ : ಬೊಮ್ಮನಹಳ್ಳಿ ನಗರ ಆಶ್ರಯ ಸಮಿತಿಗೆ ಅಧಿಕಾರೇತರ ಸದಸ್ಯರ ನೇಮಕಾತಿ ಬಗ್ಗೆ.

ಓದಲಾಗಿದೆ : 1. ಸರ್ಕಾರದ ಆದೇಶ ಸಂ.ವಇ/42/ಹೆಚ್ಎಎಂ/ 1999, ದಿನಾಂಕ: 10.05.2000.

2. ಸರ್ಕಾರದ ಆದೇಶ ಸಂ.ವಇ/18/ಹೆಚ್ಎಎಸ್/2008,ದಿನಾಂಕ: 16.09.2009.

ಪ್ರಸ್ತಾವನೆ:

ಸರ್ಕಾರವು ನಗರ ಆಶ್ರಯ ಸಮಿತಿಗಳನ್ನು ಮೇಲೆ (1)ರಲ್ಲಿ ಓದಲಾದ ಆದೇಶದನ್ವಯ ಮತ್ತು ಮೇಲೆ (2) ರಲ್ಲಿ ಓದಲಾದ ಆದೇಶವನ್ನು ಮುಂದುವರೆಸುತ್ತಾ, ಬೊಮ್ಮನಹಳ್ಳಿ ನಗರ ಆಶ್ರಯ ಸಮಿತಿಗೆ ಅಧಿಕಾರೇತರ ಸದಸ್ಯರನ್ನು ನೇಮಿಸುವ ಬಗ್ಗೆ ಪರಿಶೀಲಿಸಿ, ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂ. ವಇ 50 ಹೆಚ್ಎಎಸ್ 2010(ಪಿ2), ಬೆಂಗಳೂರು, ದಿನಾಂಕ 23 ನೇ ಆಗಸ್ಟ್ 2010

ಬೊಮ್ಮನಹಳ್ಳಿ ನಗರ ಆಶ್ರಯ ಸಮಿತಿಗೆ ಈ ಕೆಳಕಂಡವರನ್ನು ಅಧಿಕಾರೇತರ ಸದಸ್ಯರನ್ನಾಗಿ ನೇಮಿಸಿ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಆಶ್ರಯ ಸಮಿತಿಯನ್ನು ಪುನರ್ರಚಿಸಲಾಗಿದೆ.

	ಅಭ್ಯರ್ಥಿಯ ಹೆಸರು	ವರ್ಗ
1	ಶ್ರೀ ಎ. ರಘು ಬಿನ್ ಅಬ್ಬಯ್ಯ ರೆಡ್ಡಿ, ನಂ 10, ಶಂಕರ್‌ನಾಗ್ ರಸ್ತೆ, ವಿರಾಟನಗರ, ಬೊಮ್ಮನಹಳ್ಳಿ, ಬೆಂಗಳೂರು–68	ಸಾಮಾನ್ಯ
2	ಶ್ರೀ ಬಿ.ಎಂ. ಮುಕುಂದ ಬಿನ್ ಮುನಿಸ್ವಾಮಿರಾಜು, ಸೋಮೇಶ್ವರ ಸ್ಟ್ರೀಟ್, ಬಿಳೇಕಹಳ್ಳಿ, ಬನ್ನೇರುಘಟ್ಟ ರಸ್ತೆ, ಬೆಂಗಳೂರು–76.	ಹಿಂದುಳಿದ ವರ್ಗ
3	ಶ್ರೀ ಜಿ.ಆರ್ ಜೋಸೆಫ್, ಬಿನ್ ಲೇಟ್ ರಾಜು ಎ., ನಂ.189, ದೊರೆಸಾನಿಪಾಳ್ಯ, ಬನ್ನೇರುಘಟ್ಟ ರಸ್ತೆ, ಬೆಂಗಳೂರು–76	ಅಲ್ಪಸಂಖ್ಯಾತರು
4	ಶ್ರೀಮತಿ ಸರಸ್ವತಿ ಎಂ., ಕೋಂ ನಂಜಪ್ಪ ಎಸ್.ನಂ.110/2, ಮೈಲಾರಲಿಂಗೇಶ್ವರ ನಿಲಯ, ನೀಲಕಂಠೇಶ್ವರ ಬಡಾವಣೆ, ಮಂಗಮ್ಮನಪಾಳ್ಯ, ಬೆಂಗಳೂರು–68.	ಪರಿಶಿಷ್ಟ ಜಾತಿ (ಮಹಿಳೆ)

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್ 2251

ಕೆ.ಆರ್.ವಲ್ಲೂರ

ಪೀಠಾಧಿಕಾರಿ–2 ವಸತಿ ಇಲಾಖೆ